"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತೈದನೆಯ ಅಧಿವೇಶನ

## ವಿಷಯಾನುಕ್ರಮಣಿಕೆ (Index)

ದಿನಾಂಕ:17ನೇ ಡಿಸೆಂಬರ್ 2021
ಶುಕ್ರವಾರ


**1. ಪ್ರಶ್ನೋತ್ತರಗಳು**
**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**659-ಅರಣ್ಯ ಹಕ್ಕು ಕಾಯ್ದೆ 2006ರ ಅಡಿ ಈವರೆಗೆ ನೀಡಿರುವ ಹಕ್ಕು ಪತ್ರಗಳ ಬಗ್ಗೆ**
-ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಪರವಾಗಿ)

**600-ದೇವರಾಜ ಅರಸು ಸಂಶೋಧನಾ ಸಂಸ್ಥೆಯನ್ನು ಮುಚ್ಚುತ್ತಿರುವ ಬಗ್ಗೆ**
-ಶ್ರೀ ಬಿ.ಕೆ.ಹರಿಪ್ರಸಾದ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಹಾಗೂ ಸಭಾನಾಯಕರು)

**700-ಕಲ್ಯಾಣ ಕರ್ನಾಟಕದ ಭಾಗದಲ್ಲಿ ಪಿ.ಡಿ.ಓ. ಮತ್ತು ಗ್ರಾಮ ಲೆಕ್ಕಿಗರ ಕುರಿತು**
-ಡಾ: ತಳವಾರ್ ಸಾಬಣ್ಣ
-ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

**590-ಗ್ರಾಮೀಣ ಕುಡಿಯುವ ನೀರಿನ ಯೋಜನೆಯ ಕುರಿತು**
-ಶ್ರೀ ಎನ್.ರವಿಕುಮಾರ್
-ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

**565-ಕೊಡಗು ಜಿಲ್ಲೆಯಲ್ಲಿ ಕ್ರೀಡಾ ವಿಶ್ವವಿದ್ಯಾಲಯ ಸ್ಥಾಪನೆ ಕುರಿತು**
-ಶ್ರೀಮತಿ ಎಸ್.ವೀಣಾ ಅಚ್ಚಯ್ಯ
-ಡಾ: ಕೆ.ಸಿ.ನಾರಾಯಣಗೌಡ(ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು)

**671-ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಕಾರ್ಯದರ್ಶಿಗಳ ಹುದ್ದೆಗಳ ಬಗ್ಗೆ**
-ಶ್ರೀ ಕೆ.ಹರೀಶ್ ಕುಮಾರ್
-ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)


"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**655-ಭೂ ಒಡೆತನ ಯೋಜನೆ ಅನುಷ್ಠಾನದ ಬಗ್ಗೆ**

-ಡಾ: ವೈ.ಎ.ನಾರಾಯಣಸ್ವಾಮಿ

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಹಾಗೂ ಸಭಾನಾಯಕರು)

**683-ಬೀದರ್ ಜಿಲ್ಲೆಯ ಹುಲಸೂರು ತಾಲ್ಲೂಕಿನ ಕೆಲವು ಹಳ್ಳಿಗಳಿಗೆ ಬಸ್ ಸೌಲಭ್ಯದ ಬಗ್ಗೆ**

-ಶ್ರೀ ವಿಜಯ ಸಿಂಗ್

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಪರವಾಗಿ)

**694-ರಾಜ್ಯದಲ್ಲಿರುವ ಹಾಸ್ಟೆಲ್‌ಗಳು, ವಸತಿ ಶಾಲೆಗಳು, ಆಶ್ರಮ ಶಾಲೆಗಳ ವಿವರ ಕುರಿತು**

-ಶ್ರೀಮತಿ ಭಾರತಿ ಶೆಟ್ಟಿ

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಹಾಗೂ ಸಭಾನಾಯಕರು)

**616-ಭಿಕ್ಷಾಟನೆಯ ಹೆಸರಿನಲ್ಲಿ ಅಕ್ರಮ ಚಟುವಟಿಕೆ ನಡೆಯುತ್ತಿರುವ ಬಗ್ಗೆ**

-ಶ್ರೀ ಗೋವಿಂದ ರಾಜು

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಹಾಗೂ ಸಭಾನಾಯಕರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಿದ ಉತ್ತರಗಳು**

**2.ಮಾನ್ಯ ಸದಸ್ಯರ ಸಮಕ್ಷಮದಲ್ಲಿಯೇ ಬುಲೆಟಿನ್(bulletin) ಪ್ರಕ್ರಿಯೆ ನಡೆಸಬೇಕು ಎನ್ನುವ ಬಗ್ಗೆ.**

**-ಶ್ರೀ ಸಿ.ಎಂ.ಇಬ್ರಾಹಿಂ**

**-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**

**3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ಖಾಸಗಿ ವಿದ್ಯುತ್ ಕಂಪನಿಗೆ ನೀರು ಒದಗಿಸುವ ಉದ್ದೇಶದಿಂದ ಕರ್ನಾಟಕ ನೀರಾವರಿ ನಿಗಮ ಬೇರೆ ಬೇರೆ ಕಾರಣಗಳನ್ನು ನೀಡಿ ರೈತರ ನೀರಾವರಿ ಕಾಲುವೆಗೆ ನೀರು ಹರಿಸದೇ ಇರುವ ಬಗ್ಗೆ.**

-ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಆ) ಸುಮಾರು 5,000 ಅತಿಥಿ ಉಪನ್ಯಾಸಕರು ತಮ್ಮ ಸೇವಾ ಭದ್ರತೆಗಾಗಿ ಅನಿರ್ದಿಷ್ಟಾವಧಿಯ ಧರಣಿ ಆರಂಭಿಸಿರುವ ಬಗ್ಗೆ.**

-ಶ್ರೀ ಕೆ.ಟಿ.ಶ್ರೀಕಂಠೇಗೌಡ

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

**ಇ) ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಎಲ್ಲ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಲು ಒತ್ತಾಯಿಸಿ ಕಳೆದ 6-7 ದಿನಗಳಿಂದ ನಡೆಸುತ್ತಿರುವ ಧರಣಿ ಸತ್ಯಾಗ್ರಹ ಕುರಿತು.**

-ಶ್ರೀ ಎಸ್.ವ್ಹಿ.ಸಂಕನೂರ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಈ) ಕೋವಿಡ್-19ನಿಂದ ಮೃತರಾದ ವ್ಯಕ್ತಿಗಳ ಕುಟುಂಬಸ್ಥರು ಪರಿಹಾರಕ್ಕಾಗಿ ಕಠಿಣ ಮಾರ್ಗಸೂಚಿಗಳಿಂದ ಅರ್ಜಿ ಸಲ್ಲಿಸಲು ತೊಂದರೆಯಾಗಿರುವ ಬಗ್ಗೆ.**

-ಶ್ರೀ ಯು.ಬಿ.ವೆಂಕಟೇಶ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಉ) ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ಹೆಚ್ಚುವರಿಯಾಗಿ 150 ಕೋಟಿ ವಿಶೇಷ ಅನುದಾನ ಬಿಡುಗಡೆ ಕುರಿತು.**

-ಡಾ: ತಳವಾರ್ ಸಾಬಣ್ಣ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಊ) ಎಸ್.ಸಿ./ಎಸ್.ಟಿ. ಬಡ್ತಿಯಲ್ಲಿ ಮೀಸಲಾತಿ ಮತ್ತು ಜ್ಯೇಷ್ಠತೆ ಸಂರಕ್ಷಣೆ ವಿಚಾರದಲ್ಲಿ ಅಧಿಕಾರಿಗಳು ಮೀಸಲಾತಿ ವಿರೋಧಿ ನೀತಿ ಅನುಸರಿಸುತ್ತಿರುವುದರ ಬಗ್ಗೆ.**

-ಶ್ರೀ ಆರ್.ಬಿ.ತಿಮ್ಮಾಪೂರ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**4. ವಿತ್ತೀಯ ಕಾರ್ಯಕಲಾಪಗಳು**

**5. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**ವಿಷಯ: “ಕರ್ನಾಟಕ ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದ ಕೆಲವು ಪ್ರಮುಖ ನೀರಾವರಿ ಯೋಜನೆಗಳ ಅನುಷ್ಠಾನದ ಬಗ್ಗೆ.”**

-ಶ್ರೀ ಕೆ.ಟಿ.ಶ್ರೀಕಂಠೇಗೌಡ

(ನಿಯಮ 68ಕ್ಕೆ ಪರಿವರ್ತಿಸಲಾಯಿತು)

**6. ಹಕ್ಕುಚ್ಯುತಿ ಪ್ರಸ್ತಾವ**

**“ದಿನಾಂಕ 16.12.2021ರಂದು ಸರ್ಕಾರದ ವೈಫಲ್ಯಗಳನ್ನು ವಿರೋಧಿಸಿ ಪ್ರತಿಭಟನೆ ನಡೆಸಿ ರಾಣಿ ಚನ್ನಮ್ಮ ವೃತ್ತದಿಂದ ಸುವರ್ಣ ಸೌಧದವರೆಗೆ ಟ್ರಾಕ್ಟರ್ ಮೂಲಕ ಬರುವಾಗ ಸುವರ್ಣಸೌಧದ ಬಳಿ ಮಾನ್ಯ ವಿರೋಧ ಪಕ್ಷದ ನಾಯಕರು ಸೇರಿದಂತೆ ಎಲ್ಲರನ್ನೂ ಪೊಲೀಸ್ ಅಧಿಕಾರಿಗಳಾದ ಶ್ರೀ ತ್ಯಾಗರಾಜನ್ ಮತ್ತು ಶ್ರೀ ಸತೀಶ್ ಕುಮಾರ್ ಇವರುಗಳು ತಡೆಗಟ್ಟಿರುವ ಬಗ್ಗೆ.”**

-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
-ಶ್ರೀ ಪ್ರಕಾಶ್ ಕೆ.ರಾಥೋಡ್
-ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
-ಡಾ: ಕೆ.ಸಿ.ನಾರಾಯಣಗೌಡ(ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು)

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

-ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
-ಶ್ರೀ ಬಿ.ಕೆ.ಹರಿಪ್ರಸಾದ್
-ಶ್ರೀ ಎನ್.ರವಿಕುಮಾರ್
-ಶ್ರೀ ನಸೀರ್ ಅಹ್ಮದ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
-ಡಾ: ತೇಜಸ್ವಿನಿ ಗೌಡ
-ಶ್ರೀ ಮರಿತಿಬ್ಬೇಗೌಡ
-ಶ್ರೀ ಪಿ.ಆರ್.ರಮೇಶ್

**7. <u>ಖಾಸಗಿ ಸದಸ್ಯರ ಕಾರ್ಯಕಲಾಪ</u>**

**ಖಾಸಗಿ ನಿರ್ಣಯದ ಮೇಲಿನ ಚರ್ಚೆ**

**ವಿಷಯ: "ದೇಸೀಯ ಪರಂಪರೆಯ ಆಯುರ್ವೇದ ವೈದ್ಯ ಪದ್ಧತಿಗೆ ಮನ್ನಣೆ ದೊರಕಿಸಿಕೊಡುವ ಸಲುವಾಗಿ ನೀತಿಯೊಂದನ್ನು ರೂಪಿಸುವ ಕುರಿತು."**

-ಶ್ರೀ ಯು.ಬಿ.ವೆಂಕಟೇಶ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**8. ನಿಯಮ 68ರ ಮೇರೆಗೆ ಮುಂದುವರೆದ ಚರ್ಚೆ**

**ವಿಷಯ: "ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಪ್ರವಾಹ ಮತ್ತು ಅತಿವೃಷ್ಟಿಯಿಂದ ರೈತರ ಬೆಳೆಗಳು ನಾಶವಾಗಿ, ಜಾನುವಾರುಗಳ ಪ್ರಾಣ ಹಾನಿಯಾಗಿ ಸಾರ್ವಜನಿಕ ಆಸ್ತಿಗಳಿಗೆ ಧಕ್ಕೆ ಉಂಟಾಗಿರುವ ಸಮಸ್ಯೆಗಳ ಕುರಿತು.**

-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
-ಶ್ರೀ ಎನ್.ರವಿಕುಮಾರ್
-ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
-ಶ್ರೀ ಯು.ಬಿ.ವೆಂಕಟೇಶ್
-ಶ್ರೀ ಬಿ.ಕೆ.ಹರಿಪ್ರಸಾದ್
-ಡಾ: ತೇಜಸ್ವಿನಿ ಗೌಡ

~ ~~ ~~ ~~ ~~ ~

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1137)17-12-2021(11-10)bsd-ak

**ಕರ್ನಾಟಕ ವಿಧಾನ ಪರಿಷತ್ತು**

**ಶುಕ್ರವಾರ, 17ನೇ ಡಿಸೆಂಬರ್ 2021**

**ಸದನವು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆ 12 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಈಗ ಪ್ರಶ್ನೋತ್ತರಗಳು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಹಕ್ಕುಚ್ಯುತಿ ಮಂಡನೆಗೆ ನಾನು ಒಂದು notice ಕೊಟ್ಟಿದ್ದೆನು.

**Mr. CHAIRMAN:-** Question Hour ಮುಕ್ತಾಯವಾಗಲಿ.

**ಶ್ರೀ ಎಸ್.ಆರ್. ಪಾಟೀಲ್:-** ಅದನ್ನು ಓದಿ ಹೇಳುತ್ತೇನೆ.

**01. <u>ಪ್ರಶ್ನೋತ್ತರಗಳು</u>**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**Mr. CHAIRMAN:-** Question Hour ಮುಗಿಯಲಿ, ನಂತರ ತೆಗೆದುಕೊಳ್ಳೋಣ. ಶ್ರೀ ಪ್ರತಾಪಸಿಂಹ ನಾಯಕ್ ರವರು ಇಲ್ಲ, ನಂತರ ಶ್ರೀ ಶಾಂತರಾಮ್ ರವರು ಪ್ರಶ್ನೆ ಕೇಳಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಪ್ರಶ್ನೆ ಸಂಖ್ಯೆ: 659**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಶಾಂತರಾಮ್ ಬುಡ್ನ ಸಿದ್ದಿ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದು, ಉತ್ತರದ ಪ್ರತಿ ಈಗಷ್ಟೇ ಸಿಕ್ಕಿದ್ದರಿಂದ ಓದಲು ಆಗಲಿಲ್ಲ. ಸದ್ಯಕ್ಕೆ ಸರಿಯಿದೆ ಎಂದುಕೊಂಡು ಮಾನ್ಯ ಸಚಿವರಿಗೆ ಅಭಿನಂದನೆ ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬುಡಕಟ್ಟು ಜನಾಂಗದ ಬಗ್ಗೆ ಅರಣ್ಯ ಹಕ್ಕು ಕಾಯ್ದೆಯಲ್ಲಿರುವಂತಹ ಬಡವರ ಬಗ್ಗೆ ಹೇಳಿದ್ದಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರಿಗೆ ಸಮಾಧಾನವಾಗಿದ್ದು ಮಾನ್ಯ ಸಭಾನಾಯಕರಾದ ನಿಮಗೆ ಏಕೆ ಸಮಾಧಾನವಾಗಿಲ್ಲ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಬಹಳ ಸೂಕ್ಷ್ಮವಾದ ವಿಚಾರಗಳಿಗೆ ಸರಿಯಾದ ಉತ್ತರವನ್ನು ಕೊಟ್ಟಿದ್ದೇವೆ. ಆದಾಗ್ಯೂ ಅವರು ಹೆಚ್ಚುವರಿ ಕೇಳಿರುವುದಕ್ಕೆ ಒದಗಿಸುತ್ತೇವೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಪ್ರಶ್ನೆ ಸಂಖ್ಯೆ: 600**
**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಹಲವಾರು ನಿಗಮ ಮಂಡಳಿಗಳನ್ನು ಮಾಡಿದ್ದು, ಪ್ರಬಲವಾದ ಕೋಮುಗಳವರನ್ನು ನೇಮಕ ಮಾಡುವುದನ್ನು ನೋಡಿದ್ದೇವೆ. ಬಹಳ ಸಂತೋಷ. ಆದರೆ ಹಿಂದುಳಿದ ವರ್ಗಗಳ ಹಿತರಕ್ಷಣೆ ಮಾಡುವ ದೃಷ್ಟಿಯಿಂದ, ಹಿಂದುಳಿದ ವರ್ಗಗಳ ಮಹಾನ್ ನೇತಾರ ಮಾನ್ಯ ದೇವರಾಜ ಅರಸುರವರ ಸಂಸ್ಥೆಯ ಸ್ಥಿತಿಗತಿಗಳನ್ನು ನೋಡಿದಾಗ ಸರ್ಕಾರದ ಆಶಯಗಳ ಬಗ್ಗೆ ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಹಿಂದುಳಿದ ವರ್ಗಗಳು ಅಂದರೆ ಕರ್ನಾಟಕ ರಾಜ್ಯದ ಕಾಯಕ ಸಮಾಜವೆಂದು ಹೇಳುವ ೧೯೭ ಜಾತಿಗಳು ಇರುವ ಸಂಸ್ಥೆಗೆ ಕೊಟ್ಟಿರುವ ಹಣ ಯಾವ ಕೆಲಸಕ್ಕೂ ಬರುವುದಿಲ್ಲ. ರೂ.೨೫ ಲಕ್ಷಗಳ budget allocation ಅನ್ನು cancel ಮಾಡುವ ಸ್ಥಿತಿಯಲ್ಲಿದ್ದಾರೆ. ಕೋವಿಡ್ ಸ್ಥಿತಿಯಲ್ಲಿ ಸರಿಯಾಗಿ ವೆಚ್ಚ ಮಾಡದೇ ಇರುವ ಕಾರಣ ಈ ವರ್ಷ grant ನೀಡಬಾರದು ಎಂದು ತಡೆಹಿಡಿದಿರುವುದು ನಮ್ಮ ಗಮನದಲ್ಲಿದೆ. ಒಂದು ಕಡೆ ಪ್ರಬಲವಾದ ಜಾತಿಗಳಿಗೆ ಕರೆಯೇ ಇಲ್ಲದವರಿಗೆ ಯಥೇಚ್ಛವಾಗಿ ಸಹಾಯಧನ ಕೊಟ್ಟು, ದುರ್ಬಲ ವರ್ಗದವರಿಗೆ ಯಾವುದೇ ರೀತಿ ಸಹಾಯ ಮಾಡಲು ಸರ್ಕಾರ ಮುಂದೆ ಬರುತ್ತಿಲ್ಲ. ಆದ್ದರಿಂದ ದೇವರಾಜ ಅರಸ್‌ರವರ ಸಂಶೋಧನಾ ಸಂಸ್ಥೆಯನ್ನು ಮುಚ್ಚಬೇಕೆಂಬ ಹುನ್ನಾರ ನಡೆದಿದ್ದು, ಈ ಬಗ್ಗೆ ಪ್ರಜಾವಾಣಿ ದಿನ ಪತ್ರಿಕೆಯಲ್ಲಿ ಒಂದು article ಬಂದಿತ್ತು. ಆ ರೀತಿ ಸಂಸ್ಥೆಯನ್ನು ಮುಚ್ಚುವ ವಿಷಯ ಸರ್ಕಾರದಲ್ಲಿಯೇ ಎಂಬ ಬಗ್ಗೆ ಸ್ಪಷ್ಟವಾದ ಉತ್ತರ ನನಗೆ ಬೇಕಾಗಿದ್ದು, ಅದನ್ನು ಮುಂದೆ ನಡೆಸಿಕೊಂಡು ಹೋಗುತ್ತಾರೆಯೆ ಎಂಬ ಉತ್ತರ ನನಗೆ ಬೇಕಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ವಿಸ್ತೃತವಾದ ಪ್ರಶ್ನೆಯನ್ನು ಕೇಳಿದ್ದು, ಮೂಲ ಪ್ರಶ್ನೆಯಲ್ಲಿ ಶ್ರೀ ದೇವರಾಜ ಅರಸುರವರ ಸಂಸ್ಥೆಯನ್ನು ಮುಚ್ಚಲು ಸರ್ಕಾರ ಶಿಫಾರಸ್ಸು ಮಾಡಿದೆಯೇ ಎಂದು ಹೇಳಿದ್ದಾರೆ. ಅದಕ್ಕೆ ಉತ್ತರವನ್ನು ಕೊಟ್ಟಿದ್ದು, ನಂತರ ಅವರು ಕೆಲವು ಸಂದೇಹಗಳ ಬಗ್ಗೆ ಕೇಳಿದ್ದಾರೆ. ಈ ಸಂಸ್ಥೆ ಹಿಂದುಳಿದ ವರ್ಗಗಳ ಬಗ್ಗೆ ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳನ್ನು, ಕುಲಕಸುಬುಗಳ ಬಗ್ಗೆ ಅಧ್ಯಯನವನ್ನು, ಮಹಿಳೆಯರ ಸ್ವಯಂ ಉದ್ಯೋಗದ ಬಗ್ಗೆ ಯೋಜನೆಗಳಂತಹ ವಿಚಾರಗಳನ್ನು ಇಟ್ಟುಕೊಂಡು ಮಾಡಿರುವ ಸಂಸ್ಥೆಯಾಗಿದೆ. ಒಂದು ಸಾರಿ ಅದು ಪ್ರಸ್ತಾಪ ಆಗಿತ್ತು ಎಂದು ಮಾನ್ಯ ಸದಸ್ಯರು ಈ ಪ್ರಶ್ನೆ ಕೇಳಲು ಮೂಲವಾಗಿದೆ. ನಾನು ಸ್ಪಷ್ಟವಾದ ಶಬ್ದಗಳಲ್ಲಿ ಹೇಳುವುದೇನೆಂದರೆ, ಯಾವುದೇ ಕಾರಣಕ್ಕೂ ದೇವರಾಜ ಅರಸು ಸಂಶೋಧನಾ ಕೇಂದ್ರವನ್ನು ಮುಚ್ಚುವುದಿಲ್ಲ ಮತ್ತು ಅದನ್ನು ವ್ಯವಸ್ಥಿತವಾಗಿ ಮುನ್ನಡೆಸಲು ಸರ್ಕಾರ ಬದ್ಧವಾಗಿದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಸಭಾಪತಿಯವರು:-** ಸಬಲವಾಗಿ ಮಾಡುವ ಬಗ್ಗೆ ಹೇಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಧನ್ಯವಾದಗಳು, ಅದನ್ನು ಎಲ್ಲಿಯವರೆಗೆ ಮಾಡುವುದಕ್ಕೆ ಬಿಡುತ್ತಾರೆ ಎನ್ನುವುದು ಮುಖ್ಯ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಅವರ ಕಾಳಜಿಗೆ ಧನ್ಯವಾದಗಳು, ಆದರೆ ನಾನು ಮುಕ್ತವಾಗಿ ಕೆಲಸ ಮಾಡುತ್ತಿದ್ದೇನೆ. ಅವರಿಗೆ ಸಮಾಧಾನ ಮತ್ತು ಖುಷಿಯಾಗುವ ರೀತಿ ಕೆಲಸ ಮಾಡುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅದನ್ನು ಮಾಡುವಾಗ ಅವರನ್ನು ಎಲ್ಲಿ ಕೇಳುತ್ತಾರೆ? ಮಾನ್ಯ ನಾರಾಯಣಸ್ವಾಮಿಯವರು ನಿಗಮಗಳನ್ನು ಮಾಡುವಾಗ ಪ್ರಬಲ ಬೆಂಬಲವಾಗಿ ನಿಂತರು. ಆದರೆ ಕಟ್ಟಕಡೆಯ ಸಮುದಾಯದ ಬಗ್ಗೆ ಚಿಂತನೆ ಮಾಡಬೇಕು. ಮಾನ್ಯ ದೇವರಾಜ ಅರಸುರವರು ಮಹಾನ್ ನೇತಾರರು, ತಮಗೂ ನಮಗೂ ಬಹಳ ಚಿರಪರಿಚಿತರು, ತಾವು ಅವರ ಜೊತೆಯಿದ್ದವರು. ಇದರ ಬಗ್ಗೆ ಚಿಂತನೆ ಮಾಡಿ ಏನೇನು ಕಾರ್ಯಕ್ರಮಗಳನ್ನು ಮಾಡಬೇಕು ಮತ್ತು ಮೀಸಲಾತಿ ಕೊಡಬೇಕೆಂದು ಸಹ ಚಿಂತನೆ ಮಾಡಿದರು. ಸಂವಿಧಾನದ ಆಶಯ, ಅದರಲ್ಲೂ ಸಹ ಮೀಸಲಾತಿ ಎಂದರೆ the spirit of reservation employment exchange ಅಲ್ಲ ಅಥವಾ poverty alleviation programme ಅಲ್ಲ. ಸಮಾನವಾದ ಅವಕಾಶಗಳು ಸಿಗಬೇಕು ಎನ್ನುವ ಅವಕಾಶಕ್ಕಾಗಿ ಮೀಸಲಾತಿಯನ್ನು ತಂದವರು. ಆದ್ದರಿಂದ ದೇವರಾಜ ಅರಸ್ ನಿಗಮದ ಮೂಲಕ ಸರ್ಕಾರದಲ್ಲಿ ಯಾವುದಾದರೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆಯೇ? ೧೯೭ ಸಣ್ಣ ಜಾತಿಗಳಿಗೆ ಮೀಸಲಾತಿಯಲ್ಲಿ ಬಹಳಷ್ಟು ಅನ್ಯಾಯವಾಗಿದ್ದು, ಅವರಿಗೆ ನ್ಯಾಯ ಕೊಡಿಸಲು ಯಾವುದಾದರೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆಯೇ?

ಇನ್ನು ಎರಡನೆಯದಾಗಿ, ದೇವರಾಜ ಅರಸು ಹಿಂದುಳಿಗ ವರ್ಗದ Corporation ನಿಂದ car, ಸಣ್ಣ ಸಣ್ಣ ಉದ್ಯಮಗಳಿಗೆ ಸಾಲ ಕೊಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಇದರಲ್ಲಿ ನಿಜವಾದ ಫಲಾನುಭವಿಗಳಿಗೆ ತಲುಪುತ್ತಿಲ್ಲ. ಅವರದ್ದೇ ಆದ ಒಂದು caucus, ಅಂದರೆ ಒಂದು group ಮಾಡಿಕೊಂಡು ಬೇಕಾದವರಿಗೆ ಮಾತ್ರ ಸಾಲ ಕೊಡುತ್ತಿರುವುದನ್ನು ನೋಡಬಹುದು. ಬಹಳ ಮುಂದುವರೆದಿರುವವರು ಸಾಲ ತೆಗೆದುಕೊಂಡಿದ್ದಾರೆ. ಆದ್ದರಿಂದ streamline ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. E.W.S (Economically Weaker Section) ಗೂ ಮೀಸಲಾತಿ ಬಂದ ಮೇಲೆ ಕೆಲವು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಪ್ರಬಲ ಜಾತಿಗಳು ಇದರಲ್ಲಿ ಬರಬೇಕು ಎಂದು ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಇದನ್ನು ಯಾವ ರೀತಿ ಕಾಪಾಡುತ್ತಾರೆ ಎಂದು ಸದನದ ಮೂಲಕ ಸಾರ್ವಜನಿಕರಿಗೆ ತಿಳಿಸಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಹಲವಾರು ಜಾತಿಗಳು ಹಿಂದುಳಿದ ವರ್ಗಕ್ಕೆ ಸೇರಿಸಬೇಕು ಎನ್ನುವ ಒತ್ತಾಯಗಳು ವ್ಯವಸ್ಥೆಯಲ್ಲಿ ಬರುತ್ತಿರುವುದನ್ನು ಗಮನಿಸುತ್ತಿದ್ದೇವೆ, ಅದರಲ್ಲಿ ಗೊಂದಲ ಇಲ್ಲ. ಯಾವುದಾದರೂ ಸಮುದಾಯದವರು ಇಂತಹ ಜಾತಿಗೆ ಸೇರಿಸಿ ಎಂದು ಹೇಳಿದರೆ, ಪ್ರತಿಭಟನೆ ಮಾಡುವುದು ನಡೆಯುತ್ತಿದೆ. ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ. ಅದನ್ನು ಪರಿಶೀಲನೆ ಮಾಡುವ ಜವಾಬ್ದಾರಿ ಸರ್ಕಾರದ್ದಾಗಿದೆ. ದೇವರಾಜ ಅರಸು ನಿಗಮ ಮತ್ತು ಸಂಶೋಧನಾ ಕೇಂದ್ರವು ಸೇರಿದಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿರುವ ಬಡವರ ಕಲ್ಯಾಣ ಯೋಜನೆಗಳನ್ನು ಸಮಾಜದ ಕಟ್ಟಕಡೆಯ ಕಡು ಬಡವರನ್ನು ಆರಿಸಿ ಕೊಡುತ್ತಿದ್ದಾರೆಯೇ ಎಂಬ ಪ್ರಶ್ನೆ ಇದೆ. ವಾಸ್ತವಿಕವಾಗಿ ಹಲವಾರು ಯೋಜನೆಗಳಿದ್ದು, ಬೇರೆ ಬೇರೆ ಕಾರಣಗಳಿಂದ, ಕೋವಿಡ್-೧೯ ಕಾರಣದಿಂದ, ಆರ್ಥಿಕ ಮತ್ತು ಅನುದಾನದ ಕೊರತೆಯ ನಡುವೆಯೂ ಅತ್ಯಂತ ವ್ಯವಸ್ಥಿತವಾಗಿ ಈ ಕಾರ್ಯಕ್ರಮವನ್ನು ಕೈಗೊಳ್ಳುತ್ತಿದ್ದೇವೆ. ನಾನು ಮಾನ್ಯ ಸದಸ್ಯರಿಗೆ ತಿಳಿಸುವುದೇನೆಂದರೆ, ದೇವರಾಜ ಅರಸು ರವರ ಬಗ್ಗೆ ಇಡೀ ಸಮಾಜ ಮತ್ತು ವ್ಯವಸ್ಥೆ ಪೂರ್ಣ ಗೌರವವನ್ನು ಹೊಂದಿದೆ. ಮಾನ್ಯ ಸದಸ್ಯರಿಗೆ ಗೊತ್ತಿರಲಿ ಎನ್ನುವ ಕಾರಣಕ್ಕೆ ಹೇಳುತ್ತೇನೆ, ಆದರೆ ಪ್ರಚಾರಕ್ಕಲ್ಲ. ನನಗೆ ಇವತ್ತು ಎರಡು ಎಕರೆ ಭೂಮಿ ಇದ್ದರೆ ಅದು ಭೂ ಮಸೂದೆ ಕಾಯ್ದೆಯಿಂದ ಎಂಬುದನ್ನು ನೆನಪಿಟ್ಟುಕೊಂಡು ಉಲ್ಲೇಖ ಮಾಡುತ್ತಿದ್ದೇನೆ. ದೇವರಾಜ ಅರಸು ನಿಗಮ ಮತ್ತು ಸಂಶೋಧನಾ ಕೇಂದ್ರವನ್ನು ಅತ್ಯಂತ ವ್ಯವಸ್ಥಿತವಾಗಿ ಮತ್ತು ಪಾರದರ್ಶಕವಾಗಿ ನಡೆಸುತ್ತೇವೆ. ಸಮಾಜದ ಕಟ್ಟಕಡೆಯ ವ್ಯಕ್ತಿಯ ಬದುಕನ್ನು ಕಟ್ಟಿಕೊಳ್ಳುವಂತೆ ನಡೆಸುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ.

**ಪ್ರಶ್ನೆ ಸಂಖ್ಯೆ 691**

(ಮಾನ್ಯ ಸದಸ್ಯರಾದ ಶ್ರೀ ಕೆ.ಪಿ.ನಂಜುಂಡಿ ಅವರು ಸದನದಲ್ಲಿ ಉಪಸ್ಥಿತರಿರಲಿಲ್ಲ)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಪ್ರಶ್ನೆ ಸಂಖ್ಯೆ: 700**
**(ಉತ್ತರದ ಪ್ರತಿ ಲಗತ್ತಿಸಿದೆ)**

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದು, ಮಾನ್ಯ ಸಚಿವರು ಹಿರಿಯವರು ಮತ್ತು ಅನುಭವ ಹೊಂದಿದವರಾಗಿದ್ದಾರೆ. ಉತ್ತರದಲ್ಲಿ ಕೊಟ್ಟಿರುವ ಮಾಹಿತಿಯಂತೆ ೨೦೧೬ರ ಪ್ರಕಾರ P.D.O (Panchayat Development Officer) ಗಳು ಹಾಗೂ ಗ್ರಾಮ ಲೆಕ್ಕಿಗಳು ಗ್ರಾಮಗಳಲ್ಲಿ ವಾಸಿಸಬೇಕು ಎನ್ನುವಂತಹ ಆದೇಶದ ಉಲ್ಲೇಖ ಕೊಟ್ಟಿದ್ದಾರೆ. ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡಲಾಗಿದೆ ಮತ್ತು ಗ್ರಾಮ ಅಭಿವೃದ್ಧಿ ಸಾಧಿಸಲು ಪ್ರಯತ್ನ ಮಾಡಲಾಗುತ್ತಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ.

(ಮುಂದು)

(1138)/17.12.2021/11.20/ಹೆಚ್‌ವಿ:ಆರ್‌ಎನ್

**ಡಾ: ತಳವಾರ್ ಸಾಬಣ್ಣ(ಮುಂದುವರಿದದ್ದು):-**

ಸನ್ಮಾನ್ಯ ಸಭಾಪತಿಯವರೇ, ಗ್ರಾಮಗಳು ಅಭಿವೃದ್ಧಿ ಹೊಂದಬೇಕಾದರೆ, ಗ್ರಾಮೀಣ ಜನರ ಅಭಿವೃದ್ಧಿಯಾಗಬೇಕಾಗಿದೆ. ಸರ್ಕಾರದ ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಲೆಕ್ಕಿಗರು ಹೆಚ್ಚಿನ ಪಾತ್ರವನ್ನು ವಹಿಸುತ್ತಾರೆ. ವಿಶೇಷವಾಗಿ ಹೈದ್ರಾಬಾದ್-ಕರ್ನಾಟಕ ಭಾಗವನ್ನು ಸರ್ಕಾರ 'ಕಲ್ಯಾಣ-ಕರ್ನಾಟಕ' ಎಂದು ನಾಮಕರಣ ಮಾಡಿದೆ. ದುರಾದೃಷ್ಟವೆಂದರೆ, ಆ ಭಾಗ ಕಲ್ಯಾಣದ ಕಡೆಗೆ ಸಾಗುತ್ತಿಲ್ಲ ಎನ್ನುವ ಕೂಗು ಆ ಭಾಗದ ಜನರಲ್ಲಿ ಕೇಳಿ ಬರುತ್ತಿದೆ. ಹೆಚ್ಚಿನ ಹಿಂದುಳಿದ ತಾಲ್ಲೂಕುಗಳು ಆ ಪ್ರದೇಶದಲ್ಲಿವೆ. ಗ್ರಾಮಗಳಲ್ಲಿ ಅತ್ಯಂತ ಬಡವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಲೆಕ್ಕಿಗರ ಮೇಲೆ 2 ಅಥವಾ 3 ಗ್ರಾಮಗಳ ಜವಾಬ್ದಾರಿ ಇದೆ. ಈ ಕಾರಣದಿಂದಾಗಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಲೆಕ್ಕಿಗರು ತಮ್ಮ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸುವುದಕ್ಕೆ ಸಾಧ್ಯವಾಗುತ್ತಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಲೆಕ್ಕಿಗರು ಗ್ರಾಮಗಳಲ್ಲಿಯೇ ನೆಲಸಬೇಕೆನ್ನುವ ಆದೇಶವನ್ನು ಸರ್ಕಾರ ಹೊರಡಿಸಿದೆ. ಆದರೆ, ಇತ್ತೀಚೆಗೆ ಪತ್ರಿಕೆಗಳಲ್ಲಿ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಲೆಕ್ಕಿಗರು ಗ್ರಾಮಗಳಲ್ಲಿ ವಾಸ ಮಾಡಬೇಕೆಂದು ಕಳೆದ ಎಲ್ಲ ಸರ್ಕಾರಗಳು ಹೇಳಿದ್ದರೂ ಸಹ ಇದುವರೆವಿಗೂ ಬಹುತೇಕ ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನವಾಗಿದ್ದರೂ ಕನಿಷ್ಠ ಈ ವ್ಯಾಪ್ತಿಯ ಗ್ರಾಮಗಳಲ್ಲಿ ಯಾವೊಬ್ಬ ಗ್ರಾಮ ಲೆಕ್ಕಿಗ ಅಥವಾ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ವಾಸಿಸುತ್ತಿಲ್ಲ' ಎನ್ನುವ ಉಲ್ಲೇಖವನ್ನು ಮಾಡಿದ್ದಾರೆ. ಮತ್ತೊಂದು ವಿಚಾರವೇನೆಂದರೆ, ಇವರುಗಳನ್ನು ಹುಡುಕಿಕೊಂಡು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಗ್ರಾಮದ ಜನರು ಪಟ್ಟಣಕ್ಕೆ ಹೋಗಬೇಕಾಗಿದೆ ಅಥವಾ ಕಲಬುರಗಿ ಅಥವಾ ಬೆಳಗಾವಿಯಂತಹ ತಾಲ್ಲೂಕು ಕೇಂದ್ರಗಳಿಗೆ ಹೋಗಬೇಕಾಗುತ್ತದೆ. ಈ ಬಡ ಜನರಿಗೆ ಅಲ್ಲಿ ಅವರುಗಳು ಸಿಗುವುದಿಲ್ಲ. ಒಂದು ವೇಳೆ ಸಿಕ್ಕಿದರೂ, ಉದ್ಧಟತನದಿಂದ ಉತ್ತರವನ್ನು ಕೊಡುತ್ತಾರೆ. ಜನರು ತಮ್ಮ ಕೆಲಸವನ್ನು ಹಣ ಕೊಟ್ಟು ಮಾಡಿಸಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಮಾನ್ಯ ಸಚಿವರು ಯಾವ ಕಠಿಣ ಕ್ರಮಗಳನ್ನು ಕೈಗೊಂಡಿದ್ದಾರೆಂದು ಹೇಳಿದರೆ, ಮುಂದೆ ನಾನು ಮತ್ತೊಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರ ಕಳಕಳಿ ನಿಜಕ್ಕೂ ಅಭಿನಂದಾರ್ಹವಾಗಿದೆ. ಇಡೀ ಕರ್ನಾಟಕ ರಾಜ್ಯದಲ್ಲಿರುವಂತಹ ಒಟ್ಟು 5962 ಗ್ರಾಮಪಂಚಾಯಿತಿಗಳ ಪೈಕಿ ಸುಮಾರು 5294 ಗ್ರಾಮ ಪಂಚಾಯಿತಿಗಳಲ್ಲಿ ಇವರುಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಉಳಿದಂತೆ 727 ಗ್ರಾಮ ಪಂಚಾಯಿತಿಗಳ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಎರಡೆರಡು ಪಂಚಾಯಿತಿಗಳ ಜವಾಬ್ದಾರಿಗಳನ್ನು ಕೊಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ ನಾನು ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಪ್ರಾರಂಭದಲ್ಲಿ ' ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಆ ಗ್ರಾಮಗಳಲ್ಲಿ ಇರುವುದಿಲ್ಲ' ಎನ್ನುವ ದೂರುಗಳು ಕೇಳಿ ಬಂದಿದ್ದವು. ನಾನು ಹುಬ್ಬಳ್ಳಿಯಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲಿರುವ ಎಲ್ಲ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ವಿಶೇಷವಾದ ಸಭೆಯನ್ನು ಕರೆದಿದ್ದೆ. ಆ ಸಂದರ್ಭದಲ್ಲಿ ಬಹಳ ಸ್ಪಷ್ಟವಾಗಿ, 'ನೀವು ನಿಮ್ಮ ಗ್ರಾಮಗಳಲ್ಲಿ ಇರಬೇಕು, ಕಾರ್ಯ ನಿಮಿತ್ತ ಹೊರಗೆ ಹೋಗಿದ್ದರೆ ಸರಿ. ಇಲ್ಲದಿದ್ದರೆ, ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ' ಎನ್ನುವಂತಹ ಎಚ್ಚರಿಕೆಯನ್ನು ಕೊಟ್ಟಿದ್ದೆ. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಅಧ್ಯಕ್ಷರು ಮಾತನಾಡಿದ ಸಂದರ್ಭದಲ್ಲಿ 'ನಮಗೆ ಬೇಕಾಗಿರುವಂತಹ ಸವಲತ್ತುಗಳನ್ನು ಸರ್ಕಾರ ಒದಗಿಸಿಕೊಟ್ಟಿದೆ. ಆದ್ದರಿಂದ ನಾವು ಆ ಗ್ರಾಮಗಳಲ್ಲಿಯೇ ಇರುವಂತಹ ಪ್ರಯತ್ನವನ್ನು ಮಾಡುತ್ತೇವೆ' ಎನ್ನುವ ಉತ್ತರವನ್ನು ನೀಡಿದ್ದರು. ಆದರೂ ಎಲ್ಲಿಯಾದರೂ, 'ನಮಗೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸಿಗುತ್ತಿಲ್ಲ ಅಥವಾ ನಮ್ಮ ಗ್ರಾಮಕ್ಕೆ ಬರುತ್ತಿಲ್ಲ' ಎನ್ನುವ ದೂರುಗಳನ್ನು ನಮ್ಮ ಗಮನಕ್ಕೆ ತಂದರೆ, ಖಂಡಿತವಾಗಿಯೂ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:-** ನಾನು ತಮಗೊಂದು ಸಲಹೆ ಕೊಡುವುದಕ್ಕೆ ಬಯಸುತ್ತೇನೆ. ಗ್ರಾಮ ಪಂಚಾಯಿತಿಗಳಲ್ಲಿ ಇವರಿಗಾಗಿ ಒಂದು ಕ್ವಾರ್ಟರ್ಸ್ ಕಟ್ಟಿಸಿಕೊಟ್ಟರೆ ಅವರು ಅಲ್ಲಿಯೇ ಇರುತ್ತಾರೆ. ಇಲ್ಲದಿದ್ದರೆ, ವಾಸಿಸಲು ಅವರು ನಗರಗಳಿಗೆ ಹೋಗುತ್ತಾರೆ.

---

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ತಾವು ಕೊಟ್ಟಿರುವ ಸಲಹೆಯನ್ನು ಖಂಡಿತವಾಗಿಯೂ ಗಮನಿಸಿ, ನಮ್ಮ ಇಲಾಖೆಯಿಂದ ಕ್ವಾರ್ಟರ್ಸ್ ಕಟ್ಟಿಸಿಕೊಡುವುದಕ್ಕೆ ಹಣ ಜೋಡಿಸಲು ಸಾಧ್ಯವಾಗುತ್ತದೆಯೇ ಎನ್ನುವುದನ್ನು ನೋಡುತ್ತೇವೆ. ಇಲ್ಲದಿದ್ದರೆ, ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿ, ಆರ್ಥಿಕ ಇಲಾಖೆಯಿಂದ ಮಂಜೂರಾತಿಯನ್ನು ಪಡೆದುಕೊಳ್ಳುವಂತಹ ಪ್ರಯತ್ನವನ್ನು ಮಾಡುತ್ತೇವೆ. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಅಲ್ಲಿಯೇ ಮನೆಗಳನ್ನು ಕಟ್ಟಿಕೊಟ್ಟರೆ, ಅವರುಗಳು ಅಲ್ಲಿಯೇ ವಾಸಿಸಬೇಕಾಗುತ್ತದೆ. ಆ ನಿಟ್ಟಿನಲ್ಲಿ ಪ್ರಯತ್ನಿಸಲಾಗುತ್ತದೆ.

**ಡಾ: ತಳವಾರ್ ಸಾಬಣ್ಣ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಮರ್ಪಕವಾದ ಉತ್ತರವನ್ನು ನೀಡಿದ್ದಾರೆ. ಕಲ್ಯಾಣ-ಕರ್ನಾಟಕ ಭಾಗದಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮತ್ತು ಗ್ರಾಮ ಲೆಕ್ಕಿಗರ ವರ್ತನೆ, ಭ್ರಷ್ಟಾಚಾರ ಮತ್ತು ಬಡವರ ಮೇಲಿನ ಶೋಷಣೆಯನ್ನು ನಿಯಂತ್ರಣ ಮಾಡುತ್ತಾರೆನ್ನುವ ಆಶಯವನ್ನು ವ್ಯಕ್ತಪಡಿಸುತ್ತಾ, ಕಲ್ಯಾಣ-ಕರ್ನಾಟಕ ಹಿಂದುಳಿದ ಪ್ರದೇಶವಾಗಿರುವುದರಿಂದ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಅನುದಾನವನ್ನು ಕೊಡಲು ಆದ್ಯತೆಯನ್ನು ನೀಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಏಕೆಂದರೆ, ಅಲ್ಲಿ ರಸ್ತೆಗಳ ನಿರ್ಮಾಣವಾಗಬೇಕಾಗಿದೆ, ಕುಡಿಯುವ ನೀರಿನ ವ್ಯವಸ್ಥೆಯಾಗಬೇಕಾಗಿದೆ. ಇವತ್ತಿನವರೆಗೂ ಅಲ್ಲಿ ಅನೇಕ ಆರೋಗ್ಯದ ಸಮಸ್ಯೆಗಳಿವೆ. ಇವೆಲ್ಲವುಗಳಿಗೂ ಮಾನ್ಯ ಮಂತ್ರಿಗಳು ಆದ್ಯತೆಯ ಮೇರೆಗೆ ಅನುದಾನವನ್ನು ಒದಗಿಸಿಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದರೂ ಸಹ ಪ್ರಾದೇಶಿಕ ಅಸಮನತೆಯೆನ್ನುವುದನ್ನು ಅನುಭವಿಸುತ್ತಿದ್ದೇವೆ. ಅದನ್ನು ನಿವಾರಿಸುವಲ್ಲಿ ಮಾನ್ಯ ಸಚಿವರು ಪ್ರಯತ್ನಿಸುತ್ತಾರೆನ್ನುವ ಆಶಯವನ್ನು ಇಟ್ಟುಕೊಂಡು ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**ಶ್ರೀ ಸಿ.ಎಂ.ಲಿಂಗಪ್ಪ:-** ಸನ್ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶವನ್ನು ನೀಡಿದ್ದ ತಮಗೆ ಮೊದಲಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ತಾವು ಆಯಾಯ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ವಸತಿ ಕಟ್ಟಿಕೊಡಬೇಕೆನ್ನುವ ಸಲಹೆಯನ್ನು ನೀಡಿದ್ದೀರಿ, ಆದರೆ, ಇತ್ತೀಚೆಗೆ ಬಂದಂತಹ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮಗಳಲ್ಲಿ ವಾಸ ಮಾಡುತ್ತಿಲ್ಲ. ತಾವು ನೀಡಿದಂತಹ ಸಲಹೆಯನ್ನು ಸರ್ಕಾರ ಕಾರ್ಯಗತ ಮಾಡಿದ್ದರೂ ಸಹ ಶೇಕಡಾ 75ರಷ್ಟು ಜನರು ಅಲ್ಲಿ ವಾಸಿಸುವುದಿಲ್ಲ. ಉದಾಹರಣೆಗೆ ಹೇಳಬೇಕಾದರೆ, ನಮ್ಮ ಗ್ರಾಮದಲ್ಲಿಯೇ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗಾಗಿ ಸರ್ಕಾರ ಒಂದು ಮನೆಯನ್ನು ಕಟ್ಟಿಸಿಕೊಟ್ಟಿತ್ತು. ಯಾವ ಗ್ರಾಮ ಪಂಚಾಯಿತಿ

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಭಿವೃದ್ಧಿ ಅಧಿಕಾರಿಯೂ ಅಲ್ಲಿ ವಾಸಿಸುವುದಕ್ಕೆ ಬರಲಿಲ್ಲ. ಯಾವಾಗಲಾದರೂ ಪಂಚಾಯಿತಿಗೆ ಬಂದರೆ, ಆ ಮನೆಯೊಳಗೆ ಕುಳಿತುಕೊಂಡು ಕೆಲಸ ಮಾಡುತ್ತಿದ್ದರು. ತಮ್ಮ ಸಲಹೆಯನ್ನು ಅನುಷ್ಠಾನಗೊಳಿಸಿದರೆ ಏನಾಗಬಹುದು ಎನ್ನುವುದನ್ನು ತಮ್ಮ ಗಮನಕ್ಕೆ ತಂದಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಏತಕ್ಕೋಸ್ಕರ ಆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಅಲ್ಲಿ ವಾಸಿಸುತ್ತಿಲ್ಲ, ಬೇರೆ ಮನೆಯಲ್ಲಿ ಏತಕ್ಕೋಸ್ಕರ ವಾಸಿಸುತ್ತಿದ್ದಾರೆನ್ನುವುದು ನನಗೆ ಗೊತ್ತಿಲ್ಲ. ಅಲ್ಲೊಂದು ಇಲ್ಲೊಂದು ಇಂತಹ ಉದಾಹರಣೆಗಳು ಇರಬಹುದು ಮಾನ್ಯ ಹಿರಿಯ ಸದಸ್ಯರು ಅವರ ಅನುಭವವನ್ನು ಹೇಳುತ್ತಿರುವುದರಿಂದ ನಾನು ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಆ ಅಂಶವನ್ನು ಸಹ ನಾನು ಗಮನಿಸುತ್ತೇನೆ. ತಾವು ನೀಡಿರುವಂತಹ ಸಲಹೆ ಒಳ್ಳೆಯ ಸಲಹೆಯಾಗಿದೆ. ಆ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುತ್ತೇವೆ. ಕಲ್ಯಾಣ ಕರ್ನಾಟಕ ಭಾಗದ ಗ್ರಾಮಗಳಿಗೆ ಹೆಚ್ಚಿನ ಅನುದಾನವನ್ನು ನೀಡಬೇಕೆನ್ನುವ ಒತ್ತಾಯವನ್ನು ಮಾನ್ಯ ಸದಸ್ಯರು ಮಾಡಿದ್ದಾರೆ. ಮುಂದಿನ 15ನೇ ಹಣಕಾಸಿನ ಆಯೋಗದಿಂದ ಲಭ್ಯವಾಗುವ ಹಣ, ಕೇಂದ್ರ ಸರ್ಕಾರದಿಂದ ಬರುವಂತಹ ಹಣ, ಪಂಚಾಯಿತಿಗಳು ಸಂಗ್ರಹ ಮಾಡುವ ತೆರಿಗೆಯ ಹಣ ಮತ್ತು ರಾಜ್ಯ ಸರ್ಕಾರದ ಹಣ ಹೀಗೆ ಎಲ್ಲ ಮೂಲಗಳಿಂದ ದೊರೆಯಬಹುದಾದ ಹಣದ ಬಗ್ಗೆ ಪರಿಶೀಲಿಸಿ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:590**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ಹೆಸರೇ ಹೇಳುವಂತೆ ನಮ್ಮ ಈಶ್ವರಪ್ಪನವರು ಬಹಳ ಈಶ್ವರೀಯವಾಗಿರುವ ಕೆಲಸವನ್ನು ಮಾಡುತ್ತಿದ್ದಾರೆ. ಎಲ್ಲ ಜನರಿಗೂ ಕುಡಿಯಲು ಸಿಹಿ ನೀರಿನ ಯೋಜನೆ.........

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, 'ಈಶ್ವರೀಯವಾಗಿರುವ ಕೆಲಸ' ಎಂದರೆ ಏನು ಎನ್ನುವುದು ನನಗೆ ಅರ್ಥವಾಗಲಿಲ್ಲ.

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, 'ಈಶ್ವರೀಯವಾಗಿರುವ ಕೆಲಸ' ಎಂದರೆ, ದೇವರ ಕೆಲಸ ಎಂದು ಅರ್ಥ. ರಾಜ್ಯದಲ್ಲಿ ಒಟ್ಟು ನಳ ಸಂಪರ್ಕವನ್ನು ಹೊಂದಬೇಕಾಗಿರುವ ಮನೆಗಳ ಸಂಖ್ಯೆ:97,91,513 ಆಗಿದೆ. ಅದರಲ್ಲಿ ಜಲ ಜೀವನ್ ಮಿಷನ್ ಮೂಲಕ 41,91,395 ಮನೆಗಳಿಗೆ ನಳ ಸಂಪರ್ಕವನ್ನು ಒದಗಿಸಿಕೊಡಲಾಗಿದೆ. ನಮ್ಮ ದೇಶದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ದೇಶದಲ್ಲಿರುವ ಎಲ್ಲ ಮನೆಗಳಿಗೂ ನಳದ ಮೂಲಕ ಕುಡಿಯುವ ನೀರನ್ನು ಒದಗಿಸುವಂತಹ ಬಹಳ ದೊಡ್ಡ ಕಾರ್ಯವನ್ನು ಮಾಡುತ್ತಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ 2024ನೇ ವರ್ಷದೊಳಗೆ ಈ ಯೋಜನೆಯನ್ನು ಮುಕ್ತಾಯಗೊಳಿಸಲಾಗುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ.

(ಮುಂದು)

(1139) 17.12.2021 11.30 ವಿಕೆ/ಆರ್ಎನ್

**ಶ್ರೀ ಎನ್.ರವಿಕುಮಾರ್**(ಮುಂದು)

ಆದರೆ, 56 ಲಕ್ಷ ಮನೆಗಳು ಬಾಕಿ ಉಳಿದಿವೆ. 56 ಲಕ್ಷ ಮನೆಗಳಿಗೆ 2024ನೇ ಇಸವಿ ಒಳಗೆ ನಳದ ಮೂಲಕ ನೀರನ್ನು ಕೊಡುವುದಕ್ಕೆ ಸಾಧ್ಯವಿದೆಯೇ? ಆ ರೀತಿ ವಾಟರ್ ಸೋರ್ಸ್ ಇದೆಯೇ? ಅದರಲ್ಲಿಯೂ ವಿಶೇಷವಾಗಿ ಸಿಹಿ ನೀರಿನ ಮೂಲ ಇದೆಯೇ? ನಮ್ಮೂರು ಉಚ್ಚಂಗಿಪುರದ ಉದಾಹರಣೆಯನ್ನು ತೆಗೆದುಕೊಂಡರೆ, ನಾನು 5ನೇ ತರಗತಿಯಿಂದ ಹಿಡಿದು ಡಿಗ್ರಿವರೆಗೆ ಕೊಡದ ಮೂಲಕ ನೀರನ್ನು ತಂದಿದ್ದೇನೆ. ಜಗಳೂರು ತಾಲ್ಲೂಕು, ಉಚ್ಚಂಗಿಪುರದಲ್ಲಿ ಇವತ್ತಿಗೂ ಕೂಡ ಬಹಳ ಅಸಮರ್ಪಕವಾದ ಕುಡಿಯುವ ನೀರಿನ ಯೋಜನೆ ಇದೆ. ಅಲ್ಲಿನ ಜನಕ್ಕೆ ಮೂಳೆಗಳು ಸವೆದಿವೆ, ಹಲ್ಲುಗಳು ಹಳದಿ ಬಣ್ಣದ್ದಾಗಿದೆ. 10-20 ವರ್ಷದ ಮಕ್ಕಳು ಹಲ್ಲುಜ್ಜಿದರೆ, ಆ ಹಲ್ಲುಗಳು ಹಿಟ್ಟಿನಂತೆ ಪುಡಿಪುಡಿಯಾಗುವ ಪರಿಸ್ಥಿತಿ ಇದೆ. ಆ ರೀತಿ ಫ್ಲೋರೈಡ್ ವಾಟರ್ ನಮ್ಮ ಹಳ್ಳಿಯಲ್ಲಿದೆ. ಈ ರೀತಿ ಎಷ್ಟು ಹಳ್ಳಿಗಳಲ್ಲಿ ಫ್ಲೋರೈಡ್ ವಾಟರ್ ಇದೆ? ಇದನ್ನು ಸಂಪೂರ್ಣವಾಗಿ ತೊಲಗಿಸುವುದಕ್ಕೆ

**"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

---

ಸಾಧ್ಯವಿದೆಯೇ? ಮುಖ್ಯವಾಗಿ ಸಿಹಿ ನೀರಿನ ಸೋರ್ಸ್ ಎಷ್ಟಿದೆ? ಇದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಹೇಳಿದ ಪ್ರಕಾರ ಈ ಯೋಜನೆ ಬರುವ ಪ್ರಾರಂಭದ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ಒಟ್ಟು 97 ಲಕ್ಷ ಮನೆಗಳ ಪೈಕಿ 24 ಲಕ್ಷ ಮನೆಗಳಿಗೆ ಮಾತ್ರ ನಲ್ಲಿ ನೀರು ಇತ್ತು. 2020-2021ನೇ ಸಾಲಿನಲ್ಲಿ, 2024ರವರೆಗೆ ಇದನ್ನು ಪ್ಲ್ಯಾನಿಂಗ್ ಮಾಡುವುದಕ್ಕೆ, ಟೆಂಡರ್ ಕರೆಯುವುದಕ್ಕೆ ಎಲ್ಲದಕ್ಕೂ ಯೋಜನೆ ಮಾಡಲಾಯಿತು. 2020-21ನೇ ಸಾಲಿನಲ್ಲಿ ಈ ಯೋಜನೆಯ ಮುಖಾಂತರ ಸುಮಾರು 3,43,000 ಮನೆಗಳಿಗೆ ನಲ್ಲಿ ನೀರು ಕೊಡುವ ಕೆಲಸ ಮಾಡಲಾಯಿತು. 2021-22ನೇ ಸಾಲಿನಲ್ಲಿ 25,17,000 ಮನೆಗಳಿಗೆ ನಲ್ಲಿ ನೀರು ಕೊಡಬೇಕು ಎಂಬ ಗುರಿ ಇಟ್ಟುಕೊಂಡು, ಈಗಾಗಲೇ 14 ಲಕ್ಷ ಗುರಿಯನ್ನು ಸಾಧನೆ ಮಾಡಿದ್ದೇವೆ. ಉಳಿದ 11 ಲಕ್ಷ ವನ್ನು ಈ ವರ್ಷ ಖಂಡಿತಾ ಮಾಡುತ್ತೇವೆ. ಇದಲ್ಲದೇ 2022-23ನೇ ಸಾಲಿನಲ್ಲಿ ಇನ್ನೂ 25 ಲಕ್ಷ ಗುರಿ ಇಟ್ಟುಕೊಂಡಿದ್ದೇವೆ. 2023-24ನೇ ವರ್ಷದಲ್ಲಿ 16 ಲಕ್ಷ ಮಾತ್ರ ಉಳಿಯುತ್ತದೆ, ಅದನ್ನೂ ಕೂಡ ನಾವು ಮುಗಿಸುತ್ತೇವೆ. ನಾನು ಪ್ರಾರಂಭದಲ್ಲಿ ಹೇಳಿದ ಹಾಗೆ, 2020-21ರಲ್ಲಿ ಬಹಳ ಕಡಿಮೆಯಾಗಿದ್ದು ಈಗ ಪ್ರತಿ ದಿನ 10 ಸಾವಿರ ಮನೆಗಳಿಗೆ ನಾವು ಸಂಪರ್ಕ ಕೊಡುತ್ತಿದ್ದೇವೆ. ಒಟ್ಟಾರೆ ಇಡೀ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಕಡೆ ಕೂಡ ಜಲಜೀವನ್ ಮಿಷನ್ ಮೂಲಕ, ಸುಸ್ಥಿರ ನೀರು ಸಿಗುವ ಕಡೆ ಈ ಯೋಜನೆಯನ್ನು ಜಾರಿ ಮಾಡಬಹುದು. ಸುಸ್ಥಿರ ನೀರು ಸಿಗದೇ ಇರುವ ಕಡೆ ಮಾಡುವುದಕ್ಕಾಗುವುದಿಲ್ಲ. ಮಾನ್ಯ ನರೇಂದ್ರ ಮೋದಿಯವರು ಪ್ರಧಾನ ಮಂತ್ರಿ ಆದನಂತರ, ಜಲಶಕ್ತಿ ಅಭಿಯಾನವನ್ನು ಜಾರಿಗೆ ತಂದರು. ಆಕಾಶದಿಂದ ಬರುವ ಮಳೆ ನೀರು ಸಮುದ್ರಕ್ಕೆ ಹೋಗದೇ, ಆ ಮಳೆ ನೀರನ್ನು ನೆಲ ಹೀರಿಕೊಳ್ಳಬೇಕು ಎನ್ನುವುದು ಈ ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಯಲ್ಲಿ ಮುಖಾಂತರ ಅಂತರ್ಜಲ ಜಾಸ್ತಿ ಮಾಡುವುದು, ಕೆರೆ-ಕಟ್ಟೆಗಳ ಅಭಿವೃದ್ಧಿ ಮಾಡುವಂಥದ್ದು ಇರುತ್ತದೆ. ಇಡೀ ದೇಶದಲ್ಲಿ ಕರ್ನಾಟಕ ಇವತ್ತು ಮೊದಲನೆ ಸ್ಥಾನದಲ್ಲಿದೆ. 'ಮನೆ ಮನೆಗೆ ಗಂಗೆ' ಎಂದು ಏಕೆ ಹೆಸರು ಇಟ್ಟಿದ್ದೇವೆ ಎಂದರೆ, ಗ್ರಾಮೀಣ ಪ್ರದೇಶದ ಜನರ ಮನಸ್ಸಿನಲ್ಲಿ ನೀರಿನ ಬಗ್ಗೆ ಪವಿತ್ರವಾದ ಭಾವನೆ ಇದೆ. ಈ ಯೋಜನೆಯನ್ನು 2023-24ನೇ ಸಾಲಿನಲ್ಲಿ 93 ಲಕ್ಷ ಮನೆಗಳಿಗೂ ಕೂಡ ನಾವು ಖಂಡಿತಾ ನಲ್ಲಿ ಮುಖಾಂತರ ಕುಡಿಯುವ ನೀರನ್ನು ಕೊಡುತ್ತೇವೆ. ಮಾನ್ಯ ಸದಸ್ಯರು ಏನು ಕಲುಷಿತ ನೀರಿನ ಬಗ್ಗೆ ಪ್ರಶ್ನೆ ಕೇಳಿದರೋ ಆ ಕುರಿತು ನನ್ನ ಹತ್ತಿರ ಮಾಹಿತಿ ಇಲ್ಲ. ಸಂಬಂಧಪಟ್ಟ ಇಲಾಖೆ ಆ ಪ್ರಶ್ನೆ ಕೇಳಿದರೆ ಉತ್ತಮ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಗಳೆ, ಉತ್ತರವನ್ನು ಕೊಟ್ಟಿದ್ದಕ್ಕೆ ಅಭಿನಂದಿಸುತ್ತೇನೆ. ಇನ್ನೂ 56 ಲಕ್ಷಗಳಿಗೆ ಮನೆಗಳಿಗೆ ಸಂಪರ್ಕ ಕಲ್ಪಿಸಬೇಕಿದೆ. ಆದರೆ ದಿನಗಳು

ಕಡಿಮೆ ಇದೆ. ಒಂದು ದಿನಕ್ಕೆ 10 ಸಾವಿರ ಮನೆಗಳಿಗೆ ಸಂಪರ್ಕ ಕೊಡುತ್ತೇವೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ನನಗಿರುವ ಮಾಹಿತಿ ಪ್ರಕಾರ ಅರ್ಧಕರ್ಧ ಹಳ್ಳಿಗಳಿಗೆ ಸಿಹಿ ನೀರಿನ ಮೂಲಗಳೇ ಇಲ್ಲ. ಕೊಳವೆ ಬಾವಿಗಳ ನೀರಲ್ಲಿ ಫ್ಲೋರೈಡ್‌ಯುಕ್ತ ನೀರು ಸಿಗುತ್ತದೆ. ಸಿಹಿ ನೀರು ಎಂದರೆ ಅದು ನದಿ ನೀರಿನ ಮೂಲವೇ ಆಗಬೇಕು. ಅದನ್ನು ಹೇಗೆ ಹಳ್ಳಿಗಳಿಗೆ ಕನೆಕ್ಟ್ ಮಾಡುತ್ತೀರಿ ಎನ್ನುವ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಡಬೇಕು. ಉದಾಹರಣೆಗೆ ನಮ್ಮ ಜಗಳೂರು ತಾಲ್ಲೂಕಿನಲ್ಲಿ ಶೇಕಡ 70 ರಷ್ಟುಹಳ್ಳಿಗಳಲ್ಲಿ ಫ್ಲೋರೈಡ್ ವಾಟರ್ ಇದೆ. ದೇವದುರ್ಗ ತಾಲ್ಲೂಕಿನಲ್ಲಿ ಸುಮಾರು ಶೇಕಡ ನೂರರಷ್ಟು ಫ್ಲೋರೈಡ್ ವಾಟರ್ ಇದೆ. ಅಂತಹ ಹಳ್ಳಿಗಳಿಗೆ ಸಂಬಂಧಪಟ್ಟಂತೆ ಏನು ಮಾಡುತ್ತೀರಿ? ಪರಿಸ್ಥಿತಿ ಹೀಗೆ ಇದ್ದರೆ ಅಲ್ಲಿನ ಜನ 50 -60 ವರ್ಷಕ್ಕೆ ಸತ್ತು ಹೋಗುತ್ತಾರೆ. ಬೆನ್ನು ಬಾಗಿ ಹೋಗುತ್ತದೆ. ಕೈ-ಕಾಲುಗಳು ಬಾಗಿ ಹೋಗುತ್ತವೆ. 70 ವರ್ಷದ ತನಕ ಹಲ್ಲುಗಳಿರುವ ಪ್ರಶ್ನೆಯೇ ಇಲ್ಲ. ಫ್ಲೋರೈಡ್ ಯುಕ್ತ ನೀರಿನಿಂದ ಬಹಳ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಮಾನ್ಯ ಸಚಿವರು ಇದರ ಕಡೆ ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಗಳೆ, ಎಲ್ಲೆಲ್ಲಿ ನದಿಗಳು ಹರಿಯುತ್ತಿವೆಯೋ ಅಂತಹ ಜಾಗಗಳನ್ನೇ ಗುರುತಿಸಿ ನಾವು ಈಗಾಗಲೇ ಆ ಯೋಜನೆಗಳನ್ನು ವೇಗವಾಗಿ ಕಾರ್ಯಗತ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ತಿಳಿಸಿದ ಹಾಗೆ, ಯಾವ ಭಾಗದಲ್ಲಿ ಒಳ್ಳೆಯ ನೀರು ಸಿಗುವುದಿಲ್ಲವೋ ಅಂತಹ ಕಡೆ ಪ್ಯೂರಿಫಿಕೇಷನ್ ಪ್ಲ್ಯಾಂಟ್‌ಗಳನ್ನು ಹಾಕಿ ನೀರು ಕೊಡುವ ಪ್ರಯತ್ನ ಮಾಡುತ್ತೇವೆ. ಮಾನ್ಯ ಸದಸ್ಯರು ಜಗಳೂರು ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಅವರನ್ನು ಜೊತೆಗೆ ಕರೆದುಕೊಂಡು ಹೋಗಿ ಅಲ್ಲಿನ ಸಮಸ್ಯೆಯನ್ನು ಗಮನಿಸುತ್ತೇನೆ. ಅಲ್ಲಿನ ಸಮಸ್ಯೆಯ ಪರಿಹಾರಕ್ಕೆ 2024ನೇ ಇಸವಿಯವರೆಗೆ ಕಾಯುವ ಅವಶ್ಯಕತೆ ಇಲ್ಲ. ಈಗಾಗಲೇ ಅಲ್ಲೊಂದು ಯೋಜನೆ ಶುರು ಮಾಡಿದ್ದೇವೆ; ಇಷ್ಟರಲ್ಲೇ ಉದ್ಘಾಟನೆ ಮಾಡುತ್ತೇವೆ. ಮಾನ್ಯ ಸದಸ್ಯರನ್ನು ಕರೆದುಕೊಂಡು ಹೋಗಿ, ಆ ಭಾಗದಲ್ಲಿ ಏನು ಸಮಸ್ಯೆ ಇದೆ ಎಂದು ನೋಡಿ ಇರುವ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಗಳೆ, ಆಫ್ರಿಕಾದಲ್ಲಿ, ಬರುವ ಮಳೆ ನೀರನ್ನು ಹಿಡಿದಿಟ್ಟುಕೊಳ್ಳಲು ಪ್ಲಾಸ್ಟಿಕ್ ಕೆರೆಯನ್ನು ನಿರ್ಮಾಣ ಮಾಡುತ್ತಾರೆ, ನೀರನ್ನು ಸ್ಟ್ಯಾಕ್ ಮಾಡಿ ಆ ನೀರನ್ನು ಕೊಡುತ್ತಾರೆ. ಇದೇ ರೀತಿ, ಯಾವ ಜಿಲ್ಲೆಯಲ್ಲಿ, ಯಾವ ತಾಲ್ಲೂಕಿನಲ್ಲಿ ಅಥವಾ ಯಾವ ಹಳ್ಳಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆಯೋ ಅಲ್ಲಿ ಇಂತಹ ಯೋಜನೆಯನ್ನು ಜಾರಿಗೆ ಕೊಡಬಹುದೇ?

**ಸಭಾಪತಿಯವರು:-** ಮಾನ್ಯ ಸಚಿವರು, ನಿಮ್ಮ ಜೊತೆ ಕೂಡಿ ಮಾತನಾಡುತ್ತೇನೆ ಎಂದು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಪ್ರಶ್ನೆ ಸಂಖ್ಯೆ: 565**
**(ಉತ್ತರ ಲಗತ್ತಿಸಲಾಗಿದೆ)**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ**:- ಮಾನ್ಯ ಸಭಾಪತಿಗಳೆ, ಕೊಡಗು ಜಿಲ್ಲೆಯಲ್ಲಿ ಕ್ರೀಡಾ ವಿಶ್ವವಿದ್ಯಾಲಯ ಸಾಪಿಸಬೇಕೆನ್ನುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿರುವುದು ಸಂತೋಷದ ವಿಷಯವಾಗಿದೆ. ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಕ್ರೀಡಾಂಗಣ ಸಮಿತಿ ಸಭೆಯಲ್ಲಿ ಕೊಡಗು ಜಿಲ್ಲೆಯಲ್ಲಿ ಕ್ರೀಡಾ ವಿಶ್ವವಿದ್ಯಾಲಯ ಸ್ಥಾಪಿಸುವ ಬಗ್ಗೆ ಚರ್ಚಿಸಲಾಗಿದ್ದು ಈ ಬಗ್ಗೆ ವಿವರವಾದ ಪ್ರಸ್ತಾವನೆಯನ್ನು ಸ್ವೀಕರಿಸಿದ ನಂತರ ಉನ್ನತ ಶಿಕ್ಷಣ ಇಲಾಖೆಯೊಂದಿಗೆ ಸಮಾಲೋಚಿಸಲಾಗುವುದು ಎಂದು ಹೇಳಿದ್ದಾರೆ. ಇವೆಲ್ಲವೂ ಒಂದು ಪ್ರಾಸೆಸ್‌ನಲ್ಲಿದ್ದರೂ ಕೂಡ, ಆದಷ್ಟು ಬೇಗ ಇದಕ್ಕೆಂದು ಒಂದು ಜಾಗವನ್ನು ಗುರುತಿಸಬೇಕಿದೆ. ಈ ವಿಶ್ವವಿದ್ಯಾಲಯ ಸ್ಥಾಪನೆ ಮಾಡಬೇಕಾದರೆ ಜಾಗದ ಕೊರತೆ ಇರುತ್ತದೆ. ಜಾಗವನ್ನು ಆದಷ್ಟು ಶೀಘ್ರವಾಗಿ ಗುರುತು ಮಾಡಬೇಕು. ನನಗೆ ಗೊತ್ತಿರುವ ಹಾಗೆ ಪೊನ್ನಂಪೇಟೆ ಅಥವಾ ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಚಿಕ್ಕಳವಾರ ಪ್ರದೇಶದಲ್ಲಿ ನೂರು ಎಕರೆ ಜಾಗ ಉಳಿಸಲಿದೆ ಎಂದು ನನ್ನ ಗಮನಕ್ಕೆ ಬಂದಿದೆ. ಅದನ್ನು ತಾವು ದಯವಿಟ್ಟು ಪರಿಶೀಲನೆ ಮಾಡಬೇಕು.

ಕೊಡಗು ಜಿಲ್ಲೆಯಲ್ಲಿ ಕ್ರೀಡೆಗಳಿಗೆ ಉತ್ತೇಜನ ನೀಡುವ ಸಲುವಾಗಿ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು; ಅವುಗಳಿಗೆ ಒದಗಿಸಿರುವ ಅನುದಾನದ ವಿವರಗಳೇನು ಎಂದು ಇನ್ನೊಂದು ಪ್ರಶ್ನೆ ಕೇಳಿದ್ದೇನೆ. ನಮ್ಮಲ್ಲಿರುವ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದ ಟೇಬಲ್ ಟೆನ್ನಿಸ್ ಕೋರ್ಟ್ ದುಸ್ಥಿತಿಯಲ್ಲಿದೆ. ಕಟ್ಟಡ ಸೋರುತ್ತಿದೆ; ಶೌಚಾಲಯದ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಆಗಬೇಕಿದೆ. ಆಟವಾಡಲು ಬೆಳಕಿನ ವ್ಯವಸ್ಥೆ ಕೂಡ ಇಲ್ಲ. ಪೊನ್ನಂಪೇಟೆ ಕ್ರೀಡಾ ವಸತಿ ನಿಲಯಕ್ಕೆ ಸಂಬಂಧಪಟ್ಟಂತೆ "ಖೇಲೋ ಇಂಡಿಯಾ" ಕೇಂದ್ರಕ್ಕೆ ಬೇಕಾದ ಸಾಮಗ್ರಿಗಳನ್ನು ಖರೀದಿ ಮಾಡುವ ಸಂಬಂಧ ಪ್ರಸ್ತಾವನೆಯ ಅನುಮೋದನೆಗೆಂದು ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ಗೊತ್ತಾಗಿದೆ. ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಹೊಸದಾಗಿ ಕಾಂಪೌಂಡ್ ನಿರ್ಮಿಸಬೇಕಿದೆ. ಫೂಟ್ ಬಾಲ್ ಮೈದಾನ ಮತ್ತಿತರ ಕಾಮಗಾರಿಗಳಿಗೆ ಅಂದಾಜು ಪಟ್ಟಿ ತಯಾರಿಸಲಾಗಿದ್ದು, ಸುಮಾರು ರೂ. 6 ಕೋಟಿ ವೆಚ್ಚ ಬರುತ್ತಿದೆ. ಈಜುಕೊಳದ ನೀರನ್ನು ಶುಚಿಗೊಳಿಸುವ ಯಂತ್ರ ಮೊದಲಿನಿಂದಲೂ ಇದ್ದು ಅದನ್ನು ಸರಿಪಡಿಸಬೇಕು ಎನ್ನುವ ಯೋಜನೆ ಕೂಡ ಇದೆ. ಕೊಡುಗು ಜಿಲ್ಲೆ ಎಂದರೆ ಕ್ರೀಡೆಗೆ ಬಹಳ ಮಹತ್ವ ಕೊಡಲಾಗುತ್ತದೆ. ಆ ನಿಟ್ಟಿನಲ್ಲಿ ಮೂಲಭೂತ ಸೌಲಭ್ಯಗಳನ್ನು ಆದಷ್ಟು ಬೇಗ ಒದಗಿಸಿ ಕೊಡಬೇಕು ಮತ್ತು ನಿರಂತರವಾಗಿ ಕೊಡಗು ಜಿಲ್ಲೆಯ ಜಿಲ್ಲಾಧಿಕಾರಿಗಳ ಜೊತೆ ಸಂಪರ್ಕ ಮಾಡಿ ಆದಷ್ಟು ಶೀಘ್ರವಾಗಿ ಮಾಡಬೇಕು.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

ಮಾನ್ಯ ಸಚಿವರ ಬಗ್ಗೆ ನಮಗೆ ತುಂಬಾ ಅಭಿಮಾನ ಇದೆ. ಅವರು ತಮ್ಮ ಅವಧಿಯಲ್ಲಿಯೇ ಈ ಕ್ರೀಡಾ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಿ ಕೊಡಗಿನ ಜನರಿಗೆ ಕೊಡುಗೆಯಾಗಿ ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಮುಂದು)

(1140) 17-12-2021 11.40 DS-VK

**ಡಾ: ಕೆ.ಸಿ.ನಾರಾಯಣ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವುದರಲ್ಲಿ ಸತ್ಯ ಇದೆ. ಕೊಡಗು ಜಿಲ್ಲೆ ಎಂದರೆ ಇಡೀ ಕರ್ನಾಟಕ, ಭಾರತ ದೇಶಕ್ಕೆ ಹೆಸರು ತಂದಿರುವಂಥದ್ದು. ೧೯೬೨ ರಿಂದ ೨೦೧೯ ರವರೆಗೆ ೨೫ ಕ್ರೀಡಾಪಟುಗಳು ನಮ್ಮ ಕರ್ನಾಟಕಕ್ಕೆ ಸ್ಥಾನ ತಂದು ಕೊಟ್ಟಿದ್ದಾರೆ. ಅದರ ಜೊತೆಗೆ ಈಗಲೂ ಕೂಡ ೩ ಜನರು ಒಲಪಿಂಕ್ ಕ್ರೀಡೆಗೆ ಹೋಗಿ ನಮ್ಮ ಕರ್ನಾಟಕಕ್ಕೆ ಗೌರವ ತಂದು ಕೊಟ್ಟಿದ್ದಾರೆ. ಅವರನ್ನು ಕೂಡ ರಾಜ್ಯಪಾಲರ ಕಚೇರಿಯಲ್ಲಿ ಕರೆದು ಶ್ರೀ ಗಣಪತಿ, ಶ್ರೀಮತಿ ಅಂಕಿತ ಮತ್ತು ಶ್ರೀ ಕುಟ್ಟಪ್ಪ ರವರಿಗೆ ಈ ಮೂವರು ಜನರಿಗೂ ಗೌರವಿಸಿದ್ದಾರೆ. ಒಲಪಿಂಕ್ ಕ್ರೀಡೆಗಾಗಿ ತರಬೇತಿಯನ್ನು ಪಡೆಯಲು ಭವಾನಿದೇವಿಯವರಿಗೆ ೨ ಲಕ್ಷ ರೂಪಾಯಿ ಅನುದಾನವನ್ನು ನೀಡಲಾಗಿದೆ. ಈಗಾಗಲೇ ೨೧ [illegible] ಲಕ್ಷ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ನಾನು ಸಚಿವನಾದ ಮೇಲೆ ಕೊಡಗು ಜಿಲ್ಲೆಗೆ ನಾನು ಎರಡು ಸಲ ಹೋಗಿದ್ದೇನೆ. ಅಲ್ಲಿ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ನಾನು, ಮಾನ್ಯ ಸದಸ್ಯರು ಸೇರಿ ಸಭೆಯನ್ನು ನಡೆಸಿದ್ದೇವೆ. ಈಗೇನು ಮಾನ್ಯ ಸದಸ್ಯರು ಕ್ರೀಡಾ ವಿಶ್ವವಿದ್ಯಾಲಯವನ್ನು ಕೇಳುತ್ತಿದ್ದಾರೆ ಅದು ನಮ್ಮ ಕರ್ನಾಟಕದಲ್ಲಿ ಆಗಬೇಕೆಂದು ನಮ್ಮ ಸರ್ಕಾರಕ್ಕೆ ಬಹಳ ಆಸೆ ಇದೆ. ಆದರೆ ಅದು process ನಲ್ಲಿದೆ. ಜಮೀನು ಎಲ್ಲಿ ಆಗಬೇಕು, ವಿಶ್ವವಿದ್ಯಾಲಯದ ಅನುಮತಿಯನ್ನು ತೆಗೆದುಕೊಳ್ಳಬೇಕಾಗುತ್ತದೆ ಮತ್ತು ಭಾರತ ಸರ್ಕಾರದ ಅನುಮತಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಸದಸ್ಯರು ಈ ವಿಚಾರದ ಬಗ್ಗೆ ಮಾಹಿತಿಯನ್ನು ಕೇಳಿದ ತಕ್ಷಣವೇ ನಮ್ಮ ಇಲಾಖೆಯವರನ್ನು ನಿನ್ನೆ ಕರೆಯಿಸಿ ೨-೩ ಗಂಟೆ ಸಭೆಯನ್ನು ಮಾಡಿದ್ದೇನೆ. ಶೀಘ್ರದಲ್ಲೇ ಚರ್ಚೆಯನ್ನು ಮಾಡಿ ಕರ್ನಾಟಕದಲ್ಲಿ ಒಂದು ಕ್ರೀಡಾ ವಿಶ್ವವಿದ್ಯಾಲಯ ಬರುವ ಹಾಗೆ ಮಾಡುತ್ತೇವೆಂದು ನಾನು ಹೇಳಬಯಸುತ್ತಿದ್ದೇನೆ.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕರ್ನಾಟಕದಲ್ಲಿ ಕ್ರೀಡಾ ವಿಶ್ವವಿದ್ಯಾಲಯ ಬರುವ ಹಾಗೆ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಅದು ಕೊಡಗಿನಲ್ಲಿ ಆಗಬೇಕೆನ್ನುವುದು ನನ್ನ ಆಸೆ.

**ಡಾ: ಕೆ.ಸಿ.ನಾರಾಯಣ ಗೌಡ:-** ಮಾನ್ಯ ಸಭಾಪತಿಯವರೇ, ನಾನು ಅವರ ಜಿಲ್ಲೆಗೆ ಪ್ರಥಮ ಆದ್ಯತೆಯನ್ನು ಕೊಡುತ್ತೇನೆ. ಆದರೆ ನಮ್ಮ ಭಾರತ ಸರ್ಕಾರ ಮತ್ತು ನಮ್ಮ ವಿಶ್ವವಿದ್ಯಾಲಯದ ಷರತ್ತುಗಳಿವೆ. ಮಾನ್ಯ ಸದಸ್ಯರನ್ನು ಆ ಸಭೆಗೆ ಕರೆಯುತ್ತೇನೆ. ಅವರನ್ನು ಬಿಡುವುದಿಲ್ಲ. ಎಲ್ಲಿ suitable place ಎಂಬುದಕ್ಕೆ ಭಾರತ ಸರ್ಕಾರ ನಮಗೆ ಅನುಮತಿಯನ್ನು ಕೊಡಬೇಕಾಗುತ್ತದೆ. ಅದರ ಬಗ್ಗೆ ಖಂಡಿತವಾಗಿಯೂ ಶೀಘ್ರದಲ್ಲಿ ಚರ್ಚೆಯನ್ನು ಮಾಡಿ ನಾವು ತೀರ್ಮಾನ ತೆಗೆದುಕೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

## ಪ್ರಶ್ನೆ ಸಂಖ್ಯೆ:671
## (ಉತ್ತರದ ಪ್ರತಿ ಲಗತ್ತಿಸಲಾಗಿದೆ)

**ಶ್ರೀ ಕೆ.ಹರೀಶ್‌ಕುಮಾರ್:-** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಹುದ್ದೆ ೭೨೭ ಖಾಲಿ ಇವೆ. ಕಾರ್ಯದರ್ಶಿ ಗ್ರೇಡ್-೧ ಹುದ್ದೆ ೧೫೯೧ ಮತ್ತು ಗ್ರೇಡ್-೨ ೩೪೩, ಅಲ್ಲಿಗೆ ಸುಮಾರು ೯,೦೦೦ ಅಧಿಕಾರಿಗಳ ಹುದ್ದೆ ಪಂಚಾಯಿತಿ ವ್ಯಾಪ್ತಿಯಲ್ಲಿ ಖಾಲಿ ಇವೆ. ನಾವು ಗ್ರಾಮ ಪಂಚಾಯಿತಿಯನ್ನು ಗ್ರಾಮದ ಸರ್ಕಾರ ಎಂದು ಕರೆಯುತ್ತೇವೆ. ಗ್ರಾಮೀಣ ಜನರು ತಮ್ಮ ಮೂಲಭೂತ ಬೇಡಿಕೆಗಳಿಗೆ ಅಲ್ಲಿಗೆ ಬರುತ್ತಾರೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಕಾರ್ಯ ವ್ಯಾಪ್ತಿ ಏನಿದೆ ಎಂದರೆ, ಎಲ್ಲಾ ರೀತಿಯ ಪರವಾನಗಿಯನ್ನು ಪಂಚಾಯಿತಿಯವರು ಕೊಡಬೇಕು, ನಿರಾಕ್ಷೇಪಣಾ ಪತ್ರವನ್ನು ಕೊಡಬೇಕು, ಆದಾಯ ಸರ್ಟಿಫಿಕೇಟ್ ಕೊಡಬೇಕು, ಖಾತೆ ಬದಲಾವಣೆ ಮಾಡಬೇಕು, 9 & 11 ಕೊಡಬೇಕು, ಪಡಿತರ ಚೀಟಿ ವಿತರಣೆ ಮಾಡಬೇಕು, ಆಧಾರ್ ವಿಳಾಸ ಬದಲಾವಣೆ, ನಿವೇಶನ, ವಸತಿಗಳ ಅರ್ಜಿಗಳು, ಕೃಷಿಕರ ನರೇಗಾ, ಜಲಜೀವನ್ ಮಿಷನ್ ಅನುಷ್ಠಾನ, ಹೀಗೆ ಒಟ್ಟು ೨೯ ಇಲಾಖೆಗಳ ಜವಾಬ್ದಾರಿ ಪಂಚಾಯಿತಿ ಅಧಿಕಾರಿಗಳ ಮೇಲೆ ಇದೆ. ಇದರೊಂದಿಗೆ ಅವರು ವಾರ್ಡ್ ಸಭೆ ಮಾಡಬೇಕು, ಗ್ರಾಮ ಸಭೆ ಮಾಡಬೇಕು, ಜನ ವಸತಿ ಸಭೆ ಮಾಡಬೇಕು, ಮಕ್ಕಳ ಸಭೆ ಮಾಡಬೇಕು, ವರ್ಷದಲ್ಲಿ ಎರಡು ಸಲ ಪ್ರಗತಿ ಪರಿಶೀಲನಾ ಸಭೆ ಮಾಡಬೇಕು. ತಾಲ್ಲೂಕಿನಲ್ಲಿ ತಿಂಗಳಿಗೆ ಒಂದು ಸಲ ಪ್ರಗತಿಪರ ಪರಿಶೀಲನಾ ಸಭೆ ಇರುತ್ತದೆ. ಸಚಿವರು ಭೇಟಿ ನೀಡಿದ್ದಾಗ ಸಚಿವರ ಜೊತೆಯಲ್ಲಿ ಹೋಗಬೇಕು. ಈ ರೀತಿಯ ಅನೇಕ ಜವಾಬ್ದಾರಿಗಳು ಇರುವಾಗ ನಾವು ೨-೩ ಪಂಚಾಯಿತಿಗಳಿಗೆ ಒಬ್ಬೊಬ್ಬ ಅಧಿಕಾರಿಯನ್ನು ಹಾಕಿದರೆ ಆ ಕಾರ್ಯ ವ್ಯಾಪ್ತಿಯಲ್ಲಿ ಖಂಡಿತ ಗ್ರಾಮೀಣ ಜನರಿಗೆ ಬಹಳಷ್ಟು ಕಷ್ಟವಾಗಬಹುದು. ಗ್ರೇಡ್-೧ ಅಧಿಕಾರಿ ಒಂದು ಪಂಚಾಯಿತಿಗೆ ಇರಲೇಬೇಕೆಂದು ಇದೆ. ಪ್ರತಿ ಪಂಚಾಯಿತಿಗಳಿಗೆ ಒಬ್ಬ ಅಧಿಕಾರಿ ಇರುವಂತೆ ಮಾಡಿದರೆ ಅಲ್ಲಿ ಕೆಲಸ ಮಾಡುವುದಕ್ಕೆ ಸರಿಯಾಗಬಹುದು ಎನ್ನುವುದು ನಮ್ಮ ಅನಿಸಿಕೆಯಾಗಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಅಭಿಪ್ರಾಯ ಸರಿಯಾಗಿದೆ. ರಾಜ್ಯ ಸರ್ಕಾರ ಆ ದಿಕ್ಕಿನಲ್ಲಿ ಯೋಚನೆ ಮಾಡಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಸಂಬಂಧಪಟ್ಟ ವೃಂದಕ್ಕೆ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ನೇಮಕಾತಿ ಪ್ರಾಧಿಕಾರವಾಗಿರುತ್ತಾರೆ. ಎಲ್ಲೆಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ ಎಂಬುದನ್ನು ಎಲ್ಲಾ ಜಿಲ್ಲಾಧಿಕಾರಿಗಳು ವರದಿಯನ್ನು ಕೊಡುತ್ತಾರೆ. ನಾವು ಈಗಾಗಲೇ ಅದನ್ನು ಆರ್ಥಿಕ ಇಲಾಖೆಗೂ ಕಳುಹಿಸಿದ್ದೇವೆ. ಈ ಹುದ್ದೆಗಳ ನೇರ ನೇಮಕಾತಿಯನ್ನು ನಾವು ಕೆಪಿಎಸ್‌ಸಿ ಮುಖಾಂತರ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಳ್ಳುತ್ತೇವೆ. ಬಡ್ತಿಯನ್ನು ನಾವು ಸಂಬಂಧಪಟ್ಟವರ ಹತ್ತಿರ ಮಾಡಿಕೊಳ್ಳುತ್ತೇವೆ. ಹೀಗಾಗಿ ಇದನ್ನು ಸಂಬಂಧಪಟ್ಟವರ ಹತ್ತಿರ ಕಳುಹಿಸಿದ್ದೇವೆ. ಮಧ್ಯದಲ್ಲಿ ಕೋವಿಡ್-೧೯ ಬಂದಿದ್ದರಿಂದ ತಡವಾಗಿದೆ. ಆರ್ಥಿಕ ಇಲಾಖೆಯವರು ಆ ದಿಕ್ಕಿನಲ್ಲಿ ಒಪ್ಪಿಗೆ ಕೊಡುವವರಿದ್ದಾರೆ. ಹಾಗಾಗಿ ಮುಂದೆ ಕೋವಿಡ್-೧೯ ಕಡಿಮೆಯಾಗಿರುವಂತಹ ಸಂದರ್ಭದಲ್ಲಿ ಆರ್ಥಿಕ ಇಲಾಖೆಯಿಂದ ಅನುಮೋದನೆ ತೆಗೆದುಕೊಂಡು ಖಂಡಿತವಾಗಿಯೂ ಆದಷ್ಟು ಬೇಗ ಭರ್ತಿಯನ್ನು ಮಾಡುತ್ತೇವೆ.

**ಶ್ರೀ ಕೆ.ಹರೀಶ್‌ಕುಮಾರ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗ್ರೇಡ್-೧ ಮತ್ತು ಗ್ರೇಡ್-೨ ವೃಂದಕ್ಕೆ ಜಿಲ್ಲಾ ಪಂಚಾಯಿತಿಗಳ ಉಪ ಕಾರ್ಯದರ್ಶಿ (ಅಭಿವೃದ್ಧಿ) ಇವರು ನೇಮಕಾತಿ ಪ್ರಾಧಿಕಾರವಾಗಿರುತ್ತಾರೆ. ಆದುದರಿಂದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಖಾಲಿ ಇರುವ ಕಾರ್ಯದರ್ಶಿ ಗ್ರೇಡ್-೧, ಕಾರ್ಯದರ್ಶಿ ಮತ್ತು ಗ್ರೇಡ್-೨ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದಿಂದ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದ್ದಾರೆ. ಇದನ್ನು ಶೀಘ್ರವಾಗಿ ಮಾಡಿದರೆ ಬಹಳಷ್ಟು ಒಳ್ಳೆಯದಾಗುತ್ತದೆ. ಪ್ರತಿ ಸಲ ಈ ರೀತಿಯ ಉತ್ತರ ಬರುತ್ತಿದೆ. ಆದರೆ ಹುದ್ದೆಗಳ ಭರ್ತಿಯಾಗುತ್ತಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಈಗ ಅಧಿಕಾರ ತೆಗೆದುಕೊಂಡ ನಂತರ ಎಲ್ಲಾ ಪ್ರಯತ್ನಗಳನ್ನು ಮಾಡಿದ್ದೇನೆ. ಜೊತೆಗೆ ಡಾಟಾ ಎಂಟ್ರಿ ಆಪರೇಟರ್ ಮತ್ತು ಬಿಲ್ ಕಲೆಕ್ಟರ್‌ಗಳ ನೇಮಕಾತಿಯಲ್ಲಿ ಅವರಿಗೆ ಎಷ್ಟೆಷ್ಟು ಪರ್ಸೆಂಟ್ ಕೊಡಬೇಕು ಎನ್ನುವ ಗೊಂದಲವಿತ್ತು. ಇದರ ಬಗ್ಗೆ ನಾಲ್ಕು ಸಭೆಗಳನ್ನು ಮಾಡಿ ಕೊನೆಗೆ ಇಬ್ಬರು ಒಪ್ಪಿ ಸಂತೋಷಪಟ್ಟಿದ್ದಾರೆ. ಬಿಲ್ ಕಲೆಕ್ಟರ್‌ಗೆ ಶೇಕಡ ೭೫ ರಷ್ಟು, ಡಾಟಾ ಎಂಟ್ರಿ ಆಪರೇಟರ್‌ಗಳಿಗೆ ಶೇಕಡ ೨೫ ರಷ್ಟು ಎಂದು ಇಬ್ಬರು ಸಂತೋಷವಾಗಿ ಒಪ್ಪಿಕೊಂಡು ಹೋಗಿದ್ದಾರೆ. ಆದಷ್ಟು ಬೇಗ ಖಂಡಿತವಾಗಿಯೂ ಈ ಕೆಲಸವನ್ನು ಮುಗಿಸುತ್ತೇವೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಪ್ರಶ್ನೆ ಸಂಖ್ಯೆ: 655**
**(ಉತ್ತರ ಲಗತ್ತಿಸಲಾಗಿದೆ)**

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ನನ್ನ ರಕ್ಷಣೆಗೆ ಬರಬೇಕು. ಈ ಪ್ರಶ್ನೆಗೆ ಸಾವಿರ ಪುಟಗಳ ಉತ್ತರ ಕೊಟ್ಟಿದ್ದಾರೆ. ಈಗ ಇಷ್ಟು ಉತ್ತರ ಕೊಟ್ಟರೆ ನಾನು ಯಾವಾಗ ಓದುವುದು, ನಾನೇನು ಪ್ರಶ್ನೆ ಕೇಳಲಿ? ಸಾವಿರ ಪುಟಗಳ ಉತ್ತರ ಕೊಟ್ಟಿರುವುದರಿಂದ ನಾನು ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರಿಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಇಷ್ಟೊಂದು ಉತ್ತರ ಕೊಟ್ಟಿದ್ದಾರೆ ನಾನು ಹೇಗೆ ಓದುವುದು ಎಂದು ನಾನು ಕೇಳುತ್ತಿದ್ದೇನೆ.

**ಸಭಾಪತಿಯವರು:-** ನೀವು ಪ್ರಶ್ನೆ ಕೇಳಿರುವುದಕ್ಕೆ ಉತ್ತರ ಕೊಡಬೇಕಲ್ಲವೇ? ಈಗ ನಿಮಗೆ ಸಿ.ಡಿ. ಕೊಡಬೇಕೇ?

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಬೇರೆಯವರಿಗೆ ಸಿ.ಡಿ. ಕೊಟ್ಟಿದ್ದಾರೆ, ನನಗೆ ಸಿ.ಡಿ. ಕೊಟ್ಟಿಲ್ಲ. ನಾನು ತಮಗೆ ಮನವಿ ಮಾಡಿಕೊಳ್ಳುವುದೇನೆಂದರೆ, ಇಂತಹ ಉತ್ತರಗಳಿದ್ದಾಗ ಒಂದು ದಿನ ಮುಂಚಿತವಾಗಿ ಕೊಡುವುದಕ್ಕೆ ಸಾಧ್ಯವೇ ಯೋಚನೆ ಮಾಡಿ ಎಂದು ನಾನು ಕೇಳುತ್ತಿದ್ದೇನೆ. ಮಾನ್ಯ ಸಚಿವರು ವಿಸ್ತಾರವಾದ ಉತ್ತರ ಕೊಟ್ಟಿದ್ದಾರೆ, ಅವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶಿಕ್ಷಕರ ಕ್ಷೇತ್ರದಿಂದ ಗೆದ್ದು ಬಂದಿದ್ದಾರೆ. ಅವರು ಬಹಳ ಬುದ್ಧಿವಂತರಾಗಿರುವುದರಿಂದ ಸಮಸ್ಯೆಯಾಗಿದೆ. ಪ್ರಶ್ನೆ ಬಂದಾಗ ಉತ್ತರ ಕೊಡುತ್ತಾರೆಯೋ ಅಥವಾ ಆರು ತಿಂಗಳು ಮುಂಚಿತವಾಗಿ ಉತ್ತರ ಕೊಡುತ್ತಾರೆಯೋ? ಒಂದು ದಿನ ಮುಂಚಿತವಾಗಿ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ವಿಧಾನ ಪರಿಷತ್ತಿನಿಂದ ಹೊಸ ಪದ್ಧತಿಯನ್ನು ಪ್ರಾರಂಭ ಮಾಡಿಬಿಡಿ.

**ಡಾ: ವೈ.ಎ.ನಾರಾಯಣಸ್ವಾಮಿ:-** ಇದರ ಬಗ್ಗೆ ಯೋಚನೆ ಮಾಡಿ ಎಂದು ಹೇಳಿದ್ದೇನೆ, ಅಷ್ಟೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಇದರಲ್ಲಿ ಯೋಚನೆ ಮಾಡುವ ಪ್ರಶ್ನೆ ಉದ್ಭವವಾಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”
-----------------------------------------------------------------------------------------------------------

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಬಹಳ ಮುಖ್ಯವಾದ ಪ್ರಶ್ನೆ ಕೇಳಿದ್ದೇನೆ. ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಬರುವ ನಿಗಮಗಳಲ್ಲಿ ಭೂ ಒಡೆತನ ಯೋಜನೆ ಜಾರಿಯಲ್ಲಿದೆಯೇ, ಯಾವ ದಿನದಿಂದ ಇದೆ ಎಂದು ಪ್ರಶ್ನೆಯನ್ನು ಕೇಳಿದ್ದೇನೆ. ಸಮಾಜ ಕಲ್ಯಾಣ ಇಲಾಖೆಯ ನಿಗಮಗಳಲ್ಲಿರುವ ಎರಡು ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಭೂ ಒಡೆತನ ಯೋಜನೆ ಮತ್ತು ಗಂಗಾ ಕಲ್ಯಾಣ ಯೋಜನೆ. ಈ ಪ್ರಶ್ನೆಯಲ್ಲಿ ನಾನು ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಬರುವ ನಿಗಮಗಳನ್ನು ಕೇಳಿದ್ದೇನೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಪರಿಶಿಷ್ಟ ವರ್ಗಗಳ ಇಲಾಖೆ ಬೇರೆ ಇರುವುದರಿಂದ ಈ ಉತ್ತರ ಇದಕ್ಕೆ ಸಂಬಂಧ ಇದೆಯೇ ಇಲ್ಲವೇ ಎಂಬುದನ್ನು ಮಾನ್ಯ ಸಚಿವರು ಸ್ಪಷ್ಟೀಕರಣವನ್ನು ನೀಡಬೇಕು.

(ಮುಂದು)

1141/17-12-2021/11-50/bkp-vk

**ಡಾ: ವೈ.ಎ. ನಾರಾಯಣಸ್ವಾಮಿ(ಮುಂದು):-**

ಎರಡನೆಯದಾಗಿ, ಬಹಳ ಮುಖ್ಯವಾಗಿ ಈ ಸ್ಕೀಮ್‌ನಲ್ಲಿ ಕರ್ನಾಟಕ ರಾಜ್ಯದಲ್ಲಿ 4 ಮೀಸಲು ಲೋಕಸಭಾ ಕ್ಷೇತ್ರಗಳಿವೆ. ಕೋಲಾರ, ಚಿತ್ರದುರ್ಗ, ಚಾಮರಾಜನಗರ ಮತ್ತು ಕಲ್ಬುರ್ಗಿ . 1990-91 ರಿಂದ ಎಷ್ಟು ಜನರಿಗೆ ಭೂರಹಿತ ಜನರು ಎಷ್ಟು ಅರ್ಜಿಗಳನ್ನು ಹಾಕಿದ್ದಾರೆಂದರೆ ಕೋಲಾರ ಜಿಲ್ಲೆಯಲ್ಲಿ ಕೇವಲ 36 ಜನರು ಅರ್ಜಿಯನ್ನು ಹಾಕಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ 18 ಜನರು ಅರ್ಜಿಯನ್ನು ಹಾಕಿದ್ದಾರೆ. ಚಾಮರಾಜನಗರ ಜಿಲ್ಲೆಯಲ್ಲಿ 36 ಜನರು ಅರ್ಜಿಯನ್ನು ಹಾಕಿದ್ದಾರೆ. ಕಲ್ಬುರ್ಗಿಯಲ್ಲಿ 676 ಜನರು ಅರ್ಜಿಯನ್ನು ಹಾಕಿದ್ದಾರೆ.

ಮಾನ್ಯ ಸಭಾಪತಿಯವರೇ, ಈ ವಿಷಯವಾಗಿ ಮಾತನಾಡಲಿಕ್ಕೆ ದಯವಿಟ್ಟು ಸಮಯವನ್ನು ಕೊಡಬೇಕು. ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಸಂಬಂಧಪಟ್ಟಂತೆ ಅವರು ಕೊಟ್ಟಿರುವ ಉತ್ತರದಲ್ಲಿ ಎಷ್ಟು ಜನ ಫಲಾನುಭವಿಗಳನ್ನು ಯಾವ ಜಿಲ್ಲೆಗೆ ಆಯ್ಕೆ ಮಾಡಿದ್ದಾರೆಂದರೆ ಮೀಸಲು ಕ್ಷೇತ್ರ ಕೋಲಾರದಲ್ಲಿ-1, ಚಿತ್ರದುರ್ಗ -0, ಚಾಮರಾಜನಗರ 09. ಬಾಗಲಕೋಟೆ, 404. ಬೆಳಗಾವಿ 149. ಆದರೆ, ಗುಲ್ಬರ್ಗ 400, ರಾಯಚೂರು 547, ಯಾದಗಿರಿ 343. ನನಗೆ ಒಂದು ವಿಚಾರ ಅರ್ಥವಾಗುತ್ತಿಲ್ಲ. ಇಲಾಖೆಯಲ್ಲಿ ಎಸ್.ಸಿ/ಎಸ್.ಟಿ ಜನಾಂಗಕ್ಕೆ ಭೂಮಿ ಇಲ್ಲದೆ ಇರುವವರನ್ನು ಪಟ್ಟಿ ಮಾಡಿದ್ದೀರಾ? ನಿಮ್ಮ ಹತ್ತಿರ ಡಾಟಾ ಬ್ಯಾಂಕ್ ಇದೆಯೇ? ಈ 4 ಮೀಸಲು ಕ್ಷೇತ್ರದಲ್ಲಿ ಹಾಗಾದರೆ ಎಸ್.ಸಿ/ಎಸ್.ಟಿ ಜನಾಂಗದವರೆಲ್ಲರೂ ಶ್ರೀಮಂತರಿದ್ದಾರೆಯೇ? ಅವರಿಗೆ ಭೂಮಿ ಇದೆಯೇ, ಇದು ಏನು ಸ್ಕೀಮ್ ನನಗೆ ಅರ್ಥವಾಗುತ್ತಿಲ್ಲ. ನಾನು ಈ ವಿಷಯವನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಕೊಪ್ಪಳ ಜಿಲ್ಲೆಯ ಒಂದೇ ತಾಲ್ಲೂಕಿನಲ್ಲಿ 207, ಕುಷ್ಟಗಿ ತಾಲ್ಲೂಕಿನಲ್ಲಿ 268, ಕನಕಗಿರಿಯಲ್ಲಿ 1701 ಒಂದೇ ತಾಲ್ಲೂಕಿಗೆ ಕೊಟ್ಟಿದ್ದಾರೆ. ಜೇವರ್ಗಿ ಒಂದೇ

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ತಾಲ್ಲೂಕಿಗೆ 488. ಸೇಡಂಗೆ 132 ಯಾದಗಿರಿ ಮತ್ತು ಶಹಾಪುರಕ್ಕೆ 324. ಅಂದರೆ ಈ ಭೂ ಒಡೆತನ ಸ್ಕೀಂ ಅನ್ನು ಆಯ್ಕೆ ಮಾಡುವ ನಿಮ್ಮ ಮಾನದಂಡಗಳೇನು ಎನ್ನುವುದರ ಬಗ್ಗೆ ದಯವಿಟ್ಟು ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳಬೇಕು. ನಂತರ ನಾನು ಬೇರೆ ಪ್ರಶ್ನೆಯನ್ನು ಕೇಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಡಾ|| ವೈ.ಎ.ನಾರಾಯಣ ಸ್ವಾಮಿಯವರು 5 ರೀತಿಯಲ್ಲಿ ಪ್ರಶ್ನೆಯನ್ನು ಕೇಳಿದ್ದಾರೆ. ಅವರ ಪ್ರಶ್ನೆಯಲ್ಲಿ ಅವರು ಏನು ಕೇಳಿದ್ದಾರೆಂದರೆ ಭೂ ಒಡೆತನ ಆಯ್ಕೆ ಮಾಡುವಲ್ಲಿ ಇರುವಂತಹ ಮಾನದಂಡಗಳೇನು ಎಂದು ಕೇಳಿದ್ದಾರೆ. ಅದಕ್ಕೆ ಎಲ್ಲಾ ವಿವರಗಳನ್ನು ಕೊಟ್ಟಿದ್ದೇವೆ. ಸದರಿ ಯೋಜನೆಯಡಿಯಲ್ಲಿ ಸೌಲಭ್ಯ ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಾರೆ. ಅದನ್ನು ಕೊಟ್ಟಿದ್ದೇವೆ. ಆರ್ಥಿಕ ಗುರಿ ಎಷ್ಟು (ವರ್ಷವಾರು ಮತ್ತು ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು) ಎಂದು ಪ್ರಶ್ನೆ ಕೇಳಿದ್ದಾರೆ. ಆ ಮಾಹಿತಿಯನ್ನು ಕೊಟ್ಟಿದ್ದೇವೆ. ಅವರು ಕೇಳಿರುವಂತಹ ಎಲ್ಲಾ ಪ್ರಶ್ನೆಗಳಿಗೂ ಕೂಡ ಉತ್ತರಗಳನ್ನು ಕೊಡಲಾಗಿದೆ. ಆದರೆ ಅವರು ಈ ವಿಚಾರದಲ್ಲಿ ತಾರತಮ್ಯವಾಗಿದೆ ಎಂದು ಹೇಳುತ್ತಿದ್ದಾರೆ. ಕೆಲವು ಜಿಲ್ಲೆ, ಕೆಲವು ಕ್ಷೇತ್ರಕ್ಕೆ ತಾರತಮ್ಯವಾಗಿದೆ ಎಂದು ಹೇಳುತ್ತಿದ್ದಾರೆ. ಕೆಲವು ಕಡೆ ನೂರಾರು, ಮತ್ತೆ ಕೆಲವು ಕಡೆ ಸಾವಿರಾರು ಬಂದಿದೆ, ಕೆಲವು ಕಡೆ ಒಂದೆರಡು ಬಂದಿಲ್ಲವೆಂದು ಹೇಳುತ್ತಿದ್ದಾರೆ. ಈ ಯೋಜನೆಯು 1991 ರಿಂದ 2021 ರವರೆಗೆ 20 ವರ್ಷಗಳವರೆಗೆ ಸುಮಾರು 55908 ಎಕರೆ ಜಮೀನನ್ನು 49 ಸಾವಿರ ಫಲಾನುಭವಿಗಳಿಗೆ ಹಂಚಲಾಗಿದೆ. ಇದರ ಒಟ್ಟು ಮೊತ್ತ 1360 ಕೋಟಿ ರೂಪಾಯಿಗಳು. ಇಲ್ಲಿ ಏನು ತಾರತಮ್ಯವಾಗಿದೆ, ಮತ್ತು ಯಾವ ರೀತಿ ಮಾಡಿದ್ದೇವೆ ಎನ್ನುವುದರ ಬಗ್ಗೆ ಅವರು ಚರ್ಚೆ ಮಾಡುತ್ತಿದ್ದಾರೆ. ನನ್ನ ಅಂದಾಜಿನ ಪ್ರಕಾರ ಅವರ ಮೂಲ ಆಶಯಗಳೇನೆಂದರೆ, ಕೆಲವು ಜಿಲ್ಲೆಗಳಲ್ಲಿ ಭೂ ಒಡೆತನ ಯೋಜನೆಯಡಿ ಭೂಮಿ ಮಂಜೂರಾಗಿದೆ, ಅದು ಬಡವರ ಕೈ ಸೇರಿಲ್ಲ ಎನ್ನುವುದು ಅವರ ಇಂಗಿತ ಇರಬಹುದು. ಆದರೆ, ಸುಮಾರು 2 ತಿಂಗಳಿಂದೀಚೆಗೆ ವಿಶೇಷ ಸಭೆಗಳನ್ನೆಲ್ಲಾ ನಡೆಸಿ, ಪ್ರತಿಯೊಂದು ಜಿಲ್ಲೆಯನ್ನು ಸಮೀಕ್ಷೆ ಮಾಡಲಿಕ್ಕೆ ನಮ್ಮ ನಿಗಮದಿಂದ ಮತ್ತು ನಮ್ಮ ಇಲಾಖೆಯಿಂದ ಒಂದಿಷ್ಟು ಕೆಲಸಗಳಾಗಿವೆ. ಬಹುತೇಕ ಜಿಲ್ಲೆಗಳ ಸಂಬಂಧ ನಾನು ಒಂದು ಉದಾಹರಣೆಯನ್ನು ತಮಗೆ ಹೇಳಲಿಕ್ಕೆ ಬಯಸುತ್ತೇನೆ. ಇದು ಸೀಮಿತ ಸಮಯ ಆಗಿರುವುದರಿಂದ ರಾಯಚೂರು ಜಿಲ್ಲೆಯಲ್ಲಿ 53 ಫಲಾನುಭವಿಗಳು, ಮಂಡ್ಯ ಜಿಲ್ಲೆಯಲ್ಲಿ 2 ಫಲಾನುಭವಿಗಳಿಗೆ ಭೂಮಿ ಮಂಜೂರಾಗಿ ಆರ್.ಟಿ.ಸಿ. ಅವರ ಹೆಸರಿಗೆ ಬಂದಿದ್ದರೂ ಸಹ ಭೂ ಮಾಲೀಕರ ಕೈಯಲ್ಲಿಯೇ ಭೂಮಿ ಇತ್ತು. ಆ ವಿಚಾರವಾಗಿ ಖುದ್ದು ಎಂ.ಡಿ.ಯವರನ್ನೇ ಕಳುಹಿಸಿ, ಅವರ ಮೇಲೆ ಕ್ರಿಮಿನಲ್ ಕೇಸ್ ದಾಖಲು ಮಾಡುತ್ತೇವೆಂದು ಸೂಚನೆಯನ್ನು ಕೊಟ್ಟು ಆ ಬಡವರಿಗೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಅದನ್ನು ಹಸ್ತಾಂತರ ಮಾಡುವ ಕೆಲಸಗಳನ್ನು ನಾವು ಮಾಡಿದ್ದೇವೆ. ಇನ್ನು ಕರ್ನಾಟಕ ರಾಜ್ಯದ, ರಾಯಚೂರು, ಯಾದಗಿರಿ ಸೇರಿದಂತೆ ಎಲ್ಲಾ ಜಿಲ್ಲೆಗಳಲ್ಲಿಯೂ ಕೆಲಸ ನಡೆಯುತ್ತಿದೆ. ಅಗತ್ಯ ಇದ್ದರೆ ಎಂತಹ ಕಠಿಣ ಕ್ರಮವನ್ನಾದರೂ ಕೈಗೊಂಡು ಆ ಭೂ ಒಡೆತನ ಯೋಜನೆಯಲ್ಲಿ ಭೂಮಿ ಬಡವರಿಗೆ ಸೇರುವಂಥ ರೀತಿಯಲ್ಲಿ ಕ್ರಮವನ್ನು ಬಹಳ ಕಟ್ಟುನಿಟ್ಟಾಗಿ ತೆಗೆದುಕೊಳ್ಳುತ್ತೇವೆ. ಈ ಸಂಬಂಧ ಯಾರಿಗೂ ಮಣಿಯುವುದಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಹಿಂದೆ ರಾಜಕಾರಣಕ್ಕೋಸ್ಕರ ಯಾರಾದರೂ ಜಾಸ್ತಿ ಭೂಮಿಯನ್ನು ತೆಗೆದುಕೊಂಡು ಹೋಗಿರಬಹುದು, ನಾವು ಇಲ್ಲವೆಂದು ಹೇಳುವುದಿಲ್ಲ. ಇಡೀ ರಾಜ್ಯದಲ್ಲಿ ಯಾರು ಯಾರು ಜಿಲ್ಲಾವಾರು ಬಡವರು ಅರ್ಜಿಯನ್ನು ಸಲ್ಲಿಸಿದ್ದಾರೆ, ಅದನ್ನು ಗಮನದಲ್ಲಿಟ್ಟುಕೊಂಡು ಮುಂದಿನ ದಿನಗಳಲ್ಲಿ ಹೆಚ್ಚಿನ ಅನುದಾನವನ್ನು ಮಂಜೂರು ಮಾಡಿ, ಎಲ್ಲಾ ಬಡವರಿಗೂ ಪೂರ್ಣ ಭೂ ಒಡೆತನ ಮಾಡಲಿಕ್ಕೆ ಏನೇನು ಯೋಚನೆ ಬೇಕು, ಅದೆಲ್ಲವನ್ನು ಮಾಡುತ್ತೇವೆ. ಈಗಾಗಲೇ ಜಿಲ್ಲಾಧಿಕಾರಿಗಳ ಮೂಲಕ ಸಮೀಕ್ಷೆ ಮಾಡಿ ವರದಿಯನ್ನು ತರಿಸಿದ್ದೇವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಲ್ಲಿ ಯಾರು ಆರ್ಥಿಕವಾಗಿ ಬಡವರು ಇದ್ದಾರೆ, ಅವರಿಗೆ ಭೂಮಿಯನ್ನು ಕೊಡುವಂತಹ ಯೋಜನೆಯನ್ನು ಮಾಡುತ್ತೇವೆ. ಪಾರದರ್ಶಕವಾಗಿ ಮಾಡುತ್ತೇವೆ. ಯಾರಾದರೂ ಕೂಡ ಆ ಬಡವರ ಭೂಮಿಯನ್ನು ದುರುಪಯೋಗ ಮಾಡಿಕೊಂಡಿದ್ದರೆ ಅವರ ಮೇಲೆ criminal case ಮಾಡಿ ಅದನ್ನು ಬಡವರಿಗೆ ವಾಪಸ್ಸು ಕೊಡಿಸುವಂತಹ ಕೆಲಸವನ್ನು ಮಾಡುತ್ತೇವೆ.

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಈ ಸ್ಕೀಂ ಬಹಳ ಮಹತ್ವಾಕಾಂಕ್ಷಿ ಸ್ಕೀಂ ಎಂದು ನಾನು ಮೊದಲೇ ಹೇಳಿದೆ. ಇಲ್ಲಿ ಬಂಜರು ಭೂಮಿಯನ್ನು ತೋರಿಸಿ, ನೀರಾವರಿ ಭೂಮಿ ಎಂದು ಹೇಳಿ ಮಾರಾಟ ಮಾಡಿ ನೋಂದಣಿ ಮಾಡಿಸುತ್ತಾರೆ. ಎರಡನೆಯದಾಗಿ ಭೂಮಿಯನ್ನು ನೋಂದಣಿ ಮಾಡಿಸಿದರೂ ಎಸ್.ಸಿ/ಎಸ್‌ಟಿ. ಜನಾಂಗಕ್ಕೆ ಹ್ಯಾಂಡ್ ಓವರ್ ಮಾಡುವುದಿಲ್ಲ. ಮೂರನೆಯದಾಗಿ, ಪೋಡಿ ಮಾಡಿ ಹದ್ದುಬಸ್ತು ನಿಗದಿ ಮಾಡಿ ಅವರಿಗೆ ಜಮೀನು ಕೊಡುವುದಿಲ್ಲ. ನಾಲ್ಕನೆಯದಾಗಿ, ಈ ಜಮೀನನ್ನು ನಿಯಮ 11 ರ ಕಲಂ ಪ್ರಕಾರ ಅಂಬೇಡ್ಕರ್ ನಿಗಮಕ್ಕೆ mortgage ಮಾಡಬೇಕು. ಅದನ್ನೂ ಸಹ ಮಾಡುವುದಿಲ್ಲ. ಮತ್ತೆ ಎಸ್.ಸಿ/ಎಸ್.ಟಿ. ಜನಾಂಗದವರನ್ನು ಬಿಟ್ಟು ಬೇರೆಯವರಿಗೆ ಈ ಜಮೀನನ್ನು ಮಾರಾಟ ಮಾಡಿ ದುಡ್ಡು ಮಾಡುತ್ತಿದ್ದಾರೆ. ಇದು ಮಧ್ಯವರ್ತಿಗಳ ಮತ್ತು ಅಧಿಕಾರಿಗಳ nexus ಯಿಂದ ಫಲಾನುಭವಿಗಳ ಆಯ್ಕೆಯಾಗುತ್ತಿದೆ. ಇದನ್ನು ಎಲ್ಲಿಯೂ ಡಾಟಾ ಬ್ಯಾಂಕ್ ಇಟ್ಟುಕೊಂಡು ಅರ್ಹ ಅರ್ಜಿಗಳನ್ನು ಪರಿಷ್ಕರಣೆ ಮಾಡಿ ಜಮೀನನ್ನು ಕೊಡುತ್ತಿಲ್ಲ. ಇದರ ಬಗ್ಗೆ ಎ.ಸಿ.ಬಿ. ಯವರು ರೈಡ್ ಮಾಡಿದಂತಹ ಸಂದರ್ಭದಲ್ಲಿ ಮಹರ್ಷಿ ವಾಲ್ಮೀಕಿ ನಿಗಮದ ಅಧಿಕಾರಿಗಳ ಮನೆಗಳಲ್ಲಿ ಲಕ್ಷಾಂತರ ರೂಪಾಯಿಗಳು ಸಿಕ್ಕಿ, ಅವರುಗಳನ್ನು ಜೈಲಿಗೆ ಹಾಕಿದ್ದಾರೆ. ಅದನ್ನು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ನಾವು ಸ್ವತಃ ಟಿ.ವಿ.ಯಲ್ಲಿ ನೋಡಿದ್ದೇವೆ. ಆದರೆ, ಮಾನ್ಯ ಸಚಿವರು ಸಮರ್ಪಕವಾಗಿ ಕೆಲಸ ಮಾಡುತ್ತಿದ್ದಾರೆ. ನಾನು ಅವರಿಗೆ ಮನವಿ ಮಾಡುತ್ತಿದ್ದೇನೆ, ಕಳೆದ ಸೆಪ್ಟೆಂಬರ್ ತಿಂಗಳ ಅಧಿವೇಶನದಲ್ಲಿ ಈ ಪ್ರಶ್ನೆಯನ್ನು ಕೇಳಿದಾಗ ಮಾನ್ವಿ ಮತ್ತು ರಾಯಚೂರು ತಾಲ್ಲೂಕಿನಲ್ಲಿ case book ಮಾಡಿದ್ದೇವೆ ಎಂದು ಹೇಳಿ ವಿವರವನ್ನು ಕೊಟ್ಟಿದ್ದಾರೆ. ಆ case book ಮಾಡಿದ ಮೇಲೆ ಯಾರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ, ಯಾವ ಅಧಿಕಾರಿಯನ್ನು ಅಮಾನತ್ತು ಮಾಡಿದ್ದೀರಿ, ಏನು ಶಿಸ್ತು ಕ್ರಮ ತೆಗೆದುಕೊಂಡಿದ್ದೀರಿ, ಯಾವ ಮಧ್ಯವರ್ತಿಗಳ ಮೇಲೆ FIR file ಮಾಡಿದ್ದೀರಿ, ಮತ್ತೆ ಎಷ್ಟು ಜಮೀನನ್ನು ವಾಪಸ್ಸು ತೆಗೆದುಕೊಂಡಿದ್ದೀರಿ ಎಂಬುದನ್ನು ದಯವಿಟ್ಟು ಹೇಳಬೇಕೆಂದು ಮನವಿ ಮಾಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಗಮನಕ್ಕೆ ತಂದಿರುವಂತೆ ರಾಯಚೂರು ಜಿಲ್ಲೆ 53 ಮತ್ತು ಮಂಡ್ಯ ಜಿಲ್ಲೆ 2 ಈ ರೀತಿ ಒಟ್ಟು 55 ಫಲಾನುಭವಿಗಳಿಗೆ ಹಂಚಿಕೆಯಾದ ಆ ಭೂಮಿಯ ಸದುಪಯೋಗ ಆಗದೇ ಇರುವುದನ್ನು ಗಮನದಲ್ಲಿಟ್ಟುಕೊಂಡು ಜಿಪಿಎ ವ್ಯವಸ್ಥೆಯನ್ನು ಅಳವಡಿಸಿಕೊಂಡು ಸ್ಥಳದಲ್ಲಿಯೇ ನಿಂತುಕೊಂಡು ಅವರಿಗೆ ಹಸ್ತಾಂತರ ಮಾಡುವಂತಹ ಕೆಲಸಗಳನ್ನು ಮಾಡಿದ್ದೇವೆ. ಇಷ್ಟಾಗಿಯೂ ಕೂಡ ಲೋಪ-ದೋಷಗಳು ಇರಬಹುದು, ಇಲ್ಲವೆಂದು ಹೇಳುತ್ತಿಲ್ಲ. ಡಾ: ಬಾಬಾ ಸಾಹೇಬ್ ಅಂಬೇಡ್ಕರ್ ಅಭಿವೃದ್ಧಿ ನಿಗಮ ಮತ್ತು ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮ, ತಾಂಡಾ ಅಭಿವೃದ್ಧಿ ನಿಗಮ, ಆದಿ ಜಾಂಬವ ಅಭಿವೃದ್ಧಿ ನಿಗಮ, ಬೋವಿ ಅಭಿವೃದ್ಧಿ ನಿಗಮ ಈ ಎಲ್ಲಾ ಅಭಿವೃದ್ಧಿ ನಿಗಮಗಳ ಮೂಲಕ ಭೂ ಒಡೆತನ ಕೊಡುವಂತಹ ಕಾರ್ಯಕ್ರಮ ಆಗಿರುತ್ತದೆ. ಒಬ್ಬ ವ್ಯಕ್ತಿಗೆ ಎರಡು ಎಕರೆ ಅಂದರೆ 15 ಲಕ್ಷ ರೂಪಾಯಿಗಳ ಭೂಮಿಯನ್ನು ಹಸ್ತಾಂತರಿಸುವ ಕೆಲಸ ಇದರಲ್ಲಿ ಆಗಿರುವಂತಹದ್ದಾಗಿದೆ. ಅದರ ಮೊತ್ತವನ್ನೂ ಸಹ ಜಾಸ್ತಿ ಮಾಡುತ್ತೇವೆ. ಇದರ ಬಗ್ಗೆ ಏನೇನು ಕ್ರಮ ತೆಗೆದುಕೊಂಡಿದ್ದೀರಿ, ಯಾರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದಾರೆ. ಯಾವ ದಾಕ್ಷಿಣ್ಯವೂ ಇಲ್ಲದೆ ಕ್ರಮ ತೆಗೆದುಕೊಳ್ಳುತ್ತೇವೆ. ಅದರೂ ಕೂಡ ಸಮಸ್ಯೆ ಇರುವುದು ಸತ್ಯ. ನಾನು ಇಲ್ಲವೆಂದು ಹೇಳುತ್ತಿಲ್ಲ. ಅದಕ್ಕೋಸ್ಕರ ಡಾ:ವೈ.ಎ.ನಾರಾಯಣ ಸ್ವಾಮಿಯವರನ್ನು ಕರೆದು, ಈ ಅಧಿವೇಶನ ಮುಗಿದ ಒಂದು ವಾರದಲ್ಲಿ, ಶ್ರೀ ಬಸವರಾಜ ಪಾಟೀಲ್ ಇಟಗಿಯವರು ಒಂದು ಪತ್ರವನ್ನೇನು ಕೊಟ್ಟಿದ್ದಾರೆ, ಅದನ್ನು ಸಹ ಗಮನದಲ್ಲಿಟ್ಟುಕೊಂಡು ಒಂದು ವಿಶೇಷ ಸಭೆಯನ್ನು ಕರೆದು ಆಗಿರುವಂತಹ ಒಟ್ಟು ಪ್ರಗತಿ ಬಗ್ಗೆ ಯೋಚನೆ ಮಾಡುತ್ತೇವೆ. ತಮ್ಮ ಗಮನಕ್ಕೂ ತಂದು, ಯಾರ ಯಾರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕೆಂದರೆ ಕ್ರಮ ತೆಗೆದುಕೊಳ್ಳುತ್ತೇವೆ. ಇದರಲ್ಲಿ ಯಾರನ್ನೂ ಸಹ ರಕ್ಷಣೆ ಮಾಡುವಂತಹ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಚಾರದಲ್ಲಿ ನಮಗೆ ಆಸಕ್ತಿ ಇಲ್ಲ. ಬಹಳ ಗಟ್ಟಿಯಾಗಿ ಭೂ ಒಡೆತನ ಯೋಜನೆಯನ್ನು ಅನುಷ್ಠಾನ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಪ್ರಶ್ನೆ ಸಂಖ್ಯೆ: 683**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವಿಜಯಸಿಂಗ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಹುಣಸೂರು ತಾಲ್ಲೂಕಿನ ಬಹಳಷ್ಟು ಕಡೆ ಬಸ್ ನಿಲ್ದಾಣ ಇಲ್ಲವೆಂದು ಹೇಳಿದ್ದಾರೆ. ಅದನ್ನು ಯಾವಾಗ ಪ್ರಾರಂಭ ಮಾಡುತ್ತಾರೆನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, 2017ರಲ್ಲಿ ಬೀದರ್ ಜಿಲ್ಲೆಯ ಬಸವ ಕಲ್ಯಾಣ ಮತ್ತು ಬಾಲ್ಕಿ ಸೇರಿದಂತೆ ಅನೇಕ ಕಡೆಗಳಲ್ಲಿ ಬಸ್ ನಿಲ್ದಾಣವಿಲ್ಲವೆಂದು ಹೇಳಿದ್ದಾರೆ. ಇದು 2017ರಲ್ಲಿ ಹುಲಸೂರನ್ನು ಹೊಸ ತಾಲ್ಲೂಕಾಗಿ ಘೋಷಣೆ ಮಾಡಲಾಗಿತ್ತು. ಆ ತಾಲ್ಲೂಕಿನ ಕೇಂದ್ರ ಸ್ಥಾನದಲ್ಲಿ ಬಸ್ ನಿಲ್ದಾಣವನ್ನು ಮಾಡಲಾಗಿದೆ. ಆದರೆ, ಕೆಲವು ಹಳ್ಳಿಗಳಲ್ಲಿ ಇಲ್ಲವೆನ್ನುವ ಅವರ ಉಲ್ಲೇಖ ಇದೆ. ಅವರು ಹೇಳಿರುವುದು ಸತ್ಯ ಇದೆ, ಇಲ್ಲವೆಂದು ಹೇಳುತ್ತಿಲ್ಲ. ಹುಲಸೂರು ತಾಲ್ಲೂಕಿನ ಮೂರು ಗ್ರಾಮಗಳಾದ ಗಡಿಗೌಡಗಾಂವ, ಗೋರ್ಟಾ ಮತ್ತು ಮುಚಳಂಬ ಗ್ರಾಮಗಳಲ್ಲಿ ಬಸ್ ನಿಲ್ದಾಣಗಳಿಲ್ಲ. ಬಸ್ ನಿಲ್ದಾಣ ಎಂದು ಮಾಡಿಲ್ಲ. Bus Shed ಎಂದು ಮಾಡಲಾಗಿದೆ. ತಂಗುದಾಣ ಎಂದು ಹೇಳಿ ಮಾಡಿರುತ್ತೇವೆ. ಕೆಲವು ಕಡೆಗಳಲ್ಲಿ ಸ್ಥಳಗಳು ಇಲ್ಲ. ಸಾಮಾನ್ಯವಾಗಿ ನಮ್ಮ ಸಂಸ್ಥೆಯ ನಿಯಮಾವಳಿಯಂತೆ ಹೋಬಳಿ ಮಟ್ಟದಲ್ಲಿ 50 ಬಸ್‌ಗಳು ಸಂಚರಿಸುವಂತಹ ಕೇಂದ್ರಗಳಲ್ಲಿ ಕಿರು ಬಸ್ ನಿಲ್ದಾಣ ಮಾಡುವಂತಹ ಸಂಪ್ರದಾಯಗಳಿವೆ. ಆದರೆ, ಕೆಲವು ಕಡೆ ನಿವೇಶನ ಸಿಕ್ಕಿಲ್ಲ. ಆ ನಿವೇಶನದ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ಮತ್ತು ನಮಗೆ ಈಗ ಇರುವಂತಹ ಅನುದಾನವನ್ನು ಗಮನದಲ್ಲಿಟ್ಟುಕೊಂಡು ಮುಂದಿನ ದಿನಗಳಲ್ಲಿ ಬಸ್ ನಿಲ್ದಾಣವನ್ನು ಮಾಡುತ್ತೇವೆ, ಎನ್ನುವಂತಹ ಉತ್ತರವನ್ನು ಕೊಟ್ಟಿದ್ದೇವೆ. ಸದರಿ ತಾಲ್ಲೂಕಿಗೆ ಒಳಪಡುವ ಗ್ರಾಮಗಳಾದಂತಹ ಬಸವ ಕಲ್ಯಾಣ ಹಾಗೂ ಬಾಲ್ಕಿ ಘಟಕದಿಂದ ಸಾರಿಗೆ ಸೌಲಭ್ಯವನ್ನು ಒದಗಿಸಬೇಕೆಂದು ಹೇಳಿದ್ದಾರೆ. ಅವರು ಹೇಳಿರುವಂತಹ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಹಲಸೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಒಟ್ಟು 22 ಗ್ರಾಮಗಳಲ್ಲಿ ಬಸ್ ಬರುತ್ತಿದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

(1142) 17.12.2021 12.00 ಎಸ್‌ವಿ-ಬಿಎನ್‌ಎಸ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು):-**

ಒಟ್ಟು 22 ಗ್ರಾಮಗಳಿದ್ದು, ಅವುಗಳಲ್ಲಿ 18 ಗ್ರಾಮಗಳಿಗೆ ಬಸ್‌ಗಳು ಸಂಚರಿಸುತ್ತಿವೆ. ಉಳಿದಿರುವ 4 ಗ್ರಾಮಗಳಿಗೆ ಬಸ್ ಸಂಚಾರ ಆರಂಭಿಸಲು ಬೇಕಾದಂತಹ ಕ್ರಮವನ್ನು ಸರ್ಕಾರದಿಂದ ತೆಗೆದುಕೊಳ್ಳಲಾಗುತ್ತದೆ.

**ಶ್ರೀ ವಿಜಯ್ ಸಿಂಗ್:-** ಮಾನ್ಯ ಸಚಿವರೇ, ತಾವು ಉತ್ತರದಲ್ಲಿ ತಿಳಿಸಿರುವ ವೇಳಾ ಪಟ್ಟಿಯಲ್ಲಿರುವಂತೆ ಬಸ್‌ಗಳು ಓಡಾಡುತ್ತಿಲ್ಲ. ಕೋವಿಡ್‌ನಲ್ಲಿ ಬಹಳಷ್ಟು ಬಸ್‌ಗಳು ನಿಂತು ಹೋಗಿತ್ತು. ಅದನ್ನು ಇನ್ನೂ ಪುನರಾರಂಭಿಸಿರುವುದಿಲ್ಲ. ಆ ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿಯಾಗಿದೆ. ಕೋವಿಡ್‌ನ ಕಾರಣದಿಂದಾಗಿ ಕೆಲವು ಕಡೆಗಳಲ್ಲಿ ಬಸ್‌ಗಳನ್ನು ನಿಲ್ಲಿಸಲಾಗಿದೆ. ಪ್ರಯಾಣಿಕರ ಕೊರತೆಯಿದ್ದುದರಿಂದ ಪುನರಾರಂಭಿಸಲಾಗಿರಲಿಲ್ಲ. ಈಗ ಇಡೀ ರಾಜ್ಯದಲ್ಲಿ ಪ್ರಾರಂಭಿಸಲಾಗುತ್ತಿದೆ. ಹುಲಸೂರು ಗ್ರಾಮಕ್ಕೆ ವಿಶೇಷವಾದ ಗಮನವನ್ನು ಕೊಟ್ಟು ಸದ್ಯದಲ್ಲಿಯೇ ಬಸ್ ಅನ್ನು ಓಡಿಸುವ ಪ್ರಯತ್ನವನ್ನು ಮಾಡುತ್ತೇವೆ.

**ಶ್ರೀ ವಿಜಯ್ ಸಿಂಗ್:-** ಮಾನ್ಯ ಸಚಿವರೇ, ಬಸವ ಕಲ್ಯಾಣದಲ್ಲಿಯೂ ಸಾಕಷ್ಟು ಸಂಖ್ಯೆಯಲ್ಲಿ ಬಸ್‌ಗಳು ಓಡಾಡುತ್ತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವುದನ್ನು ಗಮನದಲ್ಲಿಟ್ಟು ಕೊಂಡು ಬಸ್ ಓಡಿಸಲು ಕ್ರಮ ಕೈಗೊಳ್ಳಲಾಗುವುದು. ಇಡೀ ರಾಜ್ಯವ್ಯಾಪಿ ಈ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮುಂದಿನ ಪ್ರಶ್ನೆ ಶ್ರೀ ಎಸ್.ವ್ಹಿ.ಸಂಕನೂರ ಅವರ ಪರವಾಗಿ ಶ್ರೀ ಅರುಣ ಶಹಾಪುರ ಅವರು ಕೇಳಬೇಕು.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಉತ್ತರ ಬಂದಿರುವುದಿಲ್ಲ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಕೃಷಿ ಸಚಿವರು ಸದನದಲ್ಲಿ ಇಲ್ಲ, ಉತ್ತರವೂ ಬಂದಿಲ್ಲ. ನನಗೆ ಅವರು ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಸಚಿವರು ಬರುವುದಿಲ್ಲ ಎಂಬುದನ್ನು ಮಾನ್ಯ ಸಭಾನಾಯಕರು ನನಗೆ ತಿಳಿಸಲಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತಿಳಿಸಬೇಕಾಗಿತ್ತು. ಆದರೆ ನನಗೆ ಮಾಹಿತಿ ಬಂದಿರಲಿಲ್ಲ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಪ್ರಶ್ನೆ ಸಂಖ್ಯೆ: 694**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ವಸತಿ ವಿದ್ಯಾರ್ಥಿ ನಿಲಯಗಳ ಪಟ್ಟಿಯನ್ನು ನೀಡುವ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆನು. ಅವರು ವಿಂಗಡಿಸಿ ಪಟ್ಟಿಯನ್ನು ಕೊಟ್ಟಿದ್ದಾರೆ. 68 ಸರ್ಕಾರಿ ವಸತಿ ಶಾಲೆಗಳಲ್ಲಿ co-education ಇರುವ ಶಾಲೆಗಳು ಎಷ್ಟು ಎಂಬುದು ತಿಳಿಯುತ್ತಿಲ್ಲ. ಅದರಲ್ಲಿ bifurcation ಮಾಡಿರುವುದಿಲ್ಲ. ಕಳೆದ ಸರ್ಕಾರದಲ್ಲಿ ಮಾನ್ಯ ಆಂಜನೇಯ ಅವರು ಇಲಾಖಾ ಮಂತ್ರಿಗಳಾಗಿದ್ದಾಗ ನಾವು ಮಹಿಳೆಯರು ಹಾಸ್ಟೆಲ್‌ಗಳ ಸಮೀಕ್ಷೆಯನ್ನು ಮಾಡಿ ಒಂದು ವರದಿಯನ್ನು ಕೊಟ್ಟಿದ್ದೆವು. ಆ ಸಂದರ್ಭದಲ್ಲಿ ಇಡೀ ರಾಜ್ಯದ 558 ವಸತಿ ನಿಲಯಗಳ ಕುಂದು ಕೊರತೆಗಳನ್ನು ಅದರಲ್ಲಿ ಉಲ್ಲೇಖ ಮಾಡಲಾಗಿತ್ತು. ಅದರಲ್ಲಿ ಹೆಚ್ಚುವರಿ ಕೊಠಡಿಗಳನ್ನು, ಶೌಚಾಲಯಗಳನ್ನು ನಿರ್ಮಿಸಲಾಗಿದ್ದು, ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆಯೆಂದು ಹೇಳಿದ್ದಾರೆ. ಇಂದಿನವರೆವಿಗೂ ಯಾವುದೇ ವಸತಿ ನಿಲಯದಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇರುವುದಿಲ್ಲ. ನಲ್ಲಿಯಲ್ಲಿ ಬರುವ ನೀರನ್ನೇ ಕುಡಿಯುತ್ತಿದ್ದಾರೆ. ಅನೇಕ ವಿದ್ಯಾರ್ಥಿ ನಿಲಯಗಳಲ್ಲಿ ಒಂದು ಟ್ರಂಕ್‌ನ ಮೇಲೆ ಮತ್ತೊಂದು ಟ್ರಂಕ್ ಇಟ್ಟು ಕೆಳಗೆ ಮಲಗುತ್ತಿದ್ದಾರೆ. ಇದರಿಂದ ಕೊಠಡಿಗಳ ಸಂಖ್ಯೆ ಕಡಿಮೆಯಿದ್ದು ಸ್ಥಳದ ಅಭಾವವಿರುವುದು ಕಂಡು ಬರುತ್ತದೆ. ಹೆಚ್ಚು ಸಂಖ್ಯೆಯಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಅದು ಇಲ್ಲಿಯವರೆವಿಗೂ ಆಗಿರುವುದಿಲ್ಲ.

ಮಹಿಳಾ ವಿದ್ಯಾರ್ಥಿ ನಿಲಯಗಳಲ್ಲಿ ಹೆಣ್ಣುಮಕ್ಕಳ ರಕ್ಷಣೆಯ ದೃಷ್ಟಿಯಿಂದ ಸಿ.ಸಿ. ಕ್ಯಾಮೆರಾಗಳನ್ನು ಅಳವಡಿಸಲಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. 558 ವಸತಿ ನಿಲಯಗಳಲ್ಲಿ ಎಷ್ಟು ವಸತಿ ನಿಲಯಗಳಲ್ಲಿ ಸಿ.ಸಿ. ಕ್ಯಾಮೆರಾಗಳನ್ನು ಅಳವಡಿಸಲಾಗಿದೆ ಎನ್ನುವ ಮಾಹಿತಿಯನ್ನು ನೀಡಬೇಕು. ಕಾಂಪೌಂಡ್‌ಗೆ fencing ಹಾಕುವುದನ್ನು ಕೂಡ ಉತ್ತರದಲ್ಲಿ ಉಲ್ಲೇಖಿಸಲಾಗಿದೆ. ಅನೇಕ ಹಾಸ್ಟೆಲ್‌ಗಳಲ್ಲಿ ಇಂದಿಗೂ ಕೂಡ compound wall ಇರುವುದಿಲ್ಲ. ಇನ್ನು fencing ಎಲ್ಲಿ ಬರುತ್ತದೆ. ಬೇಲಿಗಳನ್ನು ಅಳವಡಿಸಲಾಗಿದೆ. ಮಂಡ್ಯದಲ್ಲಿರುವ ಹಾಸ್ಟೆಲ್ ವಾರ್ಡನ್ ಅನ್ನು ನಾನು ಇತ್ತೀಚೆಗೆ ಸಂಪರ್ಕಿಸಿದ ಸಂದರ್ಭದಲ್ಲಿ ತಮ್ಮ ಅಳಲನ್ನು ತೋಡಿಕೊಂಡರು. ಹದಿಹರೆಯದ ಹೆಣ್ಣುಮಕ್ಕಳು ಇರುವ ಜಾಗಕ್ಕೆ ಬೇಲಿಯೊಳಗಿನಿಂದ ನುಸುಳಿಕೊಂಡು ಗಂಡು ಮಕ್ಕಳು ಬರುತ್ತಾರೆ. ಅವರನ್ನು ನಿಯಂತ್ರಿಸುವುದು ನಮಗೆ ಕಷ್ಟವಾಗುತ್ತದೆ ಎಂದು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸೈಬರ್ ಕ್ರಾಂತಿಯ ಬಗ್ಗೆ ಮಾತನಾಡಿದರು. ಮೊಬೈಲ್ ಅನ್ನು ಇಷ್ಟು ಸಮಯದವರೆಗೆ ಮಕ್ಕಳಿಗೆ ಬಳಸಲು ಅವಕಾಶ ಮಾಡಿಕೊಡಬಹುದಾಗಿದೆ. ಆದರೆ ಆ ಸಂದರ್ಭದಲ್ಲಿ ಅದರಲ್ಲಿ ಬರುವ ಮೆಸೇಜ್‌ಗಳು, ಅದರಲ್ಲಿ ಬರುವ ಫೋನ್‌ಗಳು ಹೀಗೆ ಯಾವ ರೀತಿ ಮಕ್ಕಳನ್ನು ನಿಯಂತ್ರಿಸಲು ಸಾಧ್ಯ ಎಂದು ವಾರ್ಡನ್‌ರವರು ಕೇಳುತ್ತಾರೆ. ಇದಕ್ಕೆ ಸರ್ಕಾರದಿಂದ ಕೌನ್ಸಿಲಿಂಗ್ ಇಲ್ಲ. ಕಳೆದ ಬಾರಿ ಸರ್ಕಾರವು ಪ್ರತಿ ವಸತಿ ನಿಲಯದಲ್ಲಿ ಕೌನ್ಸಿಲಿಂಗ್ ವ್ಯವಸ್ಥೆಯನ್ನು ಮಾಡಬೇಕೆಂದು ನಾವು ಕೇಳಿದ್ದೆವು. ನನಗೆ ಮಾನ್ಯ ಸಚಿವರಲ್ಲಿ ವಿಶ್ವಾಸವಿದೆ. ದಯಮಾಡಿ ಇಂತಹ ಕುಂದು ಕೊರತೆಗಳನ್ನು ಸರಿಪಡಿಸಿ ಹದಿಹರೆಯದ ಓದುವ ಮಕ್ಕಳಿಗೆ ಪೂರಕವಾದಂತಹ ವಾತಾವರಣವನ್ನು ಕೊಡುವಂತಹ ಯೋಚನೆ ಮತ್ತು ಯೋಜನೆಯನ್ನು ಸರ್ಕಾರ ರೂಪಿಸಬೇಕೆಂದು ತಮ್ಮ ಮೂಲಕ ಮಂತ್ರಿಗಳಲ್ಲಿ ವಿನಂತಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಭಾರತಿ ಶೆಟ್ಟಿಯವರು ಕೇಳಿರುವಂತಹ ಎಲ್ಲಾ ಮಾಹಿತಿಗಳನ್ನು ಒದಗಿಸಲಾಗಿದೆ. ನಮ್ಮ ಸಮಾಜ ಕಲ್ಯಾಣ ಇಲಾಖೆಯಲ್ಲಿ 1867 ಹಾಸ್ಟೆಲ್‌ಗಳು, 68 ವಸತಿ ಶಾಲೆಗಳು ಮತ್ತು 826 ವಸತಿ ಶಿಕ್ಷಣ ಸಂಸ್ಥೆಗಳಿವೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ 2438 ಹಾಸ್ಟೆಲ್‌ಗಳು ಮತ್ತು 18 ಆಶ್ರಮ ಶಾಲೆಗಳಿವೆ. ಅವರು ಇದಕ್ಕೆ ಏನೇನು ಮೂಲಭೂತ ಸೌಕರ್ಯಗಳಿವೆ ಎಂದು ಕೇಳಿದ್ದಾರೆ. ಎಲ್ಲಾ ವಿದ್ಯಾರ್ಥಿಗಳಿಗೆ ಭೋಜನ ವ್ಯವಸ್ಥೆ, ಸಾಬೂನು, ಪೇಸ್ಟ್, ಕೊಬ್ಬರಿ ಎಣ್ಣೆ ಇತ್ಯಾದಿಯೊಳಗೊಂಡಂತೆ ಕಿಟ್‌ಗಳನ್ನು ನೀಡಲಾಗಿದೆ. ಶಿಕ್ಷಣ, ಸಮವಸ್ತ್ರಗಳು, ಹಾಗೂ ಲೇಖನ ಸಾಮಗ್ರಿಗಳನ್ನು ನೀಡಲಾಗಿದೆ. ಸಿ.ಸಿ. ಕ್ಯಾಮೆರಾಗಳನ್ನು ಎಲ್ಲಾ ಕಡೆಗಳಲ್ಲಿಯೂ ಅಳವಡಿಸಿದ್ದೇವೆ.

ಮಾನ್ಯ ಸದಸ್ಯರು ಇನ್ನೂ ಕೆಲವು ಶಾಲೆಗಳಲ್ಲಿ ಕೊರತೆ ಇದೆ ಎಂದು ಹೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ನಾನು ಮತ್ತು ನಮ್ಮ ಇಲಾಖೆಯವರೆಲ್ಲಾ ಹೋಗಿ ಮಾತನಾಡಿದ್ದೇನೆ. ಸುಮಾರು 1.5 ಲಕ್ಷ ವಿದ್ಯಾರ್ಥಿಗಳು ಹಾಸ್ಟೆಲ್ ಸೌಲಭ್ಯಕ್ಕಾಗಿ ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಬೇಡಿಕೆಯನ್ನು ಇಟ್ಟಿದ್ದಾರೆ. ಅದಕ್ಕಾಗಿ ಇಂದು ಸಂಜೆಯೊಳಗೆ ಮುಖ್ಯಮಂತ್ರಿಯವರು ಇಂದು ಸಂಜೆಯೊಳಗಾಗಿ ಸ್ವಲ್ಪ ಪರಿಹಾರವನ್ನು ಮಾಡಿಕೊಡಲಾಗುವುದು ಎಂದು ಹೇಳಿದ್ದಾರೆ. ಈಗ ಇರುವಂತಹ ಹಾಸ್ಟೆಲ್‌ಗಳನ್ನು ಹೆಚ್ಚು ಮಾಡಲು ಸಾಧ್ಯವಾಗುತ್ತದೆಯೇ ಎಂದು ನೋಡುತ್ತೇವೆ. ಜಿಲ್ಲಾವಾರು ಒಂದೆರಡು ಹಾಸ್ಟೆಲ್‌ಗಳನ್ನು ಬಾಡಿಗೆಗೆ ತೆಗೆದುಕೊಂಡು ಹೊಂದಿಸಲು ಸಾಧ್ಯವಾಗುತ್ತದೆಯೇ ಎಂದು ನೋಡುತ್ತೇವೆ. ಮಾನ್ಯ ಸದಸ್ಯರು ಹಾಸ್ಟೆಲ್‌ಗಳ ಆವರಣ ಗೋಡೆ ಸರಿಯಿಲ್ಲವೆಂದು ಹೇಳುತ್ತಿದ್ದಾರೆ. ಈಗಾಗಲೇ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಆವರಣ ಗೋಡೆ ಮಾಡುವವರಿಗೆ ಅವಕಾಶವನ್ನು ಮಾಡಿಕೊಡಲಾಗಿದೆ. ಜೊತೆಗೆ ನಮ್ಮ ಇಲಾಖೆಯಲ್ಲಿ

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

ಲಭ್ಯವಿರುವ ಅನುದಾನದೊಂದಿಗೆ ಮಾಡಿರುತ್ತೇವೆ. ಸಿ.ಸಿ. ಕ್ಯಾಮೆರಾ ಅಳವಡಿಸಲಾಗಿದೆ. ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲಾಗಿದೆ. ಒಟ್ಟಾರೆ ವ್ಯವಸ್ಥೆಯಲ್ಲಿ ಮಕ್ಕಳ ಪೂರ್ಣ ರಕ್ಷಣೆಯು, ಅವರಿಗೆ ಬೇಕಾದ ಮೂಲಭೂತ ಸೌಕರ್ಯಗಳು ಹಾಗೂ ಆಹಾರ ಸಾಮಗ್ರಿಗಳು ಪಾರದರ್ಶಕವಾಗಿರಬೇಕೆಂದು ಮಾಡಿದ್ದೇವೆ. ಕೆಲವು ಕಡೆ ಲೋಪದೋಷಗಳಿದ್ದಲ್ಲಿ ಅವುಗಳನ್ನು ತಿದ್ದುವಂತಹ ಕೆಲಸವನ್ನು ಮಾಡಲಾಗುವುದು. ಅಧಿಕಾರಿಗಳಿಂದ ತಪ್ಪು ನಡೆದರೆ ನಿರ್ದಾಕ್ಷಿಣ್ಯವಾಗಿ ಅವರಿಗೆ ಶಿಕ್ಷೆಯನ್ನು ಕೊಡುವಂತಹ ಕೆಲಸ ಆಗಬೇಕಾಗಿದೆ. ಸರಿಯಾಗಿ ಕೆಲಸ ಮಾಡುವ ಅಧಿಕಾರಿಗಳಿಗೆ ಪ್ರೋತ್ಸಾಹ ಕೊಡುವಂತಹ ಕೆಲಸ ಆಗಬೇಕಾಗಿದೆ. ಈ ಹಾಸ್ಟೆಲ್‌ಗಳನ್ನು ಅತ್ಯುತ್ತಮವಾಗಿ ನಡೆಸಬೇಕು ಎನ್ನುವುದರಲ್ಲಿ ಎರಡನೆಯ ಮಾತಿಲ್ಲ. ಇನ್ನೂ ಏನಾದರೂ ಸಲಹೆಗಳನ್ನು ಮಾನ್ಯ ಭಾರತಿ ಶೆಟ್ಟಿಯವರು ಹೇಳಿದರೆ ಅದನ್ನು ಕೂಡ ಅಳವಡಿಸಲಾಗುವುದು.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, 68 ವಸತಿ ಶಾಲೆಗಳಲ್ಲಿ ಮಹಿಳೆಯರದ್ದು ಎಷ್ಟು, ಪುರುಷರದ್ದು ಎಷ್ಟು ಎಂಬುದನ್ನು ಹೇಳಿರುವುದಿಲ್ಲ. ರಕ್ಷಣೆಗಾಗಿ ಕರಾಟೆ ತರಬೇತಿ ಕಾರ್ಯಕ್ರಮವನ್ನು ಪ್ರಾರಂಭಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಅಂದರೆ ಇದುವರೆವಿಗೂ ಪ್ರಾರಂಭಿಸಿರುವುದಿಲ್ಲ. ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಆಗಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯು ಎಲ್ಲಾ ಕಡೆಗಳಲ್ಲಿ ಇದೆ. ನಾನೇ ಕೆಲವು ಕಡೆಗಳಲ್ಲಿ ನೋಡಿದಂತೆ ಲೋಪವಿರುವುದನ್ನು ಕೂಡ ಸರಿಪಡಿಸಲಾಗಿದೆ. ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ಶಾಲೆಗಳು 300 ಇದೆ. ಮೆಟ್ರಿಕ್ ನಂತರದ ಬಾಲಕಿಯರ ವಸತಿ ಶಾಲೆಗಳು 257 ಇದೆ. 557 ಬಾಲಕಿಯರ ವಸತಿ ಶಾಲೆಗಳಿವೆ ಎನ್ನುವುದನ್ನು ಉಲ್ಲೇಖ ಮಾಡಬಯಸುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾನು 68 ವಸತಿ ಶಾಲೆಗಳಲ್ಲಿ ಕೇಳುತ್ತಿದ್ದೇನೆ. ಅವುಗಳಲ್ಲಿ ಬಾಲಕರ ಶಾಲೆಗಳೆಷ್ಟು, ಬಾಲಕಿಯರ ಶಾಲೆಗಳೆಷ್ಟು ಎಂಬುದನ್ನು ಕೇಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ಸದನ ಮುಗಿಯುವುದರೊಳಗಾಗಿ ಅವರಿಗೆ ವಿವರಗಳನ್ನು ಕೊಡುತ್ತೇನೆ.

**ಪ್ರಶ್ನೆ ಸಂಖ್ಯೆ: 685**

(ಮಾನ್ಯ ಸದಸ್ಯರಾದ ಶ್ರೀ ಸುನಿಲ್ ವಲ್ಯಾಪುರೆ ಅವರು ಸದನದಲ್ಲಿ ಉಪಸ್ಥಿತರಿರಲಿಲ್ಲ)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

## ಪ್ರಶ್ನೆ ಸಂಖ್ಯೆ 616
## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಭಿಕ್ಷಾಟನೆಯ ಹೆಸರಿನಲ್ಲಿ ಹಲವು ಅಕ್ರಮ ಚಟುವಟಿಕೆಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನಾನು ಕೇಳಿದ್ದು, ಬಂದಿದೆ ಎಂಬ ಉತ್ತರವನ್ನು ನೀಡಲಾಗಿದೆ. ಅದೇ ರೀತಿ ಭಿಕ್ಷಾಟನೆಗೆ ಹೆಚ್ಚಾಗಿ ಚಿಕ್ಕ ಮಕ್ಕಳನ್ನು ಬಳಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೆನು. ಅದಕ್ಕೂ ಸಹ ಬಂದಿದೆ ಎಂದು ಉತ್ತರ ನೀಡಿದ್ದಾರೆ. ಬಂದಿದ್ದರೆ, ಇದುವರೆಗೂ ಎಷ್ಟು ಅಕ್ರಮ ಚಟುವಟಿಕೆಗಳ ಪ್ರಕರಣ ನಡೆದಿವೆ; ತೆಗೆದುಕೊಂಡಿರುವ ಕ್ರಮಗಳೇನು ಎಂದು ಕೇಳಿದ್ದೆನು. ಅದಕ್ಕೆ ವಿವರಗಳನ್ನು ಒದಗಿಸಿದ್ದಾರೆ. 2021ನೇ ಇಸವಿಯಲ್ಲಿ 6 ಮಕ್ಕಳನ್ನು ರಕ್ಷಣೆ ಮಾಡಿ ಆರೋಪಿಯನ್ನು ಬಂಧಿಸಿರುವ ಬಗ್ಗೆ ಅನುಬಂಧ-1 ರಲ್ಲಿ ನೀಡಿದ್ದಾರೆ. ಕೇವಲ ಒಂದು ಪ್ರಕರಣ ಮಾತ್ರ ಹೊರಗೆ ದಾಖಲಾಗಿದೆ. ಬೆಂಗಳೂರಿನಲ್ಲಿ ಭಿಕ್ಷಾಟನೆ ಮಾಡುತ್ತಿದ್ದಂತಹ 22 ಮಕ್ಕಳನ್ನು ರಕ್ಷಣೆ ಮಾಡಲಾಗಿದೆ. ಅಂದರೆ ರಾಜ್ಯದ ಇತರ ಭಾಗಗಳಲ್ಲಿ ಮಕ್ಕಳು ಭಿಕ್ಷಾಟನೆ ಮಾಡುತ್ತಿಲ್ಲವೆಂದು ಅರ್ಥವೇ? ಪೊಲೀಸ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳು ಈ ನಿಟ್ಟಿನಲ್ಲಿ ಒಂದಾಗಿ ಕೆಲಸ ಮಾಡುತ್ತಿಲ್ಲವೇ ಎಂಬುದಕ್ಕೆ ಮಾನ್ಯ ಸಚಿವರು ದಯಮಾಡಿ ಉತ್ತರಿಸಬೇಕು.

(ಮುಂದು)

(1143) 17-12-2021 (12.10) ಕೆಜಿ – ಬಿಎನ್‌ಎಸ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಗೋವಿಂದ ರಾಜು (ಮುಂದು):-**

ಇದಲ್ಲದೆ, ಸಾರ್ವಜನಿಕರು ಬೀದಿ ಬದಿ ಮಕ್ಕಳಿಂದ ವಸ್ತುಗಳನ್ನು ಖರೀದಿಸುವುದು ಅಥವಾ ಮಕ್ಕಳಿಗೆ ಭಿಕ್ಷೆ ನೀಡುವುದರಿಂದಾಗುವ ದುಷ್ಪರಿಣಾಮಗಳ ಕುರಿತು ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಅರಿವು ಮೂಡಿಸಲು ಹಲವಾರು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಇದರಲ್ಲಿ ಯಾವ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆಂದು ಮಾನ್ಯ ಸಚಿವರು ತಿಳಿಸಬೇಕು. ಮುಂದಿನ ಪ್ರಶ್ನೆಯನ್ನು ಮತ್ತೆ ಕೇಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಗೋವಿಂದರಾಜುರವರು ಇಡೀ ಸಮಾಜಕ್ಕೆ ಬಹಳ ಉಪಯೋಗವಾಗುವಂತಹ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಈ ಪ್ರಶ್ನೆಯನ್ನು ಕೇಳಿದ್ದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಮಾನ್ಯ ಸದಸ್ಯರೇ ಉಲ್ಲೇಖ ಮಾಡಿರುವಂತೆ ಸಮಾಜ ಕಲ್ಯಾಣ ಇಲಾಖೆ, ಗೃಹ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲಾಖೆಗಳು ಸೇರಿದಂತೆ ಮಕ್ಕಳು ಭಿಕ್ಷಾಟನೆ ಮಾಡುವುದನ್ನು ನಿಯಂತ್ರಣ ಮಾಡುವುದು ಮತ್ತು ಮಕ್ಕಳನ್ನು ರಕ್ಷಣೆ ಮಾಡುವಂತಹದ್ದು ಈ ಮೂರು ಇಲಾಖೆಗಳ ಜವಾಬ್ದಾರಿಯಾಗಿದೆ. ಭಿಕ್ಷಾಟನೆ ಮಾಡಿದವರನ್ನು ನಿಯಂತ್ರಣ ಮಾಡುವುದು ಮತ್ತು ಅವರಿಗೆ ಪುನರ್ವಸತಿ ಕಲ್ಪಿಸುವುದು ನಮ್ಮ ಇಲಾಖೆಯಲ್ಲಿ ಇರುವಂತಹ ಬಹು ಮುಖ್ಯವಾದ ಭಾಗವಾಗಿದೆ. ಆದರೂ ಸಹ, ಇದು ನಮ್ಮ ಇಡೀ ರಾಜ್ಯದ ಸಮಸ್ಯೆ ಆಗಿರುವುದರಿಂದ ನಾನು ಈ ವಿಚಾರದಲ್ಲಿ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಂಡು ಹೇಳುತ್ತಿದ್ದೇನೆ.

ನಮ್ಮ ರಾಜ್ಯದ 14 ಜಿಲ್ಲೆಗಳಲ್ಲಿ ಪುನರ್ವಸತಿ ಕೇಂದ್ರಗಳಿವೆ. ಯಾರೇ ಭಿಕ್ಷಾಟನೆ ಮಾಡಿದರೂ ಸಹ, ಸಾರ್ವಜನಿಕರ ದೂರು ಇಲ್ಲದಿದ್ದರೂ ಸಹ ಅವರಿಗೆ ಪುನರ್ವಸತಿ ಮಾಡುವಂತಹದ್ದು ಇದೆ. ಈ ಬಾರಿ ಮತ್ತೆ 4 ಪುನರ್ವಸತಿ ಕೇಂದ್ರಗಳು ಮಂಜೂರಾಗಿವೆ. ಉಳಿದಿರುವಂತಹ 12 ಜಿಲ್ಲೆಗಳಲ್ಲಿ ಇದೇ ವರ್ಷದಲ್ಲಿ ಅಂದರೆ, ಇನ್ನು 2-3 ತಿಂಗಳುಗಳಲ್ಲಿ ಪುನರ್ವಸತಿ ಕೇಂದ್ರಗಳನ್ನು ಸ್ಥಾಪನೆ ಮಾಡುತ್ತೇವೆ. ಮಾನ್ಯ ಸದಸ್ಯರು, ಭಿಕ್ಷಾಟನೆಗೆ ಹೆಚ್ಚಾಗಿ ಚಿಕ್ಕ ಮಕ್ಕಳನ್ನು ಬಳಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಬಹಳ ಗಂಭೀರವಾದಂತಹ ಪ್ರಶ್ನೆಯನ್ನು ಕೇಳಿದ್ದಾರೆ. ಇದರಲ್ಲಿ ಎರಡು ರೀತಿ ಇದೆ. ಮೊದಲನೆಯದಾಗಿ, ಅವರ ಮಕ್ಕಳನ್ನು ಭಿಕ್ಷಾಟನೆಗೆ ಬಳಸಿಕೊಳ್ಳುತ್ತಿದ್ದಾರೆ. ಮೊತ್ತೊಂದು ವಿಚಿತ್ರವಾದಂತಹ ದಂಧೆ ನಡೆಯುತ್ತಿದೆ. ಯಾರದೋ ಮಕ್ಕಳನ್ನು ಪಡೆದುಕೊಂಡು ಇವರ ಬೆನ್ನಿಗೆ ಕಟ್ಟಿಕೊಂಡು ಸಂಜೆಯವರೆಗೆ ಬಸ್ ನಿಲ್ದಾಣಗಳಲ್ಲಿ ಮತ್ತು ಸಾರ್ವಜನಿಕರ ಸ್ಥಳಗಳಲ್ಲಿ ಭಿಕ್ಷಾಟನೆಗೆ ಉಪಯೋಗಿಸಿಕೊಳ್ಳುವಂತಹದ್ದು ಇದೆ. ಇದರಲ್ಲಿ ಹಲವಾರು ಪ್ರಕರಣಗಳನ್ನು ದಾಖಲು ಮಾಡಿದ್ದೇವೆ. ಆದರೂ ಸಹ ಈ ದಂಧೆ ನಿಂತಿಲ್ಲ. ಇನ್ನು ಕೆಲವೇ ದಿವಸಗಳಲ್ಲಿ ಈ ಮೂರು ಇಲಾಖೆಗಳ ಜೊತೆಯಲ್ಲಿ ಆಸಕ್ತ ಸದಸ್ಯರ ಸಭೆಯನ್ನು ಕರೆದು ಇದಕ್ಕೆ ಚುರುಕು ಮುಟ್ಟಿಸುವಂತಹ ಕೆಲಸವನ್ನು ಮಾಡುತ್ತೇವೆ ಮತ್ತು ಇದರಲ್ಲಿ ಮಕ್ಕಳ ಭಿಕ್ಷಾಟನೆ ಸೇರಿದಂತೆ ಭಿಕ್ಷಾಟನೆಯನ್ನು ನಿಯಂತ್ರಣ ಮಾಡುವುದಕ್ಕೆ ಬೇಕಾದಂತಹ ಕ್ರಮಗಳನ್ನು ಕೈಗೊಳ್ಳುತ್ತೇವೆಂದು ಮಾನ್ಯ ಸದಸ್ಯರಾದ ಗೋವಿಂದರಾಜುರವರಲ್ಲಿ ಮತ್ತು ಸದನದಲ್ಲಿರುವಂತಹ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ಈಗಾಗಲೇ ಸುಮಾರು 2188 ಪುನರ್ವಸತಿ ಕೇಂದ್ರಗಳಿವೆ ಎಂದು ಹೇಳಿದ್ದಾರೆ. ಅದರಲ್ಲಿ 355 ಮಹಿಳಾ ಪುನರ್ವಸತಿ ಕೇಂದ್ರಗಳಿವೆ. ಕೋಲಾರದಲ್ಲಿ ಒಂದು ಮತ್ತು ದಾವಣಗೆರೆಯಲ್ಲಿ ಒಂದು ಅಲ್ಲದೇ, ಮಾನ್ಯ ಸಚಿವರು ನಿರಾಶ್ರಿತರ ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ, ಇಲ್ಲಿಯವರೆಗೂ ಚಿಕ್ಕಬಳ್ಳಾಪುರ, ಬೀದರ್, ಕೊಪ್ಪಳ, ಹಾಸನ, ಚಾಮರಾಜನಗರ, ಉತ್ತರ ಕನ್ನಡ ಜಿಲ್ಲೆ, ಬಾಗಲಕೋಟೆ ಜಿಲ್ಲೆ, ಮಂಡ್ಯ,

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ರಾಮನಗರ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಇದುವರೆಗೂ ನಿರಾಶ್ರಿತರ ಪರಿಹಾರ ಕೇಂದ್ರಗಳನ್ನು ಸರ್ಕಾರ ಸ್ಥಾಪನೆ ಮಾಡಿರುವುದಿಲ್ಲ. ಈ ವಿಷಯ ಇಷ್ಟೊಂದು serious ಆಗಿದ್ದರೂ ಸಹ, ಈ ಜಿಲ್ಲಾ ಕೇಂದ್ರಗಳಲ್ಲಿ ಇಲ್ಲಿಯವರೆಗೆ ನಿರಾಶ್ರಿತರ ಕೇಂದ್ರಗಳನ್ನು ಸ್ಥಾಪನೆ ಮಾಡದಿರುವುದು ಸರ್ಕಾರದ ನಿರ್ಲಕ್ಷ್ಯವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ, ಇದರ ಬಗ್ಗೆ ಮಾನ್ಯ ಸಚಿವರು ಆದಷ್ಟು ಬೇಗ ಕ್ರಮವಹಿಸಿ, ಈ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಸಹ ಮಹಿಳಾ ನಿರಾಶ್ರಿತರ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ಇದಲ್ಲದೆ, ಭಿಕ್ಷಾಟನೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಬೇಕೆಂದರೆ, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಗೃಹ ಇಲಾಖೆ ಈ ಮೂರು ಇಲಾಖೆಗಳು ಕೆಲಸ ಮಾಡಬೇಕು. ಈ ಇಲಾಖೆಗಳು ಕೆಲಸ ಮಾಡಬೇಕೆಂದರೆ, ನಮ್ಮ ಸ್ಥಳೀಯ ಸಂಸ್ಥೆಗಳಿಂದ, ಬಿ.ಬಿ.ಎಂ.ಪಿ.,ಯಿಂದ, ಬೇರೆ ಬೇರೆ ಸ್ಥಳೀಯ ಸಂಸ್ಥೆಗಳಿಂದ ಸಂಪನ್ಮೂಲವನ್ನು ಕ್ರೋಢೀಕರಿಸುತ್ತಾರೆ. ನಾನು ಆ ಸದನ ಸಮಿತಿಯ ಸದಸ್ಯನಾಗಿದ್ದು, ಆ ಸಮಿತಿಯಿಂದ ಸುಮಾರು 32 ಶಿಫಾರಸ್ಸುಗಳನ್ನು ಮಾಡಿದ್ದೇವೆ. ದಯವಿಟ್ಟು, ತಾವು ಅದನ್ನು ಗಮನಿಸಬೇಕು. ಏಕೆಂದರೆ, ಮಾನ್ಯ ಸಭಾಪತಿಯವರೇ, ತಾವು ಹೆಚ್ಚಿಗೆ ಮಾತನಾಡುವುದಕ್ಕೆ ಸಮಯ ಕೊಡುವುದಿಲ್ಲ. ಇಲ್ಲವೆಂದರೆ, ಇದರ ಬಗ್ಗೆ ಸಂಪೂರ್ಣವಾಗಿ ಮಾತನಾಡುತ್ತಿದ್ದೆ. ಈ ಸಮಿತಿಯ ಶಿಫಾರಸ್ಸುಗಳನ್ನು ತಾವು ತರಿಸಿಕೊಂಡು ಅದನ್ನು ಸಂಪೂರ್ಣವಾಗಿ implement ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇದಲ್ಲದೆ, ನಾನು ಆ ಸಮಿತಿಯ ಸದಸ್ಯನಾಗಿ ಅಲ್ಲಿ ಪ್ರಸ್ತಾಪ ಮಾಡಿದ್ದೆ. ಕಳೆದ 10 ವರ್ಷಗಳಿಂದ ಸುಮಾರು 400 ಕೋಟಿ ರೂಪಾಯಿಗಳನ್ನು cess ರೂಪದಲ್ಲಿ ವಸೂಲಿ ಮಾಡಿದ್ದಾರೆ. ನಮ್ಮ ಸ್ಥಳೀಯ ಸಂಸ್ಥೆಗಳಿಂದ ಮತ್ತು ಅತಿ ಹೆಚ್ಚು ಹಣವನ್ನು ಬಿ.ಬಿ.ಎಂ.ಪಿ.,ಯಿಂದ ವಸೂಲಿ ಮಾಡಿದ್ದಾರೆ. ಅದರಲ್ಲಿ ಸುಮಾರು 280 ಕೋಟಿ ರೂಪಾಯಿಗಳನ್ನು ಇವತ್ತಿನವರೆಗೆ ಸಮಾಜ ಕಲ್ಯಾಣ ಇಲಾಖೆಗೆ ವರ್ಗಾವಣೆ ಮಾಡಿರುವುದಿಲ್ಲ. ಮಾನ್ಯ ಸಚಿವರು ಈ ವಿಷಯವನ್ನು ಬಹಳ serious ಆಗಿ ತೆಗೆದುಕೊಳ್ಳಬೇಕು. 400 ಕೋಟಿ ರೂಪಾಯಿಗಳ ಹಣ ಎಲ್ಲಿದೆ? ಒಂದು ವೇಳೆ, ಆ ಹಣ ಇಲ್ಲವೆಂದರೆ, ಅದನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಯೇ? ಅದನ್ನು ನಾನು ಈ ಸದನದ ಮೂಲಕ ಒತ್ತಾಯ ಮಾಡುತ್ತೇನೆ. ಇದು ಭಿಕ್ಷುಕರ ಹಣ. ಮಾನ್ಯ ಸಚಿವರು ಮುಂದಿನ ದಿವಸಗಳಲ್ಲಿ ಸಭೆ ಕರೆದು ಮಾತನಾಡುತ್ತೇವೆಂದು ಹೇಳಿದ್ದಾರೆ. ಅಷ್ಟೊತ್ತಿಗೆ 400 ಕೋಟಿ ರೂಪಾಯಿಗಳ ಹಣ ಎಲ್ಲಿಗೆ ಹೋಗಿದೆ ಎಂದು ಯಾವುದಾದರೊಂದು ಮೂಲದಿಂದ ಕಂಡುಹಿಡಿದು ಈ ಇಲಾಖೆಗೆ ಹೆಚ್ಚಿನ ಸಂಪನ್ಮೂಲವನ್ನು ಕ್ರೋಢೀಕರಿಸಬೇಕೆಂದು ಈ ಸದನದ ಮೂಲಕ ಮಾನ್ಯ ಸಚಿವರನ್ನು ಒತ್ತಾಯ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನನಗೆ ಮಾನ್ಯ ಸಚಿವರ ಮೇಲೆ ಬಲವಾದ ನಂಬಿಕೆ ಮತ್ತು ವಿಶ್ವಾಸ ಇದೆ. ಅದಕ್ಕೆ ನಮ್ಮ ರಾಜ್ಯ 'ಭಿಕ್ಷಾಟನೆ ಮುಕ್ತ ರಾಜ್ಯ' ಎನ್ನುವಂತಹ ಕೀರ್ತಿಗೆ ಪಾತ್ರರಾಗುವ ರೀತಿಯಲ್ಲಿ ಸಚಿವರು ಕೆಲಸ ಮಾಡಬೇಕು. ಮಾನ್ಯ ಸಚಿವರಿಗೆ ಭಿಕ್ಷಾಟನೆಯನನ್ನು ban ಮಾಡುವಂತಹ ಅಧಿಕಾರವಿದೆ. ಅದರ ಜೊತೆಗೆ ಅನಿವಾರ್ಯ ಸಂದರ್ಭ ಬಂದಲ್ಲಿ rehabilitate ಮಾಡಬೇಕು. ಇದು ಈ ರಾಜ್ಯ ಮತ್ತು ರಾಷ್ಟ್ರದ ಗೌರವವನ್ನು ಕುಗ್ಗಿಸುವಂತಹ ವಿಚಾರವಾಗಿದೆ. ಅದಕ್ಕೆ ಕ್ರಮಕೈಗೊಳ್ಳಬೇಕು. ಮಾನ್ಯ ಸಚಿವರು ಭಿಕ್ಷಾಟನೆ ಮಾಡುವವರ ಮಕ್ಕಳನ್ನು ಮತ್ತು ಬೇರೆಯವರ ಮಕ್ಕಳನ್ನು ತಂದು ಭಿಕ್ಷಾಟನೆ ಮಾಡುತ್ತಾರೆಂದು ಹೇಳಿದ್ದಾರೆ. ಬೇರೆಯವರ ಮಕ್ಕಳನ್ನು kidnap ಮಾಡಿ ತಂದು ಅವರ ಕೈ-ಕಾಲುಗಳನ್ನು twist ಮಾಡಿ, ಅವರನ್ನು ಅಂಗವಿಕಲರನ್ನಾಗಿ ಮಾಡಿ ಅವರನ್ನು bus stand ನಲ್ಲಿಯೋ, railway station ನಲ್ಲಿಯೋ ಅಥವಾ ಸಾರ್ವಜನಿಕ ಸ್ಥಳಗಳಲ್ಲಿಯೋ ಭಿಕ್ಷಾಟನೆಗೆ ಬಿಡುತ್ತಾರೆ. ಇದು ಬಹಳ ಹೃದಯ ವಿದ್ರಾವಕವಾದಂತಹ ಘಟನೆ. ಇದಕ್ಕೆ ಕಠಿಣವಾದಂತಹ ಕ್ರಮಗಳನ್ನು ಕೈಗೊಳ್ಳಬೇಕು. ಭಿಕ್ಷಾಟನೆಯನ್ನು ನಿಲ್ಲಿಸುವುದರ ಜೊತೆಗೆ, ಅವರನ್ನು rehabilitate ಮಾಡಿ ನಮ್ಮ ರಾಜ್ಯವನ್ನು ಭಿಕ್ಷಾಟನೆ ಮುಕ್ತ ರಾಜ್ಯವೆಂದು ಮಾಡಿದರೆ, ಮಾನ್ಯ ಸಚಿವರು ಇತಿಹಾಸ ಪುಟದಲ್ಲಿ ಅಜರಾಮರರಾಗಿ ಉಳಿಯುತ್ತಾರೆ. ಈ ಕೆಲಸವನ್ನು ಮಾಡುವುದಕ್ಕೆ ಸಚಿವರು ಮನಸ್ಸು ಮಾಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಗೋವಿಂದರಾಜುರವರು ತಿಳಿಸಿರುವಂತೆ, ಸಮಾಜ ಕಲ್ಯಾಣ ಇಲಾಖೆ, ಗೃಹ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ನೇತೃತ್ವದಲ್ಲಿ ಈ ಸದನ ಮುಗಿದ ಒಂದು ವಾರದೊಳಗೆ ಸಭೆಯನ್ನು ಕರೆಯುತ್ತೇವೆ. ಭಿಕ್ಷಾಟನೆಯನ್ನು ನಿರ್ಮೂಲನ ಮಾಡುವುದಕ್ಕೆ ಬಹಳ ಬಿಗಿಯಾದ ಕ್ರಮಗಳನ್ನು ಕೈಗೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಪ್ರಶ್ನೆ ಸಂಖ್ಯೆ 705**

**ಸಭಾಪತಿಯವರು:-** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ತಮ್ಮ ಪ್ರಶ್ನೆ ಯೋಜನಾ ಇಲಾಖೆಗೆ ವರ್ಗಾವಣೆಯಾಗಿದೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ಈ ಪ್ರಶ್ನೆಯನ್ನು ಯಾವಾಗ ಕೇಳಿದರೂ ಸಹ ಇದೇ ರೀತಿ ಆಗುತ್ತಿದೆ. ಬೇರೆ ಇಲಾಖೆಗೆ ವರ್ಗಾವಣೆ ಆಗುತ್ತದೆ; ಇಲ್ಲವೆಂದರೆ, ತಾವು ನನಗೆ ಅದರ ಬಗ್ಗೆ ಮಾತನಾಡುವುದಕ್ಕೆ ಸಹ ಪೂರ್ತಿ ಸಮಯ ಕೊಡುವುದಿಲ್ಲ. ಇದೇ ರೀತಿಯಾಗುತ್ತದೆ. ಹಾಗಾಗಿ ನಾವು ಒಂದು ರೀತಿಯಲ್ಲಿ ಅವಕಾಶ ವಂಚಿತರು ಎಂದರೆ ಸರಿ ಹೋಗುತ್ತದೆ.

**ಸಭಾಪತಿಯವರು:-** ಮಾನ್ಯ ವೆಂಕಟೇಶ್‌ರವರೇ, ಒಂದು ನಿಮಿಷ ಕೇಳಿ. ನನಗೆ ಇಲ್ಲಿ ವರ್ಗಾವಣೆಯಾಗಿದೆ ಎಂದು ಮಾಹಿತಿ ಬಂದಿದೆ. ಇದು ಸರ್ಕಾರದ ಜವಾಬ್ದಾರಿ. ಇದು ಎರಡು ಬಾರಿ ವರ್ಗಾವಣೆಯಾಗಿದೆ. ಮಾನ್ಯ ಸಭಾನಾಯಕರೇ, ತಾವು ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆ ಬಹಳ ಗಂಭೀರವಾಗಿರುವುದರಿಂದ ವರ್ಗಾವಣೆಯಾಗಿರಬಹುದು. ಈ ಸದನ ಮುಗಿಯುವುದರೊಳಗೆ ಉತ್ತರ ಕೊಡುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಪ್ರಶ್ನೆ, ಪ್ರಶ್ನೆಯೇ, ಅದರಲ್ಲಿ ಗಂಭೀರ ಎನ್ನುವುದು ಬರುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಪ್ರಶ್ನೆಗಳು ಸೂಕ್ಷ್ಮವಾಗಿ ಇದ್ದರೆ, ಎಲ್ಲಾ ಇಲಾಖೆಗಳನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತಾರೆ. ನಾವು ಸದನ ಮುಗಿಯುವುದರೊಳಗೆ ಉತ್ತರ ಕೊಡುತ್ತೇವೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮೊನ್ನೆ ದಿವಸ ಒಂದು ಪ್ರಶ್ನೆ ಇತ್ತು. ಅದರಲ್ಲಿ ಕೇವಲ 9 ಜಿಲ್ಲೆಗಳ ಬಗ್ಗೆ information ಇತ್ತು. 21 ಜಿಲ್ಲೆಗಳ ಬಗ್ಗೆ information ಇರಲಿಲ್ಲ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ವೆಂಕಟೇಶ್‌ರವರೇ, ಒಂದು ನಿಮಿಷ ಕೇಳಿ. ನಾನು ಹೇಳಿದ ನಂತರ ಪ್ರಶ್ನೆ ವರ್ಗಾವಣೆ ಆಯಿತು ಎಂದು ಹೇಳಿದರು. ನಂತರ ಯೋಜನೆ ಮತ್ತು ಸಾಖ್ಯಿಕ ಇಲಾಖೆಯ ಸಚಿವರಾದ ಶ್ರೀ ಮುನಿರತ್ನ ಅವರು ಆ ಪ್ರಶ್ನೆಗೆ ಉತ್ತರ ನೀಡಲು 4 ವಾರಗಳ ಸಮಯ ಕೇಳಿದರು. ಇದಕ್ಕೆ ಏನು ಮಾಡಬೇಕು ಹೇಳಿ. 4 ವಾರಗಳ ಕಾಲ ಅಂದರೆ, ಒಂದು ತಿಂಗಳು ಸಮಯ ಕೇಳಿದರೆ, ಅಷ್ಟು ದಿವಸಗಳ ಕಾಲ ಅಧಿವೇಶನ ನಡೆಯುತ್ತದೆಯೇ? ಸದಸ್ಯರುಗಳ ಹಕ್ಕನ್ನು ಈ ರೀತಿ ಮೊಟಕುಗೊಳಿಸಿದರೆ ಹೇಗೆ? ಮಾನ್ಯ ಸಭಾನಾಯಕರು ಈ ವಿಚಾರವಾಗಿ ಹೇಳಬೇಕು.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಪ್ರಶ್ನೆಯನ್ನು ಈ ರೀತಿ ವರ್ಗಾವಣೆ ಮಾಡಿದರೆ ಹೇಗೆ? ಮಾನ್ಯ ಸಭಾನಾಯಕರು ಸದನದಲ್ಲಿ ಇದ್ದಾರೆ. ಅವರು ಹೇಳಲಿ.

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ತಾವೇ ಹೇಳಿ, ಇದಕ್ಕೆ ನಾನೇನು ಮಾಡಬೇಕು?

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಸದನದಲ್ಲಿದ್ದಾರೆ. ತಾವು ಅವರಿಗೆ ಹೇಳಿ.

**ಸಭಾಪತಿಯವರು:-** ನಾನು ಸರ್ಕಾರಕ್ಕೆ ಹೇಳಿದ್ದೇನೆ. ಸದಸ್ಯರ ಹಕ್ಕನ್ನು ಮೊಟುಕುಗೊಳಿಸಿದಂತೆ ಆಗುತ್ತದೆ. ಅನೇಕ ಬಾರಿ ಕೆಲವರು ಒಂದು ತಿಂಗಳು ಸಮಯ ಕೇಳುತ್ತಾರೆ. ಮಾನ್ಯ ಸಭಾನಾಯಕರು ಇದನ್ನು ವಿಚಾರ ಮಾಡಬೇಕು. ಒಂದು ತಿಂಗಳ ಕಾಲ ಅಧಿವೇಶನ ನಡೆಯುತ್ತದೆಯೇ? ಮುಂದೆ ಈ ರೀತಿ ಹೇಳಿದರೆ ಆಗುವುದಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಗ್ರಾಮೀಣ ಪ್ರದೇಶದಲ್ಲಿ ಕೋವಿಡ್-19 ಆಗಿದ್ದಂತಹ ಸಂದರ್ಭದಲ್ಲಿ ಯಾರು ಯಾರಿಗೆ ಅನಾನುಕೂಲಗಳಾಗಿವೆ ಎಂದು ಪ್ರಶ್ನೆ ಕೇಳಿದ್ದೇವೆ. ಅದನ್ನು planning department ಗೆ transfer ಮಾಡಿದರೆ, ಇದಕ್ಕೆ ಅರ್ಥ ಏನು ಹೇಳಿ?

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಅವರು ಏನಾದರೂ ಮಾಡಿಕೊಳ್ಳಲಿ ನಮಗೆ ಉತ್ತರ ಕೊಡಬೇಕಲ್ಲವೇ?

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಆಯಿತು, ಮಾನ್ಯ ಸಭಾನಾಯಕರೇ, ಈ ಪ್ರಶ್ನೆಗೆ ಸರ್ಕಾರದಿಂದ ಮುಂದಿನ ವಾರ ಉತ್ತರ ಕೊಡಿಸಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಬಂದಾಗಲೆಲ್ಲಾ ಇದೇ ರೀತಿಯಾದರೆ ಹೇಗೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮುಂದಿನ ವಾರ ಉತ್ತರ ಕೊಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 17ನೇ ಡಿಸೆಂಬರ್, 2021, ಸಮೂಹ-5ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 131 ಪ್ರಶ್ನೆಗಳ ಪೈಕಿ 95 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಸಭಾಪತಿಯವರು:- ಮಂಡಿಸಲಾಯಿತು.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**2. ಮಾನ್ಯ ಸದಸ್ಯರ ಸಮಕ್ಷಮದಲ್ಲಿಯೇ ಬುಲೆಟಿನ್ (bulletin) ಪ್ರಕ್ರಿಯೆ ನಡೆಸಬೇಕೆನ್ನುವ ಬಗ್ಗೆ.**

- - - -

**ಶ್ರೀ ಸಿ.ಎಂ.ಇಬ್ರಾಹಿಂ(ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಇಲ್ಲಿ ಚುಕ್ಕಿ ಮತ್ತು ಚುಕ್ಕಿ ಇಲ್ಲ ಎನ್ನುವುದು ಬಹಳ ಮುಖ್ಯವಾದ ಪ್ರಶ್ನೆ. ತಾವು ಯಾವ ಆಧಾರದ ಮೇಲೆ ಚುಕ್ಕಿ ಹಚ್ಚುತ್ತಿದ್ದೀರಿ ಮತ್ತು ಚುಕ್ಕಿ ತೆಗೆಯುತ್ತಿದ್ದೀರಿ ಎನ್ನುವುದು ನಮಗೆ ಗೊತ್ತಾಗಬಹುದೇ? ನಾನು ಏನಾದರೂ ಮುಖ್ಯವಾದ ವಿಷಯವನ್ನು ಕೇಳಿದರೆ ಅದು ಚುಕ್ಕಿ. ಇಲ್ಲದಿದ್ದರೆ ಚುಕ್ಕಿ ಇಲ್ಲ. IMA ಹಗರಣದ್ದು ಎಂತಹ ದೊಡ್ಡ ಪ್ರಶ್ನೆಯಲ್ಲವೆ, ಈ ಪ್ರಶ್ನೆಗೆ ಬರೀ ಲಿಖಿತ ಉತ್ತರ ಎಂದು ಇಂದು ಕೊಟ್ಟಿದ್ದೀರಿ. ಅದಕ್ಕೆ ದಯವಿಟ್ಟು lottery ತೆಗೆಯಬೇಕಾದರೆ, ನಮ್ಮ ಎದುರುಗಡೆ ತೆಗೆಯಿರಿ.

**ಸಭಾಪತಿಯವರು:-** ಇಬ್ರಾಹಿಂರವರೇ ತಮ್ಮೆಲ್ಲರ ಸಮ್ಮುಖದಲ್ಲಿಯೇ ತೆಗೆಯುತ್ತಾರೆ. Procedure ಹಾಗೆಯೇ ಇದೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ನನಗಂತೂ ಒಂದು ಬಾರಿಯೂ ಬಂದಿಲ್ಲ.

**ಸಭಾಪತಿಯವರು:-** ಕಾರ್ಯದರ್ಶಿಯವರು lottery ತೆಗೆಯುವಾಗ ನಿಮಗೆ ತಿಳಿಸಿರುತ್ತಾರೆ. ಆಗ ನೀವು ಹೋಗಬೇಕಾಗುತ್ತದೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ನಮಗೆ ತಿಳಿಸಿಲ್ಲ.

**ಸಭಾಪತಿಯವರು:-** ಕಾರ್ಯದರ್ಶಿಯವರೇ, ಮುಂದೆ lottery ತೆಗೆಯುವಾಗ ಎಲ್ಲರಿಗೂ ತಿಳಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅವರೆಲ್ಲರ ಸಹಾಯಕರ ಸಮಕ್ಷಮದಲ್ಲಿಯೇ ತೆಗೆಯಲಾಗಿತ್ತು.

**ಸಭಾಪತಿಯವರು:-** ಇಬ್ರಾಹಿಂರವರೇ, bulletin ನಲ್ಲಿಯೇ ಕಳುಹಿಸಿರುತ್ತಾರೆ. ತಾವು ನೋಡಿರುವುದಿಲ್ಲ ಅಷ್ಟೇ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳ ಸಹಾಯಕರ ಸಮಕ್ಷಮದಲ್ಲಿಯೇ ತೆಗೆಯಲಾಗಿದೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಆಯಿತು ಬಿಡಿ.

(ಮುಗಿದು)

(1144) 17-12-2021 (12.20) ಎಂವಿ-ಜಿಆರ್

(ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು (ಮುಂದು):-**

ಅದನ್ನು ಬುಲೆಟಿನ್‌ನಲ್ಲಿಯೇ ಕಳುಹಿಸಿರುತ್ತಾರೆ. ಆದರೆ, ತಾವು ಅದನ್ನು ನೋಡಿರುವುದಿಲ್ಲ ಅಷ್ಟೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಲಾಟರಿಯನ್ನು ಮಾನ್ಯ ಸದಸ್ಯರ ಯಾ ಸದಸ್ಯರ ಸಹಾಯಕರ ಸಮಕ್ಷಮದಲ್ಲೇ ತೆಗೆಯಲಾಗುತ್ತದೆ.

**ಸಭಾಪತಿಯವರು:-** ಆಯಿತು, ಆ ವಿಷಯವನ್ನು ಬಿಡಿ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಈ ಹಿಂದೆ ಸದನದಲ್ಲಿ ಶೂನ್ಯವೇಳೆಯ ಪ್ರಶ್ನೆಗಳಿಗೆ ಸಾಧಾರಣಾ ಶೇಕಡಾ 30ರಷ್ಟಾದರೂ ಉತ್ತರಗಳು ಬರುತ್ತಿದ್ದವು.

**ಸಭಾಪತಿಯವರು:-** ಮಾನ್ಯ ಸಭಾನಾಯಕರಿಗೆ ನಿನ್ನೆಯ ದಿವಸ ಮತ್ತು ಈಗ ತಿಳಿಸಿದ್ದೇನೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಸದನದಲ್ಲಿ ಶೇಕಡಾ 30ರಷ್ಟು ಉತ್ತರಗಳನ್ನು ನೀಡುತ್ತಿದ್ದರು. ಅವರಿಗೆ 2 ರಿಂದ 3 ಗಂಟೆಯ ಸಮಯ ಸಿಗುತ್ತದೆ. ಈಗ ಅದನ್ನೆಲ್ಲಾ ಬಿಟ್ಟು ಬಿಟ್ಟರು. ಅದನ್ನು ಶೇಕಡಾ 100ರಷ್ಟು ಬಿಟ್ಟಿದ್ದಾರೆ. ಎಲ್ಲದಕ್ಕೂ ಅವರು ಬಂದು ಉತ್ತರ ಕೊಡುತ್ತಾರೆ. ಇವರು ಬಂದು ಉತ್ತರ ಕೊಡುತ್ತಾರೆ ಎಂದು ಕೇಳುವುದಕ್ಕೆ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈಗ ನಿನ್ನೆ ಕೇಳಿದ ಪ್ರಶ್ನೆಗಳ ಪೈಕಿ ಎರಡು ಪ್ರಶ್ನೆಗಳಿಗೆ ಸದನದಲ್ಲೇ ಉತ್ತರವನ್ನು ನೀಡಿದ್ದೇವೆ. ನನ್ನ ಅಂದಾಜಿನ ಪ್ರಕಾರ ಅದು ಶೇಕಡಾ 30ರಷ್ಟು ಆಗುತ್ತದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಆದಷ್ಟು ಬೇಗ ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಿನ್ನೆಯ ದಿವಸ ಉತ್ತರವನ್ನು ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಹೇಳುತ್ತಿರುವುದು ಆಶ್ಚರ್ಯವಲ್ಲ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಇವತ್ತಿನ ಪ್ರಶ್ನೆಗೆ ಇವತ್ತೇ ಉತ್ತರ ಕೊಡುತ್ತಾರೆಯೇ?

**ಸಭಾಪತಿಯವರು:-** ಇಲ್ಲ. ಉತ್ತರವನ್ನು ನಾಳೆ ಕೊಡುತ್ತಾರೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಅವರು ಒಟ್ಟಿಗೆ ಕೊಟ್ಟಿದ್ದು.

**ಸಭಾಪತಿಯವರು:-** ಆಯಿತು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

**ಅ) ವಿಷಯ: ಖಾಸಗಿ ವಿದ್ಯುತ್ ಕಂಪನಿಗೆ ನೀರು ಒದಗಿಸುವ ಉದ್ದೇಶದಿಂದ ಕರ್ನಾಟಕ ನೀರಾವರಿ ನಿಗಮ ಬೇರೆ ಬೇರೆ ಕಾರಣಗಳನ್ನು ನೀಡಿ ರೈತರ ನೀರಾವರಿ ಕಾಲುವೆಗೆ ನೀರು ಹರಿಸದೇ ಇರುವ ಬಗ್ಗೆ.**

\- - - - - -

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಖಾಸಗಿ ವಿದ್ಯುತ್ ಉತ್ಪಾದನಾ ಕಂಪನಿಗೆ ನೀರು ಒದಗಿಸುವ ಉದ್ದೇಶದಿಂದ ಕರ್ನಾಟಕ ನೀರಾವರಿ ನಿಗಮವು ಬೇರೆ ಬೇರೆ ಕಾರಣಗಳನ್ನು ನೀಡಿ ರೈತರ ನೀರಾವರಿ ಕಾಲುವೆಗೆ ನೀರನ್ನು ಹರಿಸದೆ ಇರುವುದರಿಂದ ಹಿಂಗಾರು ಬೆಳೆ ಹಾಗೂ ಇತರೇ ಕೃಷಿ ಚಟುವಟಿಕೆ ಸಿದ್ಧತೆ ನಡೆಸಿರುವ ರೈತರಿಗೆ ತೊಂದರೆಯಾಗುತ್ತಿರುವುದರ ಬಗ್ಗೆ ಪ್ರಸ್ತಾಪ ಮಾಡಲು ಅನುಮತಿಯನ್ನು ಕೇಳುತ್ತಿದ್ದೇನೆ. ವಾರಾಹಿ ನೀರಾವರಿ ಅಚ್ಚುಕಟ್ಟು ಪ್ರದೇಶದ ರೈತರು ತಮ್ಮ ಹಿಂಗಾರು ಬೆಳೆ ಹಾಗೂ ಇತರೇ ಕೃಷಿ ಚಟುವಟಿಕೆಗಳಿಗಾಗಿ ನೀರಾವರಿ ಕಾಲುವೆಯ ನೀರನ್ನು ಅವಲಂಬಿಸಿರುತ್ತಾರೆ. ಪ್ರತೀ ವರ್ಷ ಡಿಸೆಂಬರ್ ತಿಂಗಳಿನ 1ನೇ ತಾರೀಖು ನೀರು ಬಿಡುವುದಾಗಿ ರೈತರಿಗೆ ಭರವಸೆ ನೀಡಿದ್ದ ಇಲಾಖೆ, ಈ ವರ್ಷ ಡಿಸೆಂಬರ್ ತಿಂಗಳಿನ 1ನೇ ತಾರೀಖು ಕಳೆದರೂ ಇಲ್ಲಿಯವರೆಗೆ ಇಲಾಖೆ ಕಾಲುವೆಗೆ ನೀರು ಹರಿಸುವ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಹಾಗೂ ನೀರು ಬಿಡುವ ದಿನಾಂಕವನ್ನು ಕೂಡ ಅಧಿಕೃತವಾಗಿ ಪ್ರಕಟಿಸಿರುವುದಿಲ್ಲ. ಆದ್ದರಿಂದ ಈಗಾಗಲೇ ಅಕಾಲಿಕ ಮಳೆಯಿಂದಾಗಿ ಪ್ರಥಮ ಬೆಳೆಯಲ್ಲಿ ನಷ್ಟವನ್ನು ಹೊಂದಿದ ತಮ್ಮ ಹಿಂಗಾರು ಬೆಳೆ ಹಾಗೂ ಇತರೇ ಕೃಷಿ ಚಟುವಟಿಕೆಗೆ ನೀರಿನ ಲಭ್ಯತೆಯ ಅನಿಶ್ಚಿತತೆಯ ಕುರಿತು ಆತಂಕಕ್ಕೊಳಗಾಗಿರುತ್ತಾರೆ ಹಾಗೂ ಸಕಾಲದಲ್ಲಿ ನೀರು ದೊರಕದೇ ಇದ್ದರೆ ಬೆಳೆ ನಾಶವಾಗಿ ನಷ್ಟ ಅನುಭವಿಸುವ ಭೀತಿಯಲ್ಲಿದ್ದಾರೆ. ಖಾಸಗಿ ವಿದ್ಯುತ್ ಉತ್ಪಾದನಾ ಕಂಪನಿಗೆ ನೀರನ್ನು ಒದಗಿಸುವ ಉದ್ದೇಶದಿಂದ ರೈತರ ನೀರಾವರಿ ಯೋಜನೆಯ ಕಾಲುವೆಗೆ ನೀರನ್ನು ಹರಿಸಲು ಬೇರೆ ಬೇರೆ ಕಾರಣಗಳನ್ನು ನೀಡಿ ವಿಳಂಬ ಮಾಡುತ್ತಿರುವುದನ್ನು ಗಮನಿಸಬಹುದಾಗಿದೆ. ಪ್ರಸ್ತುತ ಕಾಲುವೆಗೆ ನೀರು ಹರಿಸುವುದು ಅತೀ ಅವಶ್ಯವಾಗಿದ್ದು. ವಿಳಂಬಕ್ಕೆ ಅವಕಾಶ ನೀಡದೇ ತುರ್ತಾಗಿ ವಾರಾಹಿ ಎಡದಂಡೆ ಕಾಲುವೆಗೆ ನೀರು ಹರಿಸಲು ಈ ಸದನದ ಮೂಲಕ ಸರಕಾರವನ್ನು ಆಗ್ರಹಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಶಾಸಕರಾದ ಮಾನ್ಯ ಕೆ.ಪ್ರತಾಪಚಂದ್ರ ಶೆಟ್ಟಿಯವರು ಶೂನ್ಯವೇಳೆಯಲ್ಲಿ ಕೇಳಿರುವಂತಹ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಲಸಂಪನ್ಮೂಲ ಇಲಾಖೆಯ ಪ್ರಶ್ನೆಗೆ ಉತ್ತರವನ್ನು ಒದಗಿಸುತ್ತೇನೆ. ಹಾಗೆಯೇ ಉತ್ತರವನ್ನು ಒದಗಿಸುವಾಗ ಕಾಲುವೆಗೆ ನೀರನ್ನು ಹರಿಸುವಂತೆ ಕ್ರಮವನ್ನು ಕೈಗೊಳ್ಳಲಾಗುತ್ತದೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರಿಗೆ ಇದು ಅರ್ಥವಾಗಿರಬಹುದು. ಡಿಸೆಂಬರ್, 1ನೇ ತಾರೀಖಿಗೆ ಕಾಲುವೆಗೆ ನೀರು ಬಿಡಬೇಕು.

**ಸಭಾಪತಿಯವರು:-** ನಿಮ್ಮಿಬ್ಬರದು ಯಾರಿಗೂ ಸಹ ಅರ್ಥವಾಗುವುದಿಲ್ಲವೆಂದು ನಾನು ಇಷ್ಟನ್ನು ಮಾತ್ರ ಹೇಳಬಹುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರು ಎರಡೆರಡು ಬಾರಿ ಹೇಳಿರುವುದರಿಂದ ನನಗೆ ಅರ್ಥವಾಗಿದೆ. ಅದನ್ನು ಸರಿಪಡಿಸುತ್ತೇವೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಆ) ವಿಷಯ: ಸುಮಾರು 5,000 ಅತಿಥಿ ಉಪನ್ಯಾಸಕರು ತಮ್ಮ ಸೇವಾ ಭದ್ರತೆಗಾಗಿ ಅನಿರ್ದಿಷ್ಟಾವಧಿಯ ಧರಣಿ ಆರಂಭಿಸಿರುವ ಬಗ್ಗೆ.**

- - - - - - -

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನಿನ್ನೆಯ ದಿವಸದಿಂದ ಅಂದರೆ, ದಿನಾಂಕ 16.12.2021ರಿಂದ ಬೆಳಗಾವಿ ನಗರದ ಸುವರ್ಣ ವಿಧಾನ ಸೌಧಕ್ಕೆ ಹೊಂದಿಕೊಂಡಂತೆ ಸುಮಾರು 5,000ಕ್ಕೂ ಹೆಚ್ಚು ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರು ಅನಿರ್ಧಿಷ್ಟಾವಧಿಯ ಧರಣಿಯನ್ನು ಅರಂಭಿಸಿರುತ್ತಾರೆ. ಹಾಗೂ ರಾಜ್ಯಾದ್ಯಾಂತ ಎಲ್ಲಾ ಪದವಿ ಕಾಲೇಜುಗಳಲ್ಲಿ ಬೋಧನೆಯನ್ನು ಸ್ಥಗಿತಗೊಳಿಸಿ, ಧರಣಿಯನ್ನು ನಡೆಸುತ್ತಿರುತ್ತಾರೆ. ಅಲ್ಲದೇ ಧಾರವಾಡದಲ್ಲಿಯೂ ಸಹ ಧರಣಿ ಕಾರ್ಯಕ್ರಮ ನಡೆಯುತ್ತಿದೆ. ಇವರ ಹೋರಾಟದ ಮುಖ್ಯ ಬೇಡಿಕೆ ಸೇವಾ ಭದ್ರತೆಯಾಗಿದೆ. ಕಳೆದ 15-20 ವರ್ಷಗಳಿಂದ ಸರ್ಕಾರ ಮೂರು ತಿಂಗಳಿಗೊಮ್ಮೆ ನೀಡುತ್ತಿರುವ ಕೇವಲ ಅಲ್ಪ ಪ್ರಮಾಣದ ಸಂಭಾವನೆಗಾಗಿ ದುಡಿಯುತ್ತಿದ್ದಾರೆ. ಈ ಬಾರಿ ಸೇವಾ ಭದ್ರತೆಯನ್ನು ನೀಡಲೇಬೇಕೆಂಬ ಇವರ ಪ್ರಮುಖ ಅಗ್ರಹವನ್ನು ಸರ್ಕಾರ ಸಹಾನುಭೂತಿಯಿಂದ ಪರಿಗಣಿಸಿ ಪಶ್ಚಿಮ ಬಂಗಾಳದ ಮಾದರಿಯಲ್ಲಿ ಅತಿಥಿ ಉಪನ್ಯಾಸಕರಿಗೂ ಕೂಡಲೇ ಸೇವಾ ಭದ್ರತೆಯನ್ನು ನೀಡಬೇಕೆಂದು ಸರ್ಕಾರವನ್ನು ತಮ್ಮ ಮೂಲಕ ಆಗ್ರಹಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಇ) ವಿಷಯ: ರಾಜ್ಯದ ಸರಕಾರಿ ಪದವಿ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಎಲ್ಲ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಲು ಒತ್ತಾಯಿಸಿ ಕಳೆದ 6-7 ದಿನಗಳಿಂದ ನಡೆಸುತ್ತಿರುವ ಧರಣಿ ಸತ್ಯಾಗ್ರಹ ಕುರಿತು.**

\- - - - -

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸುಮಾರು 14 ಸಾವಿರ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಲು ಒತ್ತಾಯಿಸಿ, ಸುಮಾರು 1,000ಕ್ಕೂ ಹೆಚ್ಚು ಉಪನ್ಯಾಸಕರು ಸುವರ್ಣ ವಿಧಾನ ಸೌಧದ ಆವರಣದಲ್ಲಿ ಧರಣಿ ಸತ್ಯಾಗ್ರಹ ನಡೆಸುತ್ತಿರುವರು. ಕಳೆದ 15-20 ವರ್ಷಗಳಿಂದ ಕಡಿಮೆ ವೇತನದಲ್ಲಿ ಅತ್ಯಂತ ಪ್ರಾಮಾಣಿಕ ಸೇವೆ ಸಲ್ಲಿಸುವ ಮೂಲಕ ಉನ್ನತ ಶಿಕ್ಷಣದಲ್ಲಿ ಗುಣಮಟ್ಟ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುವರು.

ಪಶ್ಚಿಮ ಬಂಗಾಳ ಮಾದರಿಯಲ್ಲಿ ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ ಮತ್ತು ಇನ್ನಿತರ ಸೌಲಭ್ಯ ಒದಗಿಸುವುದರ ಜೊತೆಗೆ ಎಲ್ಲಾ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಲು ವಿಶೇಷ ಕ್ರಮ ಕೈಗೊಳ್ಳಲು ಧರಣಿ ನಿರತ ಉಪನ್ಯಾಸಕರು ಒತ್ತಾಯಿಸುತ್ತಿರುವರು. ಈ ಕುರಿತು ಲಿಖಿತ ಆದೇಶ ಹೊರಡಿಸುವವರೆಗೆ ಧರಣಿ ಸತ್ಯಾಗ್ರಹ ಮುಂದುವರೆಸುತ್ತೇವೆ ಎಂದು ಹೇಳಿಕೆ ನೀಡಿರುವರು.

ಈ ಹಿನ್ನೆಲೆಯಲ್ಲಿ ಸರ್ಕಾರ ಸಂಕಷ್ಟ ಹಾಗೂ ಅತಂತ್ರದಲ್ಲಿರುವ ಅತಿಥಿ ಉಪನ್ಯಾಸಕರಿಗೆ ಖಾಯಂಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಲು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರುಗಳಾದ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಮತ್ತು ಮಾನ್ಯ ಎಸ್.ವ್ಹಿ.ಸಂಕನೂರವರು ಕೇಳಿರುವ ಶೂನ್ಯವೇಳೆಯ ಪ್ರಶ್ನೆಗಳಿಗೆ ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಒದಗಿಸಿಕೊಡಲಾಗುವುದು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ನಾಳೆ ಅಂದರೆ, ಸೋಮವಾರ ಉತ್ತರವನ್ನು ಒದಗಿಸಿಕೊಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಆಯಿತು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಈ) ವಿಷಯ: ಕೋವಿಡ್-19ನಿಂದ ಮೃತರಾದ ವ್ಯಕ್ತಿಗಳ ಕುಟುಂಬಸ್ಥರು ಪರಿಹಾರಕ್ಕಾಗಿ ಕಠಿಣ ಮಾರ್ಗಸೂಚಿಗಳಿಂದ ಅರ್ಜಿ ಸಲ್ಲಿಸಲು ತೊಂದರೆಯಾಗಿರುವ ಬಗ್ಗೆ.**

\- - - - - -

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕೋವಿಡ್-19ನಿಂದಾಗಿ ಕುಟುಂಬದ ಸದಸ್ಯರನ್ನು ಕಳೆದುಕೊಂಡು ಕಣ್ಣೀರಿಡುತ್ತಾ ಸಂಕಷ್ಟದಲ್ಲಿರುವ ಕುಟುಂಬಗಳು ಈಗ ಸರ್ಕಾರ ನೀಡಲಿರುವ ಪರಿಹಾರ ಧನ ಪಡೆಯಲು ಹರಸಾಹಸ ಪಡುತ್ತಿರುವುದು ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.

ರಾಜ್ಯ ಸರ್ಕಾರ ಕೋವಿಡ್-19ನಿಂದಾಗಿ ಮೃತಪಟ್ಟ ವ್ಯಕ್ತಿಯ ಕುಟುಂಬಸ್ಥರು ಪರಿಹಾರಕ್ಕಾಗಿ ಅರ್ಜಿ ಸಲ್ಲಿಸುವಂತೆ ತಿಳಿಸಿ ಒಂದು ತಿಂಗಳು ಕಳೆದಿದೆ. ಆದರೆ ಬಿಬಿಎಂಪಿ ಮಾಹಿತಿ ಪ್ರಕಾರ ಪಾಲಿಕೆಯ ಎಂಟು ವಲಯಗಳಲ್ಲಿ ಕೋವಿಡ್-19 ಮೊದಲನೆ ಮತ್ತು ಎರಡನೆ ಅಲೆಯಲ್ಲಿ ಈವರೆಗೆ 14,193 ಜನ ಸಾವನ್ನಪ್ಪಿದ್ದರೂ ಈವರೆಗೆ ಪರಿಹಾರ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ಸಂಖ್ಯೆ 1,878 ಮಾತ್ರ ಆಗಿರುತ್ತದೆ. ಇದಕ್ಕೆ ಕಾರಣ ಸರ್ಕಾರದ ಕಠಿಣ ಮಾರ್ಗ ಸೂಚಿಗಳಾಗಿರುತ್ತದೆ.

ಮೃತ ವ್ಯಕ್ತಿಯ ಪಡಿತರ ಚೀಟಿಯ ವಿಳಾಸ ಒಂದು ಕಡೆ ಇದ್ದರೆ, ವಾಸ ಮತ್ತೊಂದು ಕಡೆ, ಕೆಲವರು ಕುಟುಂಬದ ದುಡಿಯುವ ವ್ಯಕ್ತಿ ಮೃತನಾದ ಕಾರಣ ಬೆಂಗಳೂರನ್ನು ತೊರೆದಿರುವುದು, ಅಧಿಕಾರಿಗಳು ಮಹಜರು ಸಲುವಾಗಿ ಹೋದಾಗ ಮನೆಯಲ್ಲಿ ಕುಟುಂಬಸ್ಥರು ಲಭ್ಯವಿಲ್ಲದಿರುವುದು, ಮರಣ ಪ್ರಮಾಣ ಪತ್ರ, ಬಿ.ಪಿ.ಎಲ್ ಕಾರ್ಡ್ ಹೀಗೆ ಅನೇಕ ಸಣ್ಣ ಸಣ್ಣ ಕಾರಣಗಳಿಗಾಗಿ ಅರ್ಜಿಗಳು ಮಾನ್ಯವಾಗದಿರುವುದು ತಿಳಿದು ಬಂದಿರುತ್ತದೆ.

ದಯಮಾಡಿ ಸರ್ಕಾರ ನಿರ್ದಿಷ್ಟಪಡಿಸಿರುವ ಕಠಿಣ ಮಾರ್ಗಸೂಚಿಗಳನ್ನು ಸಡಿಲಗೊಳಿಸಿ, ಕೋವಿಡ್-19ನಿಂದ ಮೃತರಾದ ಕುಟುಂಬ ವರ್ಗಕ್ಕೆ ಸಕಾಲದಲ್ಲಿ ಪರಿಹಾರ ದೊರಕಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆನ್ನುವ ವಿಷಯದ ಬಗ್ಗೆ ಮಾನ್ಯ ಕಂದಾಯ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಮಾನ್ಯ ಯು.ಬಿ.ವೆಂಕಟೇಶ್ ರವರು ಕೇಳಿರುವ ಶೂನ್ಯವೇಳೆ ಪ್ರಶ್ನೆಗೆ ಮಾನ್ಯ ಕಂದಾಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಸಭಾಪತಿಯವರು:-** ಸೋಮವಾರ ಅಥವಾ ಮಂಗಳವಾರದಂದು ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸುವಂತಹ ವ್ಯವಸ್ಥೆಯನ್ನು ಮಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಆಯಿತು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಉ) ವಿಷಯ: ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ಹೆಚ್ಚುವರಿಯಾಗಿ 150 ಕೋಟಿ ವಿಶೇಷ ಅನುದಾನ ಬಿಡುಗಡೆ ಕುರಿತು.**

- - - - -

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ತಮಗೆ ಧನ್ಯವಾದಗಳು. ಚಳಿಗಾಲದ ಅಧಿವೇಶನವು ಬೆಳಗಾವಿ ನಗರದಲ್ಲಿ ನಡೆಯುತ್ತಿರುವ ಕಾರಣಕ್ಕಾಗಿ ಈ ಶೂನ್ಯವೇಳೆಯ ಪ್ರಶ್ನೆಯನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು 22.09.2010ರಂದು ರಾಜ್ಯಪತ್ರದ ಅಧಿಸೂಚನೆಯಂತೆ ರಾಜ್ಯದಲ್ಲಿ ಅಸ್ತಿತ್ವವನ್ನು ಪಡೆದುಕೊಂಡಿತು. ವಿಶ್ವವಿದ್ಯಾಲಯದ ವ್ಯಾಪ್ತಿಗೆ ಉತ್ತರ ಕರ್ನಾಟಕದ ಗಡಿ ಜಿಲ್ಲೆಗಳಾದ ಬೆಳಗಾವಿ, ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳ ಪ್ರಸ್ತುತ 398 ಸಂಯೋಜಿತ ಮಹಾವಿದ್ಯಾಲಯಗಳು ಒಳಪಟ್ಟಿವೆ. ಸುಮಾರು ಒಂದು ಲಕ್ಷದ ನಲವತ್ತೈದು ಸಾವಿರ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ವಿಭಿನ್ನ ಕೋರ್ಸ್‌ಗಳಲ್ಲಿ ಅಧ್ಯಯನಿಸುತ್ತಿದ್ದಾರೆ. ಅಲ್ಲದೇ 22 ಅಧ್ಯಯನ ವಿಭಾಗಗಳು ಕಾರ್ಯನಿರ್ವಹಿಸುತ್ತಿವೆ. ವಿಶ್ವವಿದ್ಯಾಲಯವು ನ್ಯಾಕ್‌ನಿಂದ ಉನ್ನತ ಶ್ರೇಣಿಯ B+ ಮನ್ನಣೆಯನ್ನು ಪಡೆದುಕೊಂಡಿದೆ. 96 ಬೋಧಕ ಸಿಬ್ಬಂದಿಗಳು ಅಲ್ಲದೆ 138 ಬೋಧಕೇತರ ಖಾಯಂ ಸಿಬ್ಬಂದಿಗಳು ಹಾಗೂ ಅಷ್ಟೇ ಸಂಖ್ಯೆಯ ತಾತ್ಕಾಲಿಕ ಸಂಚಿತ ವೇತನದ ಆಧಾರದ ಮೇಲೆ ಬೋಧಕ-ಬೋಧಕೇತರ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಪ್ರಸ್ತುತ ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಸರ್ಕಾರವು 126.27 ಎಕರೆ ಜಮೀನನ್ನು ಹಿರೇಬಾಗೇವಾಡಿಯ ಮಲ್ಲಪ್ಪನಗುಡ್ಡದ ಆಸುಪಾಸಿನಲ್ಲಿ ಮಂಜೂರು ಮಾಡಿದೆ. ವಿಶ್ವವಿದ್ಯಾಲಯವು ಅದನ್ನು ತನ್ನ ಆಂತರಿಕ ಸಂಪನ್ಮೂಲಗಳಿಂದ ಖರೀದಿಸಿ ಕಟ್ಟಡ ನಿರ್ಮಾಣ ಕಾರ್ಯ ಪ್ರಾರಂಭಿಸುವ ಹಂತದಲ್ಲಿದೆ. ಬಡ ಹಾಗೂ ಮಧ್ಯಮ ವರ್ಗದ ಜನರು ಅದರಲ್ಲೂ ವಿಶೇಷವಾಗಿ ವಿದ್ಯಾರ್ಥಿನಿಯರೇ ಹೆಚ್ಚು ಅಧ್ಯಯನಿಸುತ್ತಿರುವ ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ಸೌಕರ್ಯಗಳ ಅನಿವಾರ್ಯತೆಯಿದೆ. ವಿಶ್ವವಿದ್ಯಾಲಯವು ಆಂತರಿಕ ಸಂಪನ್ಮೂಲಗಳಿಂದ ತನ್ನ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುತ್ತಾ ಹೋದಲ್ಲಿ ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಸಂಶೋಧನೆ, ಬೋಧನೆ, ಗ್ರಂಥಾಲಯ, ಪ್ರಯೋಗಾಲಯ, ಅತಿಥಿ ಉಪನ್ಯಾಸಕರು, ತಾತ್ಕಾಲಿಕ ನೌಕರರ ಸಂಬಳ ಮತ್ತು ಇನ್ನಿತರ ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆಯಾಗುತ್ತದೆ. ಅಲ್ಲದೇ, ಇಂತಹ ಎಲ್ಲ ಸೌಲಭ್ಯಗಳಿಂದ ಮೂರು ಜಿಲ್ಲೆಗಳ ಬಡ ವಿದ್ಯಾರ್ಥಿಗಳು ಅಧ್ಯಯನಿಸುತ್ತಿರುವ ದೊಡ್ಡ ಸಮೂಹವು ಇದರಿಂದ ವಂಚಿತವಾಗುತ್ತದೆ. ಇದರಿಂದಾಗಿ ನಿರೀಕ್ಷಿತ ಗುಣಮಟ್ಟವನ್ನು ಹೊಂದಲು ಸಾಧ್ಯವಾಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಆದುದರಿಂದ ಸರ್ಕಾರವು ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಅನುದಾನವನ್ನು ಬಿಡುಗಡೆ ಮಾಡಬೇಕಾಗಿದೆ.

2017ರಲ್ಲಿ ಸನ್ಮಾನ್ಯ ಶ್ರೀ ಬಸವರಾಜ ರಾಯರೆಡ್ಡಿಯವರು ಶಿಕ್ಷಣ ಸಚಿವರಾಗಿದ್ದಾಗ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ರೂ.80.00 ಕೋಟಿ ವಿಶೇಷ ಅನುದಾನವನ್ನು ನೀಡಿದ್ದರು. ಆದರೆ, ಜಮೀನು ಇಲ್ಲದ ಪ್ರಯುಕ್ತ ಆ ವಿಶೇಷ ಅನುದಾನವನ್ನು ವಿಶ್ವವಿದ್ಯಾಲಯವು ಬಳಸಿಕೊಳ್ಳಲಾಗಿಲ್ಲ. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಹೆಚ್ಚಿನ ಅಧ್ಯಯನ ವಿಭಾಗಗಳನ್ನು ತೆರೆಯಲು ಹಾಗೂ ಅಗತ್ಯವಿರುವ ವಿದ್ಯಾರ್ಥಿ ವಸತಿ ನಿಲಯಗಳು, ವಿದ್ಯಾರ್ಥಿನಿಯರ ವಸತಿ ನಿಲಯಗಳು, ನೌಕರರ ವಸತಿ ಗೃಹಗಳು, ವಿಶ್ವವಿದ್ಯಾಲಯದ ಅಧಿಕಾರಿಗಳ ನಿವಾಸಗಳು, ಸಾರ್ವಜನಿಕ ಸೇವೆಗಳ ಕಟ್ಟಡ ಸಂಕೀರ್ಣ, ಎನ್.ಎಸ್.ಎಸ್ ಭವನ, ಅಂಚೆ ಕಛೇರಿ, ಬ್ಯಾಂಕ್, ಆಸ್ಪತ್ರೆ ಇತ್ಯಾದಿಗಳ ಕಟ್ಟಡಗಳಿಗೆ ಕನಿಷ್ಠ ರೂ.150.00 ಕೋಟಿ ರೂಪಾಯಿಗಳ ಅನುದಾನದ ಅವಶ್ಯಕತೆ ಇರುತ್ತದೆ. ಪ್ರಸ್ತುತ ಈ ಎಲ್ಲಾ ಕಾರಣಗಳನ್ನು ಮತ್ತು ಉತ್ತರ ಕರ್ನಾಟಕದಲ್ಲಿ ಸರ್ಕಾರದ ಆಶೋತ್ತರಗಳನ್ನು ಈಡೇರಿಸಿಕೊಳ್ಳಲು ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಹೆಚ್ಚುವರಿಯಾಗಿ ಕನಿಷ್ಠ ರೂ.150 ಕೋಟಿ ರೂಪಾಯಿಗಳ ಅನುದಾನವನ್ನು ಒದಗಿಸಬೇಕೆಂದು ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಮತ್ತು ಮಾನ್ಯ ಮುಖ್ಯಮಂತ್ರಿಯವರನ್ನು ತಮ್ಮ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಡಾ||ತಳವಾರ ಸಾಬಣ್ಣನವರು ಕೇಳಿರುವ ಶೂನ್ಯವೇಳೆ ಪ್ರಶ್ನೆಗೆ ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

(1145) 17.12.2021 12.30 LL-GR

(ಸಭಾಪತಿಯವರ ಉಪಸ್ಥಿತಿ)

**ಊ) ವಿಷಯ:- ಎಸ್.ಸಿ./ಎಸ್.ಟಿ. ಬಡ್ತಿಯಲ್ಲಿ ಮೀಸಲಾತಿ ಮತ್ತು ಜೇಷ್ಠತೆ ಸಂರಕ್ಷಣೆ ವಿಚಾರದಲ್ಲಿ ಅಧಿಕಾರಿಗಳು ಮೀಸಲಾತಿ ವಿರೋಧಿ ನೀತಿ ಅನುಸರಿಸುತ್ತಿರುವುದರ ಬಗ್ಗೆ**

\- - - - - -

**ಶ್ರೀ ಆರ್.ಬಿ. ತಿಮ್ಮಾಪೂರ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಬಡ್ತಿಯಲ್ಲಿ ಮೀಸಲಾತಿ ಮತ್ತು ತತ್‌ಪರಿಣಾಮದ ಜೇಷ್ಠತೆ ಸಂರಕ್ಷಣೆ ವಿಚಾರದಲ್ಲಿ ರಾಜ್ಯ ಸರ್ಕಾರ ಕಾಯಿದೆ ಘೋಷಿಸಿದ್ದರೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ(ಡಿ.ಪಿ.ಎ.ಆರ್.) ಅಧಿಕಾರಿಗಳು ಮೀಸಲಾತಿ ವಿರೋಧಿ ನೀತಿ ಅನುಸರಿಸುತ್ತಿರುವುದು ರಾಜ್ಯದ ಎಸ್.ಸಿ./ಎಸ್.ಟಿ. ನೌಕರರಲ್ಲಿ ಅಸಮಾಧಾನವನ್ನು ಉಂಟು ಮಾಡಿರುತ್ತದೆ.

ಸದರಿ ಕಾಯ್ದೆಯನ್ವಯ ತತ್‌ಪರಿಣಾಮದ ಜೇಷ್ಠತೆಯನ್ನು ಅನುಸರಿಸಿ ಎಸ್.ಸಿ., ನೌಕರರಿಗೆ ಶೇ.15 ಮತ್ತು ಎಸ್.ಟಿ., ನೌಕರರಿಗೆ ಶೇ.3ರಷ್ಟು ಪ್ರಾತಿನಿಧ್ಯ ದೊರಕದ ರೀತಿಯಲ್ಲಿ 2019ರ ಜೂನ್ 24ರಂದು ಸುತ್ತೋಲೆ ಹೊರಡಿಸಿ ಅನ್ಯಾಯ ಮಾಡಲಾಗಿದೆ. ಈ ಸುತ್ತೋಲೆಯನ್ನು ವಾಪಸ್ಸು ಪಡೆಯುವಂತೆ ಮೂರು ಬಾರಿ ಅಡ್ವೋಕೇಟ್ ಜನರಲ್‌ರವರು ತಿಳಿಸಿದ್ದರೂ ಡಿ.ಪಿ.ಎ.ಆರ್. ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಈ ಸಂಬಂಧ ಹಿಂದಿನ ಸಮಾಜ ಕಲ್ಯಾಣ ಸಚಿವರು ಸಭೆ ನಡೆಸಿ ನಿರ್ಣಯ ಕೈಗೊಂಡರೂ ಮೀಸಲಾತಿ ವಿರೋಧಿ ಅಧಿಕಾರಿಗಳು ಸದರಿ ನಿರ್ಣಯವನ್ನು ಜಾರಿ ಮಾಡದೇ ಅನ್ಯಾಯ ಮಾಡಿದ್ದಾರೆ. ದಿನಾಂಕ:04.08.2021ರಂದು ಉಡುಪಿ ಜಿಲ್ಲಾಧಿಕಾರಿಗಳಿಗೆ ತಪ್ಪು ಅಭಿಪ್ರಾಯ ನೀಡಿ ಮೀಸಲಾತಿ ವಂಚಿಸುವ ಕೆಲಸ ಮಾಡಿದ್ದಾರೆ. ದಿನಾಂಕ:06.09.2021ರ ಸುತ್ತೋಲೆಯಲ್ಲಿ 1978ರ ಮೀಸಲಾತಿ ಆದೇಶ ಪಾಲಿಸಲು ಸೂಚಿಸದೇ ವಂಚಿಸಲಾಗಿದೆ. ದಿನಾಂಕ:06.11.2021ರ ಸುತ್ತೋಲೆಯಲ್ಲಿ ಪೂರ್ವಾನ್ವಯ ಪರಿಣಾಮ ಹೊಂದಿರುವುದಿಲ್ಲವೆಂದು 1978ರ ಮೀಸಲಾತಿ ಆದೇಶ 2015ರ ಬ್ಯಾಕ್‌ಲಾಗ್ ಹುದ್ದೆ ತುಂಬುವ ಆದೇಶ ದಿನಾಂಕ:23.06.2018ರ ಜೇಷ್ಠತೆ ಸಂರಕ್ಷಣಾ ಕಾಯ್ದೆ ಇಂದಿನಿಂದ ಅಂದರೆ, ದಿನಾಂಕ:06.11.2021ರಿಂದ ಜಾರಿಗೆ ಬಂದಂತೆ ಸೂಚಿಸಲಾಗಿದೆ. ಇದರಿಂದ ಎಸ್.ಸಿ./ಎಸ್.ಟಿ. ಅಧಿಕಾರಿ ನೌಕರರಿಗೆ ಬಾರಿ ಅನ್ಯಾಯವಾಗಿದೆ. ಅಲ್ಲದೇ, ದಿನಾಂಕ:10.12.2021ರಂದು ಹೊರಡಿಸಿರುವ ಪೋಸ್ಟ್ ಬೇಸ್ಡ್ ಮೀಸಲಾತಿ ಆದೇಶದಲ್ಲಿ 1978ರ ಮೀಸಲಾತಿ ಆದೇಶ ಹಾಗೂ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವ ಆದೇಶವನ್ನು ಪಾಲಿಸುವಂತೆ ಸೂಚಿಸದೇ ಮೀಸಲಾತಿಯಲ್ಲಿ ಮತ್ತೆ ಗೊಂದಲ ಉಂಟಾಗುವಂತೆ ಮಾಡಲಾಗಿದೆ. ಈ ಎಲ್ಲಾ ಅಂಶಗಳ

ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪರಿಶೀಲನೆ ನಡೆಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನೌಕರರಿಗೆ ಕಾಯ್ದೆಯನುಸಾರ ಡಿ.ಪಿ.ಎ.ಆರ್., ಹೊರಡಿಸಿದ ಎಲ್ಲಾ ಆದೇಶಗಳನ್ನು ಪೂರ್ವಾನ್ವಯವಾಗಿ ಅನ್ವಯಿಸಿ ಬಡ್ತಿ ವಂಚಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನೌಕರರ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ಎಸ್.ಸಿ./ಎಸ್.ಟಿ. ನೌಕರರ ಸಂಘದ ಮನವಿಯನ್ನು ಪುರಸ್ಕರಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಆರ್.ಬಿ. ತಿಮ್ಮಾಪೂರರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಪಡೆದು ಒದಗಿಸಲಾಗುವುದು.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

## 4. ವಿತ್ತೀಯ ಕಾರ್ಯಕಲಾಪಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, 2021-22ನೇ ಸಾಲಿನ ಪೂರಕ ಅಂದಾಜುಗಳ 2ನೇ ಕಂತಿನ ಬೇಡಿಕೆಗಳನ್ನು ಹಾಗೂ 2021-22ನೇ ಸಾಲಿನ ಮಧ್ಯ ವಾರ್ಷಿಕ ಪರಿಶೀಲನಾ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**5. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**ವಿಷಯ:- ಕರ್ನಾಟಕ ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದ ಕೆಲವು ಪ್ರಮುಖ ನೀರಾವರಿ ಯೋಜನೆಗಳ ಅನುಷ್ಠಾನದ ಬಗ್ಗೆ.**

\- - - - - -

**ಸಭಾಪತಿಯವರು:-** ನಿಯಮ 59ರ ಪ್ರಕಾರ ನಿಲುವಳಿ ಸೂಚನೆಯನ್ನು ಮಂಡಿಸಲು ಅನುಮತಿ ಕೋರಿಕೆ ಪ್ರಸ್ತಾವವನ್ನು ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಾದಂತಹ ಶ್ರೀ ಕೆ.ಟಿ. ಶ್ರೀಕಂಠೇಗೌಡರವರು, ಶ್ರೀ ಮರಿತಿಬ್ಬೇಗೌಡರವರು, ಶ್ರೀ ಕಾಂತರಾಜುರವರು, ಶ್ರೀ ಕೆ.ಎ. ತಿಪ್ಪೇಸ್ವಾಮಿಯವರು ಹಾಗೂ ಶ್ರೀ ಕೆ. ಗೋವಿಂದರಾಜುರವರು ಪ್ರಸ್ತಾವನೆಯನ್ನು ನೀಡಿರುತ್ತಾರೆ. ಅವರುಗಳಲ್ಲಿ ಯಾರಾದರೂ ಒಬ್ಬರು ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬಹಳ ದಿನಗಳ ನಂತರ ಅಂದರೆ, 2018ರ ನಂತರ, ಬೆಳಗಾವಿಯ ಸುವರ್ಣಸೌಧದಲ್ಲಿ ನಾವು ಅಧಿವೇಶನವನ್ನು ನಡೆಸುತ್ತಿದ್ದೇವೆ. ಈ ಭಾಗದ ಜನರು ತಮ್ಮ ಜ್ವಲಂತ ಸಮಸ್ಯೆಗಳ ಬಗ್ಗೆ ಏನಾದರೂ ಈ ಅಧಿವೇಶನದಲ್ಲಿ ಚರ್ಚೆ ಆಗುತ್ತದೆಯೇ ಎನ್ನುವಂತಹ ಕುತೂಹಲದಲ್ಲಿದ್ದಾರೆ. ಹೇಳಿ-ಕೇಳಿ ಇಡೀ ರಾಜ್ಯ ಇವೊತ್ತಿನ ದಿವಸ ಶೇಕಡ 60 ರಿಂದ 65 ಭಾಗ ಕೃಷಿಯನ್ನು ನಂಬಿ ಬದುಕುತ್ತಿದ್ದಾರೆ. ಆದರೆ, ಈ ಕೃಷಿಯನ್ನು ನಂಬಿ ಬದುಕುತ್ತಿರುವ ಜನಕ್ಕೆ ಮೂಲಭೂತವಾಗಿ ಬೇಕಾಗಿರುವಂಥದ್ದು ನೀರು. ಆ ನೀರಾವರಿ ಸೌಕರ್ಯಕ್ಕಾಗಿ ನಾವು ಹಲವು ಹಲವು ಯೋಜನೆಗಳನ್ನು ಕೈಗೆತ್ತಿಗೊಂಡಿರುತ್ತೇವೆ. ಆದರೆ, ಯಾವ ಯೋಜನೆಯನ್ನೂ ಸಹ ನಾವು ಇನ್ನೂ ಪೂರ್ಣ ಮಾಡುವುದಕ್ಕೆ ಆಗಿರುವುದಿಲ್ಲ. ಅದರ ಜೊತೆಗೆ, ಕುಡಿಯುವ ನೀರಿನ ಯೋಜನೆಯನ್ನು ಕೈಗೆತ್ತಿಕೊಂಡಿರುತ್ತೇವೆ. ಉದಾಹರಣೆಗೆ, ಕೃಷ್ಣಾ ಮೇಲ್ದಂಡೆ ಯೋಜನೆ ಕಳೆದ 40-50 ವರ್ಷಗಳ ಇತಿಹಾಸ ಇರತಕ್ಕಂತಹ ಬಹು ದೊಡ್ಡ ಯೋಜನೆಯಾಗಿದೆ. ಈ ಯೋಜನೆಗೆ ಸಂಬಂಧಪಟ್ಟ ಹಾಗೆ ಈಗಾಗಲೇ ನ್ಯಾಯಮಂಡಳಿಯ ಅಂತಿಮ ತೀರ್ಪು ಬಂದು 8-10 ವರ್ಷಗಳ ಸಮಯ ಸಂದು ಹೋಗಿದೆ. ನಾವು 3ನೇ ಹಂತದ ಯೋಜನೆಯನ್ನು ಈಗ ಕೈಗೆತ್ತಿಕೊಳ್ಳಬೇಕಾಗಿದೆ. ಇದರಿಂದಾಗಿ, ಈಗ ಎಷ್ಟು ನೀರಾವರಿ ಯೋಜನೆಯಾಗಿದೆಯೋ ಅಷ್ಟೇ ಪ್ರಮಾಣದ ನೀರಾವರಿಗೆ ಒಳಪಡಿಸಬೇಕಾದಂತಹ ದೊಡ್ಡ ಸವಾಲು ಸರ್ಕಾರದ ಮುಂದೆ ಇದೆ. ಆದರೆ, ಇವೊತ್ತಿನ ದಿವಸ ಏತಕ್ಕಾಗಿ ಕಾವೇರಿ ನೀರಿನ ಐತೀರ್ಪನ್ನು ಗೆಜೆಟ್‌ನಲ್ಲಿ ನೋಟಿಫಿಕೇಷನ್ ಹೊರಡಿಸಿರುವುದಿಲ್ಲ? ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಯೋಜನೆಯನ್ನು ಅನುಷ್ಠಾನಕ್ಕಾಗಿ ಕೈಗೆತ್ತಿಕೊಳ್ಳುವಂತಹ ಕೆಲಸ ಏತಕ್ಕಾಗಿ ಇನ್ನೂ ಆಗಿರುವುದಿಲ್ಲ? ಇದು ಆಗಬೇಕು

---

ಎನ್ನುವಂಥದ್ದು ಈ ಭಾಗದ ಜನರ ದೊಡ್ಡ ಬೇಡಿಕೆಯಾಗಿದೆ. ಹಾಗಾಗಿ, ಈ ಕುರಿತು ನಾವು ಸುದೀರ್ಘವಾದ ಚರ್ಚೆಯನ್ನು ಮಾಡಬೇಕಾಗಿದೆ.

ಇನ್ನು ಮಹದಾಯಿ ಯೋಜನೆ ವಿಚಾರ ತಮಗೆಲ್ಲರಿಗೂ ಗೊತ್ತಿರುತ್ತದೆ. ಇದು ಸಹ ಕುಡಿಯುವ ನೀರಿನ ವಿಚಾರವಾಗಿದೆ. ಕುಡಿಯುವ ನೀರಿನ ವಿಚಾರದಲ್ಲಿ ಈ ನೆಲದ ಮತ್ತು ಈ ಜಗತ್ತಿನ ಎಲ್ಲಾ ಕಾನೂನುಗಳು ಅದರ ಪರವಾಗಿಯೇ ಇವೆ. ಆ ಕುರಿತು ಕೂಡ ಇವೊತ್ತಿನ ದಿವಸ ನ್ಯಾಯಮಂಡಳಿಯ ತೀರ್ಪು ಬಂದಿರುತ್ತದೆ. ಗೋವಾ ಎನ್ನುವಂತಹ ಒಂದು ಸಣ್ಣ ರಾಜ್ಯದ ತಕರಾರಿಗಾಗಿ ಇದನ್ನು ಸಹ ಗೆಜೆಟ್‌ನಲ್ಲಿ ನೋಟಿಫಿಕೇಷನ್ ಹೊರಡಿಸಿರುವುದಿಲ್ಲ. ಮಹದಾಯಿ ಯೋಜನೆಗಾಗಿ ಈಗಾಗಲೇ ನೂರಾರು ಕೋಟಿ ರೂಪಾಯಿಗಳಷ್ಟು ಹಣವನ್ನು ವ್ಯಯ ಮಾಡಲಾಗಿರುತ್ತದೆ. ಆದರೂ ಸಹ ಈ ಯೋಜನೆ ಪೂರ್ಣಗೊಂಡಿರುವುದಿಲ್ಲ. ಅಲ್ಲದೆ, ಹುಬ್ಬಳ್ಳಿ-ಧಾರವಾಡ ಜಿಲ್ಲೆಗಳು ಸೇರಿದಂತೆ ಸುಮಾರು 8-10 ಜಿಲ್ಲೆಗಳಿಗೆ ಇನ್ನೂ ಸಹ ಕುಡಿಯುವ ನೀರನ್ನು ಕೊಡುವುದಕ್ಕೆ ಸಾಧ್ಯವಾಗಿರುವುದಿಲ್ಲ.

ಮಹದಾಯಿ ಕುಡಿಯುವ ನೀರಿನ ಯೋಜನೆಯನ್ನು ಪೂರ್ಣ ಮಾಡಬೇಕೆಂದು ಜನರು ಮೊನ್ನೆ ಬೆಳಗಾವಿಯಲ್ಲಿಯೂ ಕೂಡ ಹೋರಾಟಕ್ಕೆ ಬಂದಿದ್ದಾರೆ. ಅಲ್ಲದೇ, ಇದೇ ವಿಷಯದ ಬಗ್ಗೆ ಈ ಹಿಂದೆ ವರ್ಷಗಟ್ಟಲೆ ನಿರಂತರವಾಗಿ ಹೋರಾಟ ಮಾಡಿದ್ದು ತಮಗೆಲ್ಲರಿಗೂ ಗೊತ್ತಿರುತ್ತದೆ. ಹಾಗಾಗಿ, ನಾನು ಸರ್ಕಾರವನ್ನು ಈ ಮೂಲಕ ಆಗ್ರಹಿಸಬೇಕಾಗಿದೆ ಮತ್ತು ಸಂಪೂರ್ಣವಾದ ವಿವರವನ್ನು ನಾನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಮಹದಾಯಿ ಯೋಜನೆಯನ್ನು ಪೂರ್ಣ ಮಾಡುವಂತಹ ಏನು ನ್ಯಾಯಮಂಡಳಿಯ ತೀರ್ಪು ಬಂದಿದೆ, ಆ ತೀರ್ಮಾನವನ್ನು ಗೆಜೆಟ್‌ನಲ್ಲಿ ನೋಟಿಫಿಕೇಷನ್ ಮಾಡುವುದರ ಜೊತೆಗೆ, ಈ ಕಾಮಗಾರಿಯನ್ನು ಪೂರ್ಣಗೊಳಿಸಿ ಜನರಿಗೆ ಕುಡಿಯುವ ನೀರನ್ನು ಕೊಡಬೇಕಲ್ಲವೇ? ಅದನ್ನು ವಿಶೇಷವಾಗಿ ಇಲ್ಲಿ ಪ್ರಸ್ತಾಪ ಮಾಡಬೇಕೆಂಬ ಆಶಯ ನನ್ನಲ್ಲಿ ಇದೆ.

ಇನ್ನೂ ಮೇಕೆದಾಟು ಯೋಜನೆಯ ವಿಚಾರವಾಗಿ ಹೇಳುವುದಾದರೆ, ಇತ್ತೀಚೆಗೆ ಬಿದ್ದಂತಹ ಮಳೆಯಿಂದಾಗಿ ಕಾವೇರಿ ನದಿಯಿಂದ ನೂರಾರು ಟಿ.ಎಂ.ಸಿ. ನೀರು ಹರಿದು ಸಮುದ್ರ ಸೇರಿರುತ್ತದೆ. ಅದನ್ನು ನಾವಾಗಲಿ, ತಮಿಳುನಾಡಿನವರಾಗಲಿ ಹಿಡಿದಿಟ್ಟುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಬಹುಶಃ ನಮ್ಮ ರಾಜ್ಯ ಮತ್ತು ತಮಿಳುನಾಡು ರಾಜ್ಯದ ಮಧ್ಯೆ ಇರುವಂತಹ ಸಮಸ್ಯೆಗೆ ಒಂದು ಶಾಶ್ವತ ಪರಿಹಾರ ಈ ಮೇಕೆದಾಟು ಯೋಜನೆ. ಅದಕ್ಕೂ ಮೀರಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ಕೊಡಬೇಕೆಂದು ತೀರ್ಪು ನೀಡಿರುತ್ತದೆ. ಇವೊತ್ತಿನ ದಿವಸ ನ್ಯಾಯಮಂಡಳಿಯ ತೀರ್ಪು ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಅನುಷ್ಠಾನಕ್ಕಾಗಿ ಮೇಕೆದಾಟು ಯೋಜನೆಯನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಅದು ವಿಶೇಷವಾಗಿ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಕುಡಿಯುವ ನೀರಿನ ಯೋಜನೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಮಾಡುವಂಥದ್ದು; ವಿದ್ಯುಚ್ಛಕ್ತಿ ಉತ್ಪತ್ತಿ ಮಾಡುವಂಥದ್ದು ಮತ್ತು ತಮಿಳುನಾಡು ಮತ್ತು ನಮ್ಮ ರಾಜ್ಯದ ನಡುವೆ ಇರತಕ್ಕಂತಹ ಸುಮಾರು 25 ಟಿ.ಎಂ.ಸಿ., ನೀರನ್ನು ಕಾಯ್ದಿರಿಸಿ ಅವರಿಗೆ ಕೊಡುವ ಕಾರಣಕ್ಕಾಗಿ ಮೇಕೆದಾಟು ಯೋಜನೆಯನ್ನು ಕೈಗೆತ್ತಿಕೊಳ್ಳಲೇ ಬೇಕಾಗಿದೆ. ಅದಕ್ಕಾಗಿ ಈಗಾಗಲೇ ಡಿ.ಪಿ.ಆರ್. ಆಗಿರುತ್ತದೆ. ಅದಕ್ಕೆ ಕೇಂದ್ರದ ಅನುಮತಿಯನ್ನು ಪಡೆದು ಈ ಯೋಜನೆಯನ್ನು ಕೈಗೆತ್ತಿಕೊಳ್ಳುವಂತಹ ಇಚ್ಛಾಶಕ್ತಿ ಸರ್ಕಾರದ ಮುಂದೆ ಇರುವುದಿಲ್ಲ.

ಇನ್ನೂ ಎತ್ತಿನಹೊಳೆ ಯೋಜನೆ ನಮಗೆ ಬಹಳ ನೋವು ತರುತ್ತದೆ. ಇತ್ತೀಚೆಗೆ ಮಾನ್ಯ ಕುಮಾರಸ್ವಾಮಿಯವರ ನಾಯಕತ್ವದ ಎಲ್ಲಾ ಶಾಸಕರು ಎತ್ತಿನಹೊಳೆ ಯೋಜನೆಯನ್ನು ವೀಕ್ಷಣೆ ಮಾಡಿ ಬಂದಿರುತ್ತೇವೆ. ಕಳೆದ 15-20 ವರ್ಷಗಳ ಎತ್ತಿನ ಹೊಳೆ ಯೋಜನೆಯನ್ನು ಇದುವರೆವಿಗೂ ಪೂರ್ಣ ಮಾಡಲಿಕ್ಕೆ ಆಗಲಿಲ್ಲ. ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರು ಹಾಗೂ ಸುಮಾರು 8 ಜಿಲ್ಲೆಗಳಿಗೆ ಕುಡಿಯುವ ನೀರಿನ ಯೋಜನೆ ಇದರಲ್ಲಿ ಅಡಕವಾಗಿರುತ್ತದೆ. ಆದರೆ, ಎತ್ತಿನಹೊಳೆ ಯೋಜನೆ ಎತ್ತಿನಹೊಳೆಯಾಗಿಯೇ ನಿಂತಿರುತ್ತದೆ. ಈ ಯೋಜನೆಯಿಂದ ಇನ್ನೂ ಜನರಿಗೆ ಕುಡಿಯುವ ನೀರು ತಲುಪಿರುವುದಿಲ್ಲ. ಹಾಗಾಗಿ, ಇಂತಹ ಮಹತ್ವದ ವಿಚಾರಗಳನ್ನು ನಾವು ಸರ್ಕಾರದ ಗಮನಕ್ಕೆ ತಂದು, ಈ ಸವಾಲನ್ನು ಸ್ವೀಕಾರ ಮಾಡಿ, ಈ ಯೋಜನೆಯನ್ನು ಅನುಷ್ಠಾನ ಕೊಡುವುದರ ಮೂಲಕ ಈ ನಾಡಿನ ಸಮಗ್ರ ಅಭಿವೃದ್ಧಿ ನಾಂದಿ ಹಾಡಬೇಕು. ಅದರ ಜೊತೆಗೆ, ವ್ಯವಸಾಯಕ್ಕೆ ಕಾಯಕಲ್ಪ ತಂದು ಕೊಡಬೇಕಾಗಿದೆ. ರೈತರು ಇವೊತ್ತಿನ ದಿವಸ ತತ್ತರಿಸಿ ಹೋಗಿದ್ದಾರೆ. ಕೋವಿಡ್-19 ಸಾಂಕ್ರಾಮಿಕ ರೋಗ ಹಾಗೂ ಮಳೆಯ ಪ್ರವಾಹ ಈ ಎಲ್ಲಾ ಹಿನ್ನೆಲೆಯಲ್ಲಿ ರೈತರ ಕಷ್ಟ ಹೇಳತೀರದು. ಕಳೆದ 11 ತಿಂಗಳಿನಲ್ಲಿ ರೈತರ ಆತ್ಮಹತ್ಯೆ ಸುಮಾರು 200ಕ್ಕೂ ಹೆಚ್ಚು ಮೀರಿರುತ್ತದೆ. ರೈತರ ಆತ್ಮಹತ್ಯೆ ಮತ್ತು ಅವರ ಕಷ್ಟಗಳನ್ನು ಹೇಳತೀರದು. ಇದರಿಂದಾಗಿ, ಜನ ಗುಳೆ ಹೋಗುತ್ತಿದ್ದಾರೆ. ಹಾಗಾಗಿ, ರೈತರ ಬದುಕು ಒಂದು ಕಡೆ ನಿಲ್ಲಬೇಕಲ್ಲವೇ? ಅವರ ನೆರವಿಗೆ ಸರ್ಕಾರ ಬರಬೇಕಲ್ಲವೇ? ಅದಕ್ಕಾಗಿ ನೀರಾವರಿ ಯೋಜನೆಗಳನ್ನು ಮಾಡಬೇಕಲ್ಲವೇ? ಮತ್ತು ಕುಡಿಯುವ ನೀರಿಗಾಗಿ ಇನ್ನೂ ನಾವು ಪರಿತಪಿಸಬೇಕೇ? ಹಾಗಾಗಿ, ಇಂತಹ ಮಹತ್ವದ ವಿಚಾರಗಳ ಬಗ್ಗೆ ನಾವು ಚರ್ಚೆ ಮಾಡುವುದಕ್ಕೆ ಜರೂರಾಗಿ ಅವಕಾಶ ಮಾಡಿಕೊಡಬೇಕು. ಆ ಮೂಲಕ ಸರ್ಕಾರದ ಕಣ್ಣು ತೆರೆಸುವುದಕ್ಕೆ ತಾವು ಅನುವು ಮಾಡಿಕೊಡಬೇಕೆಂದು ತಮ್ಮಲ್ಲಿ ಆಗ್ರಹ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡರವರು ಪ್ರಸ್ತಾಪಿಸಿದ ವಿಷಯ ಸಾರ್ವಜನಿಕವಾಗಿ ಮಹತ್ವವಾದ ವಿಷಯವಾಗಿರುವುದರಿಂದ, ಈ ವಿಷಯವನ್ನು ನಿಯಮ 68ಕ್ಕೆ ಪರಿವರ್ತನೆ ಮಾಡಲಾಗಿರುತ್ತದೆ.

**(ನಿಯಮ 68ಕ್ಕೆ ಪರಿವರ್ತಿಸಲಾಯಿತು)**

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

## 6. ಹಕ್ಕುಚ್ಯುತಿ ಪ್ರಸ್ತಾಪ

## (ಚರ್ಚೆಗೆ ಅನುಮತಿ ಕೋರಿಕೆ)

**ವಿಷಯ:-** **ದಿನಾಂಕ:16.12.2021ರಂದು ಸರ್ಕಾರದ ವೈಫಲ್ಯಗಳನ್ನು ವಿರೋಧಿಸಿ ಪ್ರತಿಭಟನೆ ನಡೆಸಿ, ರಾಣಿ ಚೆನ್ನಮ್ಮ ವೃತ್ತದಿಂದ ಸುವರ್ಣಸೌಧದವರೆಗೆ ಟ್ರಾಕ್ಟರ್ ಮೂಲಕ ಬರುವಾಗ ಸುವರ್ಣಸೌಧದ ಬಳಿ ವಿರೋಧ ಪಕ್ಷದ ನಾಯಕರೂ ಸೇರಿದಂತೆ ಎಲ್ಲರನ್ನೂ ಪೊಲೀಸ್ ಅಧಿಕಾರಿಗಳಾದ ಶ್ರೀ ತ್ಯಾಗರಾಜನ್ ಮತ್ತು ಶ್ರೀ ಸತೀಶ್‌ಕುಮಾರ್ ಇವರುಗಳು ತಡೆಗಟ್ಟಿರುವ ಬಗ್ಗೆ**

\- - - - - -

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಒಂದು ಹಕ್ಕುಚ್ಯುತಿ ಮಂಡನೆ ಮಾಡಿದ್ದೇವೆ. ಅದನ್ನು ನಾನು ಮೊದಲು ಓದುತ್ತೇನೆ. ಸರ್ಕಾರದ ವೈಪಲ್ಯಗಳನ್ನು ವಿರೋಧಿಸಿ ಪ್ರತಿಭಟನೆ ನಡೆಸಿ, ಸರ್ಕಾರವನ್ನು ಎಚ್ಚರಿಸುವ ಹಕ್ಕು ವಿರೋಧ ಪಕ್ಷಗಳಿಗೆ ಇದೆ. ಅದರಂತೆ, ರಾಜ್ಯ ಸರ್ಕಾರದ ವೈಪಲ್ಯಗಳ ವಿರುದ್ಧ ದಿನಾಂಕ:16.12.2021ರಂದು ಬೆಳಗ್ಗೆ 10.00ಗಂಟೆಗೆ ಬೆಳಗಾವಿ ರಾಣಿ ಚೆನ್ನಮ್ಮ ವೃತ್ತದಿಂದ ಸುವರ್ಣಸೌಧದವರೆಗೆ ಟ್ರಾಕ್ಟರ್ ಮೂಲಕ ಬರುತ್ತಿರುವಾಗ ಸುವರ್ಣಸೌಧದ ಬಳಿ ವಿರೋಧ ಪಕ್ಷದ ನಾಯಕರ ಸೇರಿದಂತೆ, ಎಲ್ಲರನ್ನೂ ಪೊಲೀಸ್ ಅಧಿಕಾರಿಗಳಾದ ಶ್ರೀ ತ್ಯಾಗರಾಜನ್ ಮತ್ತು ಶ್ರೀ ಸತೀಶ್‌ಕುಮಾರ್ ಇವರುಗಳು ರಸ್ತೆಯಲ್ಲಿಯೇ ತಡೆಗಟ್ಟಿ ಸುವರ್ಣಸೌಧಕ್ಕೆ ಪ್ರವೇಶಿಸಿ ಅಧಿವೇಶನಕ್ಕೆ ಹಾಜರಾಗದಂತೆ ತಡೆಹಿಡಿದಿರುವುದು ಶಾಸಕರ ಹಕ್ಕಿಗೆ ಚ್ಯುತಿ ಉಂಟಾಗಿರುತ್ತದೆಯೆಂದು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 174ನೇ ನಿಯಮದ ಮೇರೆಗೆ ಹಕ್ಕುಚ್ಯುತಿಯನ್ನು ಸದನದಲ್ಲಿ ನಾನು ಹಾಗೂ ನನ್ನ ಸ್ನೇಹಿತರು ಮಂಡಿಸುತ್ತಿದ್ದೇವೆ.

ಈಗ ನಡೆಯುತ್ತಿರುವ ಅಧಿವೇಶನವನ್ನು ಸುಮಾರು ಎರಡೂವರೆ ವರ್ಷಗಳ ನಂತರ ಬೆಳಗಾವಿ ಸುವರ್ಣಸೌಧದಲ್ಲಿ ಕರೆಯಲಾಗಿರುತ್ತದೆ. ಈ ಅಧಿವೇಶನದಲ್ಲಿ ನಾವು ಭಾಗಿಯಾಗಬೇಕು ಹಾಗೂ ಅನೇಕ ವಿಚಾರಗಳ ಬಗ್ಗೆ ಚರ್ಚೆ ಮಾಡಬೇಕೆಂದು ಪ್ರತಿಪಕ್ಷದ ನಾಯಕನಾಗಿ ನಾನು ಮತ್ತು ನಮ್ಮ ಪಕ್ಷದ ಮುಖ್ಯ ಸಚೇತಕರು ಮತ್ತು ನಮ್ಮ ಪಕ್ಷದ ಎಲ್ಲಾ ಶಾಸಕರುಗಳು ಸುವರ್ಣಸೌಧಕ್ಕೆ ಬರುತ್ತಿರುವಾಗ, "ನಿಮ್ಮನ್ನು ಒಳಗೆ ಬಿಡುವುದಿಲ್ಲ" ಎಂದು ಹೇಳಿ ಶ್ರೀ ತ್ಯಾಗರಾಜನ್ ಮತ್ತು ಶ್ರೀ ಸತೀಶ್‌ಕುಮಾರ್ ಎನ್ನುವಂತಹ ಪೊಲೀಸ್ ಅಧಿಕಾರಿಗಳು ನಮ್ಮನ್ನು ಒಳಗಡೆ ಬಿಟ್ಟಿರುವುದಿಲ್ಲ. ಸದರಿ ಪೊಲೀಸ್ ಅಧಿಕಾರಿಗಳಿಗೆ, "ನಮ್ಮನ್ನು ಒಳಗಡೆ ಬಿಡಲಿಲ್ಲವೆಂದರೆ, ತಮ್ಮ ವಿರುದ್ಧ ಹಕ್ಕುಚ್ಯುತಿ

---

ಆಗುತ್ತದೆ. ಅದನ್ನು ತಾವು ಎದುರಿಸಬೇಕಾಗುತ್ತದೆ. ತಮ್ಮ ವಿರುದ್ಧ ಉಗ್ರವಾದಂತಹ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ" ಎಂದು ಎಲ್ಲಾ ರೀತಿಯಿಂದಲೂ ತಿಳಿಸಿ ಹೇಳಿರುತ್ತೇವೆ.

ಅಷ್ಟೇ ಅಲ್ಲದೇ, ನಾವೆಲ್ಲರೂ ಸಹ ತಮ್ಮ ಸುಪರ್ದಿಯಲ್ಲಿರುತ್ತೇವೆ. ಅಧಿವೇಶನ ನಡೆದಾಗ, ತಾವುಗಳೇ ನಮಗೆ ಒಳಗಡೆ ಬರುವುದಕ್ಕೆ ಅವಕಾಶ ಮಾಡಿಕೊಡಬೇಕು. ನಮಗೆ ಯಾವುದೇ ತೊಂದರೆ ಆದರೂ ಸಹ ಅದಕ್ಕೆ ತಾವೇ ಜವಾಬ್ದಾರರಾಗಿರುತ್ತಾರೆ. We are under your custody. ತಾವು ನಮ್ಮ custodian. ಅಧಿವೇಶನ ನಡೆಯುವಾಗ ನಮ್ಮನ್ನು ಸುಮಾರು 3 ತಾಸು ಸುವರ್ಣಸೌಧದ ಗೇಟ್‌ನ ಹೊರಗಡೆ ನಿಲ್ಲಿಸಿರುತ್ತಾರೆ. ನಮ್ಮನ್ನು ಒಳಗಡೆ ಬಿಡುವುದಕ್ಕೆ ಅವರು ತಯಾರಿರಲಿಲ್ಲ. ನಾವು ಹೇಗೆ ಒಳಗಡೆ ಬರಬೇಕು? ಏಕೆಂದರೆ, ಸುವರ್ಣಸೌಧದ ಗೇಟ್ ಲಾಕ್ ಮಾಡಿರುತ್ತಾರೆ ಮತ್ತು ನೂರಾರು ಪೋಲಿಸ್ ಅಧಿಕಾರಿಗಳನ್ನು ತಂದು ಗೇಟ್ ಮುಂದೆ ನಿಲ್ಲಿಸಿರುತ್ತಾರೆ ಮತ್ತು ನಾವು ಏನು ಹೇಳಿದರೂ ನಮ್ಮನ್ನು ಒಳಗಡೆ ಬಿಟ್ಟಿರುವುದಿಲ್ಲ.

(ಮುಂದು)

(1146) 17.12.2021 12.40 YL-MD (VK)

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಅದರ ಜೊತೆಗೆ ನಮ್ಮ ಕೆಳಮನೆಯ ವಿರೋಧ ಪಕ್ಷದ ನಾಯಕರು ಹಾಗೂ ಎಲ್ಲಾ ಬಹುತೇಕ ಶಾಸಕರು ಇದ್ದರು. ನಮ್ಮ ಜೀವನದಲ್ಲಿ ಈ ರೀತಿ ನಡೆದಿದ್ದು ಇದೇ ಮೊಟ್ಟಮೊದಲು. ಅಧಿವೇಶನಕ್ಕೆ ನಮ್ಮನ್ನು ಒಳಗೆ ಬಿಡುವುದಿಲ್ಲವೆಂದರೆ, ಪೊಲೀಸ್‌ನವರಿಗೆ ಅಂತಹ ಅಧಿಕಾರವನ್ನು ನೀಡಿದವರು ಯಾರು? ಈ ವಿಚಾರದಲ್ಲಿ ನಮ್ಮ ಹಕ್ಕುಚ್ಯುತಿ ಜೊತೆಗೆ ತಮ್ಮ ಹಕ್ಕುಚ್ಯುತಿ ಸಹ ಆಗಿದೆ. ಶಾಸಕರು ಅವರ ಕರ್ತವ್ಯವನ್ನು ನಿರ್ವಹಿಸಲು ತಾವು ಎಲ್ಲಾ ರೀತಿಯ ಅವಕಾಶವನ್ನು ಕಲ್ಪಿಸಿಕೊಡಬೇಕು. ತಮ್ಮ ಸುಪರ್ಧಿಯಲ್ಲಿದ್ದಾಗ ಪೊಲೀಸ್‌ನವರು ನಮ್ಮನ್ನು ಒಳಗೆ ಬಿಡಲಿಲ್ಲವೆಂದರೆ, ಕೇವಲ ಶಾಸಕರ ಹಕ್ಕುಚ್ಯುತಿ ಮಾತ್ರವಾಗುವುದಿಲ್ಲ, ನೇರವಾಗಿ ತಮಗೆ ಹೊಡೆತ ಬಿಳುತ್ತದೆ. ತಾವು ಏನಾದರೂ ನಮ್ಮನ್ನು ಒಳಗೆ ಬಿಡುವುದು ಬೇಡವೆಂದು ಹೇಳಿದ್ದೀರಾ?

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ಒಂದು ನಿಮಿಷ. ನನಗೆ ಗೋವಿಂದರಾಜುರವರು ಬಂದು ವಿಚಾರವನ್ನು ತಿಳಿಸಿದರು. ನಾನು ತಕ್ಷಣವೇ ಗೃಹ ಸಚಿವರು ಮತ್ತು ಕಾನೂನು ಸಚಿವರನ್ನು ಕರೆಯಿಸಿ instructions ನೀಡಿದರೂ ಅವರು ತಮ್ಮನ್ನು ಒಳಗೆ ಬಿಟ್ಟಿಲ್ಲ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಆಯಿತು. ಆದರೂ ನಾವು ಸುಮಾರು 3 ಗಂಟೆಗಳ ಕಾಲ ಹೊರಗೆ ನಿಂತಿದ್ದೇವೆ.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ತಾವು instructions ನೀಡಿದರೂ ಪೊಲೀಸ್‌ನವರು ನಮ್ಮನ್ನು ಒಳಗೆ ಬಿಡಲಿಲ್ಲ.

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು ಹಕ್ಕುಚ್ಯುತಿ ಆಗುತ್ತದೆಯೇ, ಇಲ್ಲವೇ?

**ಸಭಾಪತಿಯವರು:-** ಆಯಿತು. ಕುಳಿತುಕೊಳ್ಳಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನನ್ನ ಸಾರ್ವಜನಿಕ ಬದುಕಿನಲ್ಲಿ ಈ ರೀತಿ ಪೊಲೀಸ್ ಅಧಿಕಾರಿಗಳ ಉದ್ಧಟತನದಿಂದಾಗಿ ಸದನಕ್ಕೆ ಹೋಗುವ ಶಾಸಕರನ್ನು ತಡೆಹಿಡಿದು ನಿಲ್ಲಿಸುತ್ತಾರೆ ಎಂದರೆ, ಬಹುಶಃ ಇಂತಹ ತಪ್ಪು, ಉದ್ಧಟತನ, ಅಕ್ಷಮ್ಯ ಅಪರಾಧವನ್ನು ಪೊಲೀಸ್ ಅಧಿಕಾರಿಗಳು ಮಾಡಿದ್ದು, ಅವರಿಗೆ ಸರಿಯಾದ ರೀತಿಯಲ್ಲಿ ಶಾಸ್ತಿ ಆಗಬೇಕು. ಇಲ್ಲದಿದ್ದರೆ ನಮಗೆ ಏನು safety, ಏನು ಜವಾಬ್ದಾರಿ ಇದೆ. ಸದನ ನಡೆಯುವಂಥ ಸಂದರ್ಭದಲ್ಲಿ ಪೊಲೀಸ್‌ನವರು ನಮ್ಮನ್ನು ಮುಟ್ಟಬೇಕಾದರೆ, ಪರವಾನಗಿ ತೆಗೆದುಕೊಳ್ಳಬೇಕು. ಯಾವುದೇ ಒಂದು criminal offence ಇದ್ದು, ಬಂಧಿಸಬೇಕಾದರೆ ತಮ್ಮ ಗಮನಕ್ಕೆ ತಂದು ನಮ್ಮನ್ನು ಮುಟ್ಟಬೇಕು. ಅದನ್ನು ತಾವು ಸದನದಲ್ಲಿ ಪ್ರಸ್ತಾಪ ಮಾಡುತ್ತೀರಿ. ಐ.ಪಿ.ಎಸ್. ಗಳಿಗೆ ಇದೆಲ್ಲದರ ಕನಿಷ್ಠ ಜ್ಞಾನವು ಇಲ್ಲವೇ? ಇದೆಲ್ಲಾ ಏನು? ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಅವರು ಪ್ರವೇಶ ಮಾಡಿದ ಹಾಗೆ ಅಲ್ಲವೇ? ನಿನ್ನೆ ದಿವಸ ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದಾಗ ನಾನು ಅದಕ್ಕಾಗಿಯೇ ಮಾನ್ಯ ಮುಖ್ಯಮಂತ್ರಿಗಳ ಮೇಲೆ ಆಪಾದನೆ ಮಾಡಲಿಲ್ಲ. ಏಕೆಂದರೆ, ಅದು ತಮ್ಮ ಸುಪರ್ದಿನಲ್ಲಿರುವಂಥದ್ದು. ತಮ್ಮ ಆದೇಶದ ಪ್ರಕಾರ ನಾವು 11.00 ಗಂಟೆಗೆ ಸದನಕ್ಕೆ ಬರಲಿಲ್ಲವೆಂದರೆ, ಏತಕ್ಕೆ ಪ್ರತಿಪಕ್ಷದ ಶಾಸಕರು ಇನ್ನು ಸದನಕ್ಕೆ ಬಂದಿಲ್ಲವೆಂದು ತಮಗೆ ಅದರ ಗುರುತು ಆಗಬೇಕಲ್ಲವೇ? ತಕ್ಷಣವೇ ಏನಾಗಿದೆ ಎಂಬುದನ್ನು ನೋಡಬೇಕು. ಕೆಲವು ಪೊಲೀಸ್ ಅಧಿಕಾರಿಗಳು ನಮಗೆ ಟ್ರ್ಯಾಕ್ಟರ್‌ನಲ್ಲಿ ಹೋಗುವ ಹಾಗಿಲ್ಲ ಎಂದು ಹೇಳುತ್ತಾರೆ. ಟ್ರ್ಯಾಕ್ಟರ್ ರೈತರ ವಾಹನ.

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾವು ಸೈಕಲ್‌ನಲ್ಲಿ ಬೇಕಾದರೂ ಹೋಗಬಹುದು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ಬೈಸಿಕಲ್‌ನಲ್ಲಿ ಬರುತ್ತೇವೆ, ಚಕ್ಕಡಿಯಲ್ಲಿ ಬರುತ್ತೇವೆ. ನಾವು ಅಧಿವೇಶನಕ್ಕೆ ಬರುವುದು ಮುಖ್ಯ. ಇದು ಒಂದು ರೀತಿ ರೈತರಿಗೆ ಅವಮಾನ ಮಾಡಿದಂತಾಗಿದೆ. ಟ್ರ್ಯಾಕ್ಟರ್ ಎಂದರೆ, ಏನೆಂದು ತಿಳಿದುಕೊಂಡಿದ್ದಾರೆ? ಟ್ರ್ಯಾಕ್ಟರ್ ಎಂದರೆ, ಈ ದೇಶದ ಜನರಿಗೆ ಅನ್ನ ನೀಡುವ ವಾಹನ. ರೈತರು ಹಗಲು-ರಾತ್ರಿ ನಿದ್ದೆ ಇಲ್ಲದೇ ಬಿತ್ತಿ, ಆಹಾರ-ಧಾನ್ಯವನ್ನು ಉಳುಮೆ ಮಾಡಿ ಈ ದೇಶದ 130 ಕೋಟಿ ಜನರಿಗೆ ಅನ್ನ ನೀಡುವಂಥ ಅನ್ನದಾತರ ವಾಹನವಾಗಿದೆ. ಅಷ್ಟು ಕೀಳಾಗಿ ಕಾಣಬಹುದೇ?

**ಡಾ: ಕೆ.ಸಿ.ನಾರಾಯಣಗೌಡ(ಕ್ರೀಡೆ, ಯುವಜನ, ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೇ, ಹಾಗಾದರೆ, ಅವರು ಪ್ರತಿ ದಿವಸ ಟ್ರ್ಯಾಕ್ಟರ್‌ನಲ್ಲಿಯೇ ಬರಬಹುದು ಅಲ್ಲವೇ?

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯಸಚೇತಕರು):-** ಮಾನ್ಯ ಸಭಾಪತಿಯವರೇ, ಇಂತಹ ಗಾಡಿಯಲ್ಲಿಯೇ ಬರಬೇಕೆಂದು ಕಾನೂನು ಏನಿಲ್ಲ ಅಲ್ಲವೇ? ಯಾವ ಗಾಡಿಯಲ್ಲಿ ಬೇಕಾದರೂ ಶಾಸಕರು ಬರಬಹುದು (ಗೊಂದಲ) ಎತ್ತಿನಗಾಡಿಯಲ್ಲಿಯೇ,...

**(ಗೊಂದಲ)**

**ಸಭಾಪತಿಯವರು:-** ಆಯಿತು, ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಧ್ಯದಲ್ಲಿ ಎದ್ದುನಿಂತು ಏನು ಮಾತನಾಡುತ್ತಾರೆ? ಅವರಿಗೆ ಕುಳಿತುಕೊಳ್ಳಲು ಹೇಳಿ. (ಗೊಂದಲ) ಅವರು ಏನು ಕಾನೂನು ಮಾಡಿದ್ದಾರೆಯೇ?

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:-** ಮಾನ್ಯ ಸಭಾಪತಿಯವರೇ, ಆ ರೀತಿ ಬರಬಾರದು ಎಂದು ಕಾಯಿದೆ ಇದೆಯೇ? ಹೇಗೆ ಬರಬೇಕೆಂದು ನಾವು ತೀರ್ಮಾನ ಮಾಡುತ್ತೇವೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, **XXX**

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**(ಗೊಂದಲ)**

**ಸಭಾಪತಿಯವರು:-** ಆಯಿತು. ನಾನು ಹೇಳುತ್ತೇನೆ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, **XXX**

**(ಗೊಂದಲ)**

**ಡಾ: ಕೆ.ಸಿ.ನಾರಾಯಣಗೌಡ:-** ಮಾನ್ಯ ಸಭಾಪತಿಯವರೇ, ಎತ್ತಿನ ಗಾಡಿಯನ್ನು ಹೊಡೆಯುವವರು ನಾವು.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆ ರೀತಿ ಕೇಳುವುದು ನಮ್ಮ ಹಕ್ಕು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, **XXX**

**(ಗೊಂದಲ)**

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:-** ಮಾನ್ಯ ಸಭಾಪತಿಯವರೇ, ಅದನ್ನು ಕೇಳುವುದಕ್ಕೆ ಅವರು ಯಾರು?

**(ಗೊಂದಲ)**

**ಡಾ: ಕೆ.ಸಿ.ನಾರಾಯಣಗೌಡ:-** ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿರುವವರಿಗೆ (ಗೊಂದಲ) ಎತ್ತಿನಗಾಡಿ ಹೊಡೆಯುವವರು ನಾವು.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇಂತಹ ಗಾಡಿಯಲ್ಲಿಯೇ ಹೋಗಬೇಕೆಂದು ನಿಯಮ ಇದೆಯೇ?

**(ಗೊಂದಲ)**

**ಡಾ: ಕೆ.ಸಿ.ನಾರಾಯಣಗೌಡ:-** ಮಾನ್ಯ ಸಭಾಪತಿಯವರೇ, ಮಹಾರಾಷ್ಟ್ರದಲ್ಲಿ ಇದೆ (ಗೊಂದಲ) ಎತ್ತಿನಗಾಡಿಯಲ್ಲಿ ಬರುವ ವ್ಯವಸ್ಥೆಯನ್ನು ಮನೆಯಲ್ಲಿಟ್ಟುಕೊಳ್ಳಲಿ.

**(ಗೊಂದಲ)**

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, **XXX**

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರು ಯಾರು ನಮಗೆ ಹೇಳುವುದಕ್ಕೆ?

**(ಗೊಂದಲ)**

**ಡಾ: ಕೆ.ಸಿ.ನಾರಾಯಣಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಎಂ.ನಾರಾಯಣಸ್ವಾಮಿ ಮನೆ ಹತ್ತಿರ ಎತ್ತಿನಗಾಡಿ ಇದ್ದರೆ, ನಾನೇ surrender ಆಗುತ್ತೇನೆ. ನಾವು ಎತ್ತಿನಗಾಡಿ ಇಟ್ಟಿದ್ದೇವೆ. ನಮ್ಮ ಮನೆಗೆ ಬಂದು ನೋಡಲಿ, ಸುಮ್ಮನೆ ಮಾತನಾಡಬಾರದು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಸಿ.ನಾರಾಯಣಗೌಡರವರು ಮಾತನಾಡಲು ಯಾರು ಅಧಿಕಾರ ನೀಡಿರುವುದು?

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮ್ಮನ್ನು ಕೇಳುವುದಕ್ಕೆ ಅವರು ಯಾರು? ನಾವು ಇಂತಹದರಲ್ಲೇ ಬರಬೇಕೆಂದು ಕಾನೂನೇನು ಇದೆಯೇ?

**(ಗೊಂದಲ)**

**ಡಾ: ಕೆ.ಸಿ.ನಾರಾಯಣಗೌಡ:-** ಮಾನ್ಯ ಸಭಾಪತಿಯವರೇ, ನಮ್ಮ ಊರಿಗೆ ಬಂದು ನೋಡಲಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವರಿಗೆ ಸತ್ಯವನ್ನು ಹೇಳಬಾರದು ಬಿಡಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, **XXX**

**(ಗೊಂದಲ)**

**ಡಾ: ಕೆ.ಸಿ.ನಾರಾಯಣಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದರಾಮಯ್ಯನವರ ಮನೆಯಲ್ಲಿ ಟ್ರ್ಯಾಕ್ಟರ್ ಇದೆಯೇ, ಸುಮ್ಮನೆ ಏನೋ ಮಾತನಾಡುವುದು ಬೇಡ.

**(ಗೊಂದಲ)**

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

---

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆಟೋರಿಕ್ಷಾದಲ್ಲಿ ಬರುತ್ತೇವೆ, ಅವರು ಯಾರು ಕೇಳುವುದಕ್ಕೆ?

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಬಾಂಬೆಯಲ್ಲಿದ್ದುಕೊಂಡು ಎತ್ತಿನಗಾಡಿಯ ಬಗ್ಗೆ ಮಾನ್ಯ ಸಚಿವರು ಮಾತನಾಡುತ್ತಾರೆ. ಬಾಂಬೆಯಲ್ಲಿ ಎತ್ತಿನಗಾಡಿ ಇಟ್ಟುಕೊಂಡಿದ್ದಾರೆಯೇ?

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, **XXX**

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ. ನಾನು ಮಾತನಾಡುತ್ತೇನೆ ಇರಿ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ನಮ್ಮನ್ನು ಕ್ಷಮಾಪಣೆ ಕೇಳಬೇಕು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಟ್ರ್ಯಾಕ್ಟರ್ ಎಂದರೆ, ಮಾನ್ಯ ಸಚಿವರು ಏನೆಂದು ತಿಳಿದುಕೊಂಡಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ನಾರಾಯಣಗೌಡರವರೇ,...

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಯಾವ ಗಾಡಿಯಲ್ಲಾದರೂ ನಾವು ಬರುತ್ತೇವೆ, ನಮ್ಮನ್ನು ಕೇಳುವುದಕ್ಕೆ ಅವರು ಯಾರು? Who are you?

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, **XXX**

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರಿಗೆ ನಮ್ಮನ್ನು ಕ್ಷಮೆ ಕೇಳುವುದಕ್ಕೆ ಹೇಳಿ.

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ. ನಾನು ಮಾತನಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದು ರೈತರ ವಾಹನ. ರೈತರು ಉಳಿಮೆ ಮಾಡಲು, ಬಿತ್ತನೆ ಮಾಡಲು, ಬೆಳೆ ಬೆಳೆಯುವುದಕ್ಕೆ ಎಲ್ಲದಕ್ಕೂ ಟ್ರ್ಯಾಕ್ಟರ್ ಉಪಯೋಗಿಸುತ್ತಾರೆ (ಗೊಂದಲ) ಅನ್ನ ನೀಡುತ್ತಾರೆ.

**(ಗೊಂದಲ)**

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:-** ಮಾನ್ಯ ಸಭಾಪತಿಯವರೇ, **XXX**

**(ಗೊಂದಲ)**

**ಡಾ: ಕೆ.ಸಿ.ನಾರಾಯಣಗೌಡ:-** ಮಾನ್ಯ ಸಭಾಪತಿಯವರೇ, ನಾನು ಸಹ ಅಧಿಕಾರದಲ್ಲಿ ಇರುವವನು.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ನಮ್ಮನ್ನು ಕೇಳುವುದಕ್ಕೆ ಅವರು ಯಾರು?

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, **XXX** **(ಗೊಂದಲ)** ಪೊಲೀಸ್‌ನವರನ್ನು ಏನು defend ಮಾಡಿಕೊಳ್ಳಲು ಹೊರಟಿದ್ದಾರೆ, ಅವರ ಮರ್ಯಾದೆ ಕಳೆದುಕೊಳ್ಳುವುದನ್ನು ನೋಡಿಕೊಳ್ಳಲಿ.

**(ಗೊಂದಲ)**

**ಡಾ: ಕೆ.ಸಿ.ನಾರಾಯಣಗೌಡ:-** ಮಾನ್ಯ ಸಭಾಪತಿಯವರೇ, ದಯವಿಟ್ಟು **XXX** ಎಂಬ ಪದವನ್ನು ಕಡತದಿಂದ ತೆಗೆಯಿಸಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, **XXX**

**(ಗೊಂದಲ)**

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:-** ಮಾನ್ಯಸಭಾಪತಿಯವರೇ, ಯಾವುದರಲ್ಲಿ ಬರಬೇಕೆಂದು ರೂಮರ್ ಇದೆಯೇ?

**(ಗೊಂದಲ)**

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

**ಡಾ: ಕೆ.ಸಿ.ನಾರಾಯಣಗೌಡ:-** ಮಾನ್ಯ ಸಭಾಪತಿಯವರೇ, ಅವರ ವಯಸ್ಸಿಗೆ ಇಂತಹ ಮಾತು ಬರಬಾರದು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, **XXX**

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಸುಮ್ಮನೆ ಇರಲು ಹೇಳಿ, ಅವರು ದೊಡ್ಡವರಾಗಿ ಆ ರೀತಿ ಮಾತನಾಡಬಾರದು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ಆ ರೀತಿ ಮಾತನಾಡಿದರೆ ಹೇಗೆ?

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರುನ್ನು ಹೊರತುಪಡಿಸಿ, ಕಾಂಗ್ರೆಸ್ ಪಕ್ಷದ ಉಳಿದ ಸದಸ್ಯರೆಲ್ಲರೂ ಬಾವಿಯಲ್ಲಿ ಧರಣಿ ನಿರತರಾದರು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಹರಿಪ್ರಸಾದ್‌ರವರೆ ದಯವಿಟ್ಟು ಬಾವಿಯಿಂದ ಹೊರಗೆ ಬನ್ನಿ.

**ಸಭಾಪತಿಯವರು:- ಯಾವುದು ಕಡತಕ್ಕೆ ಹೋಗಬಾರದು.**

**ಶ್ರೀ ಎಸ್. ಆರ್. ಪಾಟೀಲ್:-** ಮಾನ್ಯ ಸಭಾನಾಯಕರೆ, **XXX**

**(ಗೊಂದಲ)**

**ಡಾ|| ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ನಮ್ಮ ಕೆಲವು ಸಚಿವರನ್ನು ಈ ರೀತಿ target ಮಾಡಿ, ಮಾತನಾಡುತ್ತಿದ್ದಾರೆ ಇದು ಸರಿಯಲ್ಲ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, **XXX**

**(ಗೊಂದಲ)**

**ಡಾ|| ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯವೇ ಇಲ್ಲವೇ? (ಗೊಂದಲ) ಮಾನ್ಯ ಸಚಿವರು ಮಾತನಾಡಲೇ ಬಾರದೇ?

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಸದನ ಸಮಿತಿ,...

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

**(ಗೊಂದಲ)**

**ಸಭಾಪತಿಯವರು:-** ತಮಗೆ ಏನಾದರೂ ಜ್ಞಾನ ಇದೆಯೇ? ನಾನು ಹೇಳುವುದನ್ನು ಯಾರು ಕೇಳುವುದಿಲ್ಲವೆಂದರೆ ಏನು? ಇದು ಸದನವೇ ಏನು? ಇದು ಸರಿಯಲ್ಲ. ಸಭಾಪತಿಯವರು ಎಂದರೆ, ಸ್ವಲ್ಪವಾದರೂ ಗೌರವ ನೀಡಬೇಕು. ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಕೆ.ಸಿ.ನಾರಾಯಣಗೌಡರೆ ತಾವು ಸಚಿವರಾಗಿ ಕಾರ್ಯನಿರ್ವಹಿಸುತ್ತಿರುವವರು. ತಾವು ಏನೇ ಮಾತನಾಡಬೇಕೆಂದರೆ ನನ್ನನ್ನು ಕೇಳಬೇಕು. ನೀವುಗಳೇ ಏನು ಬೇಕಾದರೂ ಮಾತನಾಡುವ ಹಾಗಿಲ್ಲ. ಸಚಿವರು ಎಂದರೆ, ಸೌಜನ್ಯ ಇರುವವರು. ಮತ್ತೊಮ್ಮೆ ಇದು ಮರುಕಳಿಸಬಾರದು.

**ಡಾ: ಕೆ.ಸಿ.ನಾರಾಯಣಗೌಡ:-** ಮಾನ್ಯ ಸಭಾಪತಿಯವರೇ, ಅಷ್ಟಕ್ಕೂ ನಾನು ಏನು ಹೇಳಿದ್ದೆ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇವತ್ತು 'ಏನು ಹೇಳಬೇಕಾಗಿತ್ತು ಅದೆಲ್ಲವನ್ನೂ ಹೇಳಿ' ಏನು ಹೇಳಿದ್ದೇನು ಎಂದು ಬೇರೆ ಕೇಳುತ್ತಾರೆ.

**ಸಭಾಪತಿಯವರು:-** ಆಯಿತು, ಕುಳಿತುಕೊಳ್ಳಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮರ್ಯಾದೆ, ...

**ಸಭಾಪತಿಯವರು:-** ಆಯಿತು. ಕುಳಿತುಕೊಳ್ಳಿ. ಮಾನ್ಯ ಸಚಿವರಿಗೆ ಮಾತನಾಡಲು ಅಧಿಕಾರ ನೀಡಿದವರು ಯಾರು? ಈ ಸದನದಲ್ಲಿ ಸಚಿವರಾಗಲಿ, ಶಾಸಕರಾಗಲಿ, ಯಾರೇ ಆಗಲಿ ಒಂದೇ ರೀತಿಯ ಗೌರವ ಇದೆ. ಒಬ್ಬರು ಎದ್ದು ಒಂದು ವಿಷಯದ ಮೇಲೆ ಮಾತನಾಡುವಾಗ ಆ ವಿಷಯದ ಗೌಪ್ಯತೆ ಮತ್ತು ಮಹತ್ವವನ್ನು ತಿಳಿದುಕೊಂಡು ಸಚಿವರು ಮಾತನಾಡಬೇಕು. ಮಧ್ಯೆಯಲ್ಲಿ ಎದ್ದು ಏನೇನೋ ಮಾತನಾಡುವುದು ಸರಿಯಲ್ಲ. ಪ್ರತಿ ದಿವಸ ನಾನು ಹೇಳುವುದಕ್ಕಾಗುವುದಿಲ್ಲ. ದಯವಿಟ್ಟು ಇದನ್ನು ಇಲ್ಲಿಗೆ ಬಿಡಿ. **<u>ಅದನ್ನು ಕಡತದಿಂದ ತೆಗೆಯಿರಿ.</u>**

**(ಈ ಹಂತದಲ್ಲಿ ಬಾವಿಯಲ್ಲಿ ಧರಣಿ ನಿರತರಾಗಿದ್ದ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, **XXX**

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಿಯಮ ಇದೆ. ಒಬ್ಬ ಸದಸ್ಯರು ಮಾತನಾಡುವಾಗ ಆ ರೀತಿ ಹೇಳಿಕೆ ನೀಡುವುದು ತಪ್ಪು.

**(ಗೊಂದಲ)**

**ಸಭಾಪತಿಯವರು:-** ಆಯಿತು. ನಾನು ಈಗಾಗಲೇ ಹೇಳಿದ್ದೇನೆ ಬಿಡಿ.

**ಶ್ರೀ ಎಸ್.ಆರ್.ಪಾಟೀಲ್:-** ಆಯಿತು, ನಾನು ಏನು ಹೇಳಿದ್ದೇನೆ ಮಾನ್ಯ ಸಭಾಪತಿಯವರು ಹೇಳಿದ ವಿಚಾರವನ್ನೇ ನಾನು ಹೇಳಿದ್ದೇನೆ. ಅದರ ಬಗ್ಗೆ ಏನು extra ಹೇಳಿಲ್ಲ.

(ಮುಂದು)

(1147) 17-12-2021 / 12.50 / SK-(MD) VK

(ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಒಬ್ಬ ಜವಾಬ್ದಾರಿ ಇಲ್ಲದಿರುವಂತಹವರನ್ನು ಮಂತ್ರಿಯಾಗಿ ಏತಕ್ಕೆ ಮಾಡುತ್ತಾರೆ? ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿರುವಾಗ, ಅವರು ಮಧ್ಯೆ ನಿಂತುಕೊಂಡು ಮಾತನಾಡುತ್ತಾರೆ.

**ಸಭಾಪತಿಯವರು:-** ನಾನು ಅವರಿಗೆ ಹೇಳಿದ್ದೇನೆ. ತಾವು ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿರುವ ಎಲ್ಲಾ ಸದಸ್ಯರು ಶೇಕಡ ನೂರಕ್ಕೆ ತೊಂಭತ್ತರಷ್ಟು ಕೃಷಿ ಕುಟುಂಬದಿಂದ ಬಂದವರು.

**ಸಭಾಪತಿಯವರು:-** ಹೌದು.

**ಶ್ರೀ ಎಸ್.ಆರ್.ಪಾಟೀಲ್ :-** ಮಾನ್ಯ ಸಭಾಪತಿಯವರೇ, ತಾವು ಕೂಡ ಕೃಷಿ ಕುಟುಂಬದಿಂದ ಬಂದವರು. ರೈತರು ಉಳುಮೆ ಮಾಡುವುದಕ್ಕೆ ಇರುವಂತಹ ವಾಹನ ಅದು ಟ್ರ್ಯಾಕ್ಟರ್. ಆ ವಾಹನ ...

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ ಒಂದು ನಿಮಿಷ. ತಮ್ಮ ಮಾತಿಗೆ ನೂರಕ್ಕೆ ನೂರರಷ್ಟು ಬೆಂಬಲವನ್ನು ನಾನು ಕೊಟ್ಟಿದ್ದೇನೆ. ತಾವು ಮಾತನಾಡಿ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

**ಶ್ರೀ ಎಸ್.ಆರ್.ಪಾಟೀಲ್ :-** ಮಾನ್ಯ ಸಭಾಪತಿಯವರೇ, ತಮಗೆ ಧನ್ಯವಾದಗಳು. ಆ ಅಧಿಕಾರಿಗಳಿಗೆ ಕಾನೂನಿನ ಜ್ಞಾನವಿಲ್ಲ. ಅವರು ಐ.ಪಿ.ಎಸ್. ಅಧಿಕಾರಿಯಾಗಿದ್ದು,ಅವರನ್ನು ಬಹಳ ಬುದ್ಧಿವಂತ ಪೊಲೀಸ್ ಅಧಿಕಾರಿಗಳು ಎನ್ನುತ್ತಾರೆ. ಮೂರು ಗಂಟೆಗಳ ಕಾಲ ನಮ್ಮನ್ನು ಹೊರಗಡೆ ನಿಲ್ಲಿಸಿ, ಗೇಟಿನ ಬೀಗ ಹಾಕಿದ್ದು, ಅಲ್ಲಿಂದ ಒಳಗಡೆ ನಡೆದುಕೊಂಡು ಹೋಗುವುದಕ್ಕೆ ಅವರು ನಮಗೆ ಅವಕಾಶ ಮಾಡಿಕೊಡಲಿಲ್ಲ. ತಾವು ಟ್ರ್ಯಾಕ್ಟರ್‌ನೊಳಗೆ ಹೋಗಬೇಡಿ ಎಂದು ಹೇಳಿದರು. ಟ್ರ್ಯಾಕ್ಟರ್ ಇದು ರೈತರ ಸಂಕೇತ ಮತ್ತು ರೈತನ ವಾಹನ. ರೈತ ಮತ್ತು ರೈತನ ಹೆಂಡತಿ ಮಕ್ಕಳು ಹಗಲು ರಾತ್ರಿ ಎನ್ನದೇ, ಜಮೀನಿನಲ್ಲಿ ಉಳುಮೆ ಮಾಡಿ, ಬೆಳೆ ಬೆಳೆದು, ಈ ದೇಶದಲ್ಲಿರುವ ಸುಮಾರು ನೂರ ಮೂವತ್ತು ಕೋಟಿ ಜನರಿಗೆ ಆಹಾರ ಕೊಡುವಂತಹ ರೈತ. ಅದು ರೈತನ ವಾಹನ. ಅದು ಇವರಿಗೆ ಅವಮಾನನಾ. ಆ ರೈತನ ವಾಹನವನ್ನು ಈ ಪೊಲೀಸ್ ಅಧಿಕಾರಿಗಳು ಏನೆಂದು ತಿಳಿದುಕೊಂಡಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಿ. ವಿರೋಧ ಪಕ್ಷದ ನಾಯಕರೇ ತಾವು ಮಾತನಾಡಿ ಮುಗಿಸಿ.

**ಶ್ರೀ ಎಸ್.ಆರ್. ಪಾಟೀಲ್ :-** ಮಾನ್ಯ ಸಭಾಪತಿಯವರೇ, ನಿಲುವಳಿ ಸೂಚನೆ ನಮ್ಮ ಹಕ್ಕಿಗೆ ...

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಆ ತರಹ intervene ಮಾಡಿದರೆ, ನಾವು ಎಲ್ಲದಕ್ಕೂ ಹೇಳಬೇಕಾಗುತ್ತದೆ.

**ಸಭಾಪತಿಯವರು:-** ಮಾನ್ಯ ಬಿ.ಕೆ. ಹರಿಪ್ರಸಾದ್‌ರವರೇ, ಒಂದು ನಿಮಿಷ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಒಂದು ನಿಯಮವಿದೆ. ಮಾನ್ಯ ಸಭಾನಾಯಕರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಯಾರೂ intervene ಆಗುವುದಿಲ್ಲ. ಆದರೆ ಇದೇ ರೀತಿ ಪರಂಪರೆಯಾದರೆ, ಆಗಲಿ ನೋಡೋಣ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ಒಂದು ನಿಮಿಷ. ಈಗಾಗಲೇ ಮಾತನಾಡಬೇಡಿ ಎಂದು ಹೇಳಿದ್ದೇನೆ. ಇನ್ನೇನೂ ಹೇಳಲಿ. ಇವರೇನು ಸಣ್ಣ ಮಕ್ಕಳಾ, ತಿಳಿದುಕೊಳ್ಳಬೇಕಲ್ಲ. ಸದನದಲ್ಲಿರುವ ಪ್ರಜ್ಞಾವಂತರಾದ ಮಾನ್ಯ ಸದಸ್ಯರುಗಳು ಮಾತನಾಡಬಾರದು. ಎಲ್ಲಿ ಮಾತನಾಡಬೇಕೆಂಬುದರ ಬಗ್ಗೆ ತಿಳಿದುಕೊಳ್ಳಬೇಕು. ನಾನು ಎಷ್ಟು ಬಾರಿ ಹೇಳಿದ್ದೇನೆ. ನನ್ನ ಮಾತನ್ನು ಯಾರೂ ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ದಯವಿಟ್ಟು ತಪ್ಪು ತಿಳಿದುಕೊಳ್ಳಬಾರದು. ನಾವು ಇನ್ನೊಬ್ಬರಿಗೆ ಸ್ವಲ್ಪ ಮಾದರಿಯಾಗುವಂತಹ ಕೆಲಸವನ್ನು ಮಾಡೋಣ. ಮಾನ್ಯ ಸಭಾನಾಯಕರೇ ತಾವು ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಪೊಲೀಸ್ ಅಧಿಕಾರಿಗಳಾದ ಶ್ರೀ ತ್ಯಾಗರಾಜ್ ಮತ್ತು ಶ್ರೀ ಸತೀಶ್ ಎನ್ನುವವರು. ನಮಗೆ ಹಕ್ಕುಚ್ಯುತಿಯನ್ನುಂಟು ಮಾಡಿದ್ದಾರೆ. ಅದು ಅಷ್ಟೇ ಅಲ್ಲ. ಮಾನ್ಯ ಸಭಾಪತಿಯವರೇ, ತಮಗೂ ಕೂಡ ಹಕ್ಕುಚ್ಯುತಿ ಮಾಡಿದ್ದಾರೆ. ತಮ್ಮನ್ನು ಅಗೌರವದಿಂದ ಮತ್ತು ನಿರ್ಲಕ್ಷ್ಯ ಮಾಡಿದ್ದಾರೆ. ಸಭಾಪತಿ ಎಂದರೆ ಏನು? ನಾವು ಸಭಾಪತಿಯವರ ಕಸ್ಟಡಿಯಲ್ಲಿದ್ದೇವೆ. You are our custodian during the session time. ಅಧಿವೇಶನ ನಡೆಯುವ ಮುಂದೆ, ತಾವು ನಮ್ಮ ಯೋಗಕ್ಷೇಮ ಮತ್ತು ಅಧಿವೇಶನಕ್ಕೆ ಬರುವುದಕ್ಕೆ ತೊಂದರೆಯಾಗ ರೀತಿ ನೋಡಿಕೊಳ್ಳುವಂತಹವರು. ತಾವು ಉನ್ನತ ಸ್ಥಾನದಲ್ಲಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳಿಗಿಂತ ತಾವು ಉನ್ನತ ಸ್ಥಾನದಲ್ಲಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗೃಹ ಸಚಿವರು ಇಬ್ಬರೂ ನಿನ್ನೆ ಸದನದಲ್ಲಿದ್ದರು. ಅವರು ಮಾತನಾಡುವಾಗ ನಾನು ಏನು ಮಾತನಾಡುವುದಕ್ಕೆ ಹೋಗಿರಲಿಲ್ಲ. ಮಾನ್ಯ ಸಭಾಪತಿಯವರೇ, ಅವರು ತಮ್ಮನ್ನು infringe ಮಾಡಿದ್ದಾರೆ. ಅವರ ಗಮನಕ್ಕೆ ಇಲ್ಲ. ಸಭಾಪತಿ ಎಂದರೆ ಏನು? ಕೆಳಮನೆಯ ಸಭಾಧ್ಯಕ್ಷರು ಎಂದರೆ ಏನೋ ಪೊಲೀಸ್‌ನವರಿಗೆ ಕನಿಷ್ಠ ಜ್ಞಾನವೇ ಇಲ್ಲ. ಇವರು ಎಂತಹ ಪೊಲೀಸರು? ಇವರು ಅನಾಗರೀಕ ಪೊಲೀಸರು. ಇವರಿಗೆ ನಾಗರೀಕತೆಯೇ ಇಲ್ಲ. ತಮ್ಮ ಮೇಲೆ ಹಕ್ಕುಚ್ಯುತಿಯಾಗುತ್ತದೆ ಮತ್ತು ತಮ್ಮ ಮೇಲೆ ಕ್ರಮ ಜರುಗಿಸುತ್ತೇವೆಂದು ನಾನು ಪೊಲೀಸರಿಗೆ ತಿಳಿಸಿ ಹೇಳಿದ್ದೇನೆ. ನಾನು ಶ್ರೀ ತ್ಯಾಗರಾಜ್‌ರವರನ್ನು ಕರೆದು, ಸ್ವತಃ ಮಾತನಾಡಿದ್ದೇ. ಆನಂತರ ಎಲ್ಲಾ ಅಧಿಕಾರಿಗಳಿಗೂ ಕೂಡ ಮಾತನಾಡಿದ್ದೇನೆ. ಇಲ್ಲ, ಅವರು ನಮಗೆ ಹೇಳಬೇಕು, ಇವರು ಹೇಳಬೇಕೆಂದು ಪೊಲೀಸರು ಹೇಳಿದರು. ಮಾನ್ಯ ಸಭಾಪತಿಯವರು ಹೇಳಿದ್ದಾರೆ ಎಂದು ನಾವು ಹೇಳಿದರೆ, ಅವರಿಗೆ ಜ್ಞಾನನೇ ಇಲ್ಲ. ಯಾವ ಸಭಾಪತಿ ಎನ್ನುತ್ತಾರೆ? ನಮಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕೆಂದು ಅವರು ಹೇಳುತ್ತಾರೆ. ಹಾಗಾದರೆ ತಮ್ಮ ಮೇಲೆ ಮಾನ್ಯ ಮುಖ್ಯಮಂತ್ರಿಗಳೇನು. ಸದನದೊಳಗೆ ಮಾನ್ಯ ಮುಖ್ಯಮಂತ್ರಿಗಳು ಬಂದರೆ ತಮಗೆ ಕೈಮುಗಿದು ಕುಳಿತುಕೊಳ್ಳುತ್ತಾರೆ. ಈ ನಮೂನೆ ಏನ್ರಿ ಇದು. ನಮ್ಮನ್ನು ಮೂರು ಗಂಟೆಗಳ ಕಾಲ ಹೊರಗಡೆ ನಿಲ್ಲಿಸಿದ್ದಾರೆ. ಪದೇ ಪದೇ ಅವರ ಬಗ್ಗೆ ಹೇಳುವುದು ಬೇಡವೇ ಬೇಡ. ಅದರಲ್ಲಿ ಬರಬೇಕು ಮತ್ತು

ಇದರಲ್ಲಿ ಬರಬೇಕು ಎಂದು ಇವರು ನಮಗೆ ಪಾಠ ಹೇಳುವುದಕ್ಕೆ ಇಲ್ಲಿಗೆ ಬಂದಿದ್ದಾರೆ. ಈ ರೀತಿ ವ್ಯವಸ್ಥೆ ಇದ್ದರೆ ಹೇಗೆ? ಸರ್ಕಾರಕ್ಕೆ ಇವರು ಕಪ್ಪು ಚುಕ್ಕೆ.

**ಸಭಾಪತಿಯವರು:-** ನಾನು ಹೇಳುತ್ತೇನೆ. ತಾವು ಕುಳಿತುಕೊಳ್ಳಿ.

**ಶ್ರೀ ಎಸ್.ಆರ್. ಪಾಟೀಲ್ :-** ಮಾನ್ಯ ಸಭಾಪತಿಯವರೇ, ಅದಕ್ಕಾಗಿ ನಾವು ಹಕ್ಕುಚ್ಯುತಿಯನ್ನು ಮಂಡನೆ ಮಾಡಿದ್ದೇವೆ. ಇದರ ಬಗ್ಗೆ ಸರಿಯಾದಂತಹ ಕ್ರಮ ಜರುಗಿಸುವುದಕ್ಕೆ ನಮ್ಮೆಲ್ಲಾ ಸದಸ್ಯರ ಪರವಾಗಿ ನಾನು ತಮಗೆ ಒತ್ತಾಯ ಮಾಡುತ್ತೇನೆ.

**ಸಭಾಪತಿಯವರು:-** ತಾವು ತಂದಂತಹ ಹಕ್ಕುಚ್ಯುತಿ ನಿರ್ಣಯವೇನಿದೆ? ಇದು ನನ್ನ ಮನಸ್ಸಿಗೂ ಸರಿ ಎನಿಸಿದೆ. ಈ ಹಿನ್ನೆಲೆಯಲ್ಲಿ ಹಕ್ಕುಚ್ಯುತಿಯನ್ನು ಸಭೆಗೆ ಮಂಡನೆ ಮಾಡಿದ್ದೇನೆ. ಇದನ್ನು ಹಕ್ಕುಬಾಧ್ಯತಾ ಸಮಿತಿಗೆ ಕಳುಹಿಸಿದ್ದೇನೆ. ಖಾಸಗಿ ನಿರ್ಣಯ ಮಾನ್ಯ ವೇಂಕಟೇಶ್‌ರವರು.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ ಏನ್ರಿ?

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಈ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ತಾವು ರೂಲಿಂಗ್ ಕೊಟ್ಟಿದ್ದೀರಿ. ಆದರೆ ಯಾವುದೇ ಒಂದು ನಾಗರೀಕ ಸರ್ಕಾರ ಜನ ಪ್ರತಿನಿಧಿಯ ಮೇಲೆ, ಅದು ಶಾಸನಸಭೆ ನಡೆಯುತ್ತಿರುವಾಗ, ಪೊಲೀಸರು ಶಾಸನ ಸಭೆಗೆ ಮಾನ್ಯ ಸದಸ್ಯರು ಹೋಗುವುದನ್ನು ನಿರ್ಬಂಧ ಮಾಡುತ್ತಾರೆ. ಪೊಲೀಸ್ ಅಧಿಕಾರಿಗಳೇ ಕಾನೂನನ್ನು ಉಲ್ಲಂಘನೆ ಮಾಡುತ್ತಾರೆ ಎನ್ನುವಂತಹದ್ದನ್ನು ಪ್ರತ್ಯಕ್ಷದರ್ಶಿಯಾಗಿ ವಿರೋಧ ಪಕ್ಷದ ನಾಯಕರು ಮತ್ತು ಅವರ ಸದಸ್ಯರಗಳನ್ನು ತಡೆದಿರುವಂತಹದ್ದನ್ನು ಮಾಧ್ಯಮಗಳಲ್ಲಿ, ಹೊರಗಡೆಯಲ್ಲಿ ನೋಡಿದ್ದೇವೆ. ಸದನದ ಅವಧಿಯಲ್ಲಿ ತಾವು ನಮ್ಮೆಲ್ಲರ ರಕ್ಷಕರು, ತಮ್ಮ ಮುಂದೆ ಇಷ್ಟೆಲ್ಲಾ ನಿವೇದನೆ ಮಾಡಿಕೊಂಡರೂ ಕೂಡ ಸರ್ಕಾರ ಇಪ್ಪತ್ನಾಲ್ಕು ಗಂಟೆಗಳಾದರೂ ಕೂಡ, ಸಂಬಂಧಪಟ್ಟಂತಹ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಿಲ್ಲ. ಇವತ್ತು ಇದನ್ನು ತಾವು ಸಾಮಾನ್ಯ ಪ್ರಕರಣದಂತೆ, ಹಕ್ಕುಚ್ಯುತಿಗೆ ವಹಿಸುತ್ತೇವೆ ಎನ್ನುವುದಾದರೆ, ಈ ಸದನ ಮತ್ತು ಪೀಠ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಸರ್ಕಾರಕ್ಕೆ ಏನಾದರೂ ಸ್ವಲ್ಪ ಕಾಳಜಿ ಇದೆಯೇ? ದಯಮಾಡಿ, ಇವತ್ತು ನಾವು ವಿರೋಧ ಪಕ್ಷದಲ್ಲಿ ಇರಬಹುದು, ಅವರು ನಾಳೆ ಆಡಳಿತ ಪಕ್ಷದಲ್ಲಿ ಇರುತ್ತಾರೆ. ಆದರೆ ಶಾಸನ ಸಭೆ ನಡೆಯುವಂತಹ ಸಂದರ್ಭದಲ್ಲಿ ಇಂತಹ ಕೆಟ್ಟ ಅನೀತಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಉನ್ನತ ರಕ್ಷಣಾ ಇಲಾಖಾಧಿಕಾರಿಗಳಿಂದ ಜನ ಪ್ರತಿನಿಧಿಗಳ ಮೇಲೆ ನಡೆಯುವುದಾದರೆ, ಇಲ್ಲಿ ಏನಾದರೂ ಕಾನೂನು ಇದೆಯೇ? ಪ್ರಜಾಪ್ರಭುತ್ವ ಇರುವಂತಹ ಈ ದೇಶದಲ್ಲಿ, ಶಾಸಕರು, ವಿರೋಧ ಪಕ್ಷದ ಸದಸ್ಯರು ಆಡಳಿತ ಪಕ್ಷದ ಸದಸ್ಯರಿಗೆ ಏನಾದರೂ ಕಾನೂನು ಪರಿಪಾಲನೆಯಾಗುತ್ತದೆಯೇ? ಇಂತಹ ಆಶಿಸ್ತಿನ ಬಗ್ಗೆ ಸರ್ಕಾರ ಕೂಡಲೇ ಪ್ರತಿಕ್ರಿಯೆಸಬೇಕು. ಇದನ್ನು ಮಾಮೂಲಿಯಾಗಿ ಹಕ್ಕುಚ್ಯುತಿಗೆ ಒಪ್ಪಿಸಿ, ಇನ್ನು ಮೂರು ಅಥವಾ ಆರು ವರ್ಷಕ್ಕೋ ಬರುತ್ತದೆ. ನಾನು ತಮ್ಮಲ್ಲಿ ನಿವೇದನೆ ಮಾಡಿಕೊಳ್ಳುತ್ತಿದ್ದೇನೆ. ನಮ್ಮೆಲ್ಲರನ್ನು ಕಾಪಾಡುವಂತಹ ಜವಾಬ್ದಾರಿ ತಮ್ಮದು ಮತ್ತು ಪೀಠದ್ದು. ದಯವಿಟ್ಟು, ಮಾನ್ಯ ಮುಖ್ಯಮಂತ್ರಿಗಳಿಗೆ ನಿರ್ದೇಶನ ಕೊಡಿ. ಇಪ್ಪತ್ನಾಲ್ಕು ಗಂಟೆಯೊಳಗೆ ತಪ್ಪು ಮಾಡಿದಂತಹ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಬೇಕೆಂದು ತಾವು ಹೇಳಬೇಕು. ಇವತ್ತು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನನಾಗಿರಬಹುದು, ನಾಳೆ ಅವರಿಗೆ ಆಗುತ್ತದೆ. ಇಲ್ಲಿಗೆ ಬಂದಾಗ ತಮಗೂ ಕೂಡ ಆಗುತ್ತದೆ. ದಯವಿಟ್ಟು ಇಂತಹದ್ದಕ್ಕೆ ತಾವು ವಿಳಂಬ ಮಾಡಬಾರದು. ತಪ್ಪು ಯಾರೇ ಮಾಡಿರಲಿ, ಅವರ ಮೇಲೆ ಕಠಿಣ ಕ್ರಮ ಜರುಗಿಸಬೇಕು. ಇಪ್ಪತ್ನಾಲ್ಕು ಗಂಟೆಗಳಾದರೂ ಕೂಡ ಈ ಸರ್ಕಾರ ಇದೆ ಎನ್ನುವುದಾದರೆ, ಸರ್ಕಾರ ಏನು ಮಾಡುತ್ತಿದೆ ಎಂದು ನಾನು ಕೇಳುತ್ತೇನೆ. ಹಾಗಾದರೆ, ಸರ್ಕಾರವೇ ಅವರಿಗೆ ಕುಮ್ಮಕ್ಕು ಕೊಟ್ಟು ಮಾಡಿಸಿದೆ. ಸರ್ಕಾರದ ಕುಮ್ಮಕ್ಕಿನಿಂದ ಅಧಿಕಾರಿಗಳು ಈ ರೀತಿ ನಡೆದುಕೊಂಡಿದ್ದಾರೆಂದು ಹೇಳುತ್ತೇನೆ. ದಯವಿಟ್ಟು, ಈ ಪ್ರಜಾಪ್ರಭುತ್ವ ವ್ಯವಸ್ಥೆ ಉಳಿಯಬೇಕೆಂದರೆ, ಇಂತಹ ಸಂವಿಧಾನ ವಿರೋಧವಾಗಿ ಕಾನೂನನ್ನು ಉಲ್ಲಂಘನೆ ಮಾಡುವಂತಹ ಪೊಲೀಸ್ ಇಲಾಖೆಯಲ್ಲಿ ಅಧಿಕಾರಿಗಳು ಯಾರಿದ್ದಾರೆ? ಅವರ ಮೇಲೆ ಕ್ರಮ ಜರುಗಿಸಬೇಕು. ದಯವಿಟ್ಟು, ತಾವು ನಮ್ಮ ನೆರವಿಗೆ ಬರಬೇಕು. ದಯವಿಟ್ಟು, ತಾವು ಪ್ರಜಾಸತ್ತೆಯನ್ನು ಉಳಿಸಬೇಕು ಎಂದು ನಾನು ತಮ್ಮ ಮೂಲಕ ನಾನು ನಿವೇದನೆ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ದಯವಿಟ್ಟು, ಕುಳಿತುಕೊಳ್ಳಿ. ತಾವು ಕೂಡ ಉಪ ಸಭಾಪತಿಯಾಗಿ ಕೆಲಸ ಮಾಡಿದ್ದೀರಿ. ನನ್ನ ಮುಂದಿರುವುದೇನೆಂದರೆ, ಮಾನ್ಯ ಸದಸ್ಯರಿಗೆ ಹಕ್ಕುಚ್ಯುತಿಯಾಗಿದೆ ಎಂಬುದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಹಕ್ಕುಚ್ಯುತಿಯಾಗಿದೆ ಎಂದು ನಾನೂ ಕೂಡ ಒಪ್ಪಿಕೊಂಡಿದ್ದೇನೆ. ಆ ಹಿನ್ನೆಲೆ ನನ್ನ ಲಿಮಿಟ್‌ನಲ್ಲಿ ಇರುವುದೇನೆಂದರೆ, ಹಕ್ಕುಚ್ಯುತಿಯನ್ನು ಸಮಿತಿಗೆ ಮಂಡನೆ ಮಾಡಿದ್ದೇನೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ತಾವು ಸಮಯವನ್ನು ನಿಗಧಿ ಮಾಡಬಹುದಲ್ಲ.

**ಸಭಾಪತಿಯವರು:-** ಆಯಿತು. ಇದನ್ನು ತಕ್ಷಣ ತೆಗೆದುಕೊಂಡು ಹೋಗಿ ಸಮಿತಿಗೆ ಕಳುಹಿಸಿಕೊಡಿ. ಈ ಅಧಿವೇಶನ ಮುಗಿದ ಮೇಲೆ ಇದನ್ನು ಮೊದಲನೇ ಸಮಿತಿ ಸಭೆಯಲ್ಲಿ ಚರ್ಚೆ ಮಾಡಿ.

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, I have a point of order.

**ಸಭಾಪತಿಯವರು:-** ಮಾನ್ಯ ಆರ್ ರಮೇಶ್ ಇದಕ್ಕೆ ಯಾವ point of order.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಹೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ಪಿ.ಆರ್ ರಮೇಶ್‌ರವರೇ ಇದಕ್ಕೆ point of order ಬರುವುದಿಲ್ಲ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಇದು ಏಕೆ ಬರುವುದಿಲ್ಲ?

**ಸಭಾಪತಿಯವರು:-** ಮಾನ್ಯ ಪಿ.ಆರ್ ರಮೇಶ್‌ರವರೇ, ಇದಕ್ಕೆ point of order ಗೆ provision ಇಲ್ಲ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, 178 ರ ಪ್ರಕಾರ ಸದನಕ್ಕೆ ...

**ಸಭಾಪತಿಯವರು:-** ಮಾನ್ಯ ಪಿ.ಆರ್ ರಮೇಶ್‌ರವರೇ, ಒಂದು ನಿಮಿಷ ತಾವು ಕೇಳಿ. ಮಾನ್ಯ ವಿರೋಧ ಪಕ್ಷದ ನಾಯಕರು ಇದನ್ನು ಪ್ರಸ್ತಾಪ ಮಾಡಿದ್ದಾರೆ. ಆ ಪ್ರಸ್ತಾಪವನ್ನು ಒಪ್ಪಿಕೊಂಡು, ಹಕ್ಕುಚ್ಯುತಿ ನಿರ್ಣಯವಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕೆ ಸಮಿತಿಗೆ ಕಳುಹಿಸಿದ್ದೇನೆ. ಸಮಿತಿಯು ತಕ್ಷಣ ಇದನ್ನು ತೆಗೆದುಕೊಂಡು, ಮೊದಲನೇ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಹೇಳಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಇದನ್ನು ಜರೂರಾಗಿ ಇತ್ಯರ್ಥ ಮಾಡುವುದಕ್ಕೆ ಹೇಳಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ ಇದು ಮುಗಿಯುವುದಕ್ಕೆ ಇನ್ನು ಹೆಚ್ಚು ಕಡಿಮೆ ಒಂಭತ್ತು ದಿವಸಗಳಿವೆ. ದಯವಿಟ್ಟು, ಇದನ್ನು ಎಂಟು-ಒಂಭತ್ತು ದಿವಸಗಳೊಳಗಡೆ ಇತ್ಯರ್ಥವಾಗುವ ರೀತಿಯಲ್ಲಿ ಇದಕ್ಕೆ ಏನೊಂದು ಸಮಿತಿ ಇದೆಯೋ, ಅದರಲ್ಲಿ ಮಾಡಿಸಿ.

**ಸಭಾಪತಿಯವರು:-** ಮಾನ್ಯ ಪಿ.ಆರ್.ರಮೇಶ್‌ರವರೇ, ಇದಕ್ಕಾಗಿ ಹಕ್ಕುಬಾದ್ಯತಾ ಸಮಿತಿ ಇದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**Sri S.R.PATIL:-** Privilege Committee is there.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ ಒಂಭತ್ತು ದಿನದಲ್ಲಿ ಅಧಿಕಾರಿಗಳ ಮೇಲೆ ಕ್ರಮವಾಗಬೇಕು.

**ಸಭಾಪತಿಯವರು:-** ಮಾನ್ಯ ಪಿ.ಆರ್ ರಮೇಶ್‌ರವರೇ, ನನ್ನ ಮಾತನ್ನು ಕೇಳಿ. ಇದಕ್ಕಾಗಿ ಒಂದು ಸಮಿತಿ ಇದೆ. ಅದರಲ್ಲಿ ತಾವು ಇರುತ್ತೀರಿ ಮತ್ತು ಯಾವ ಸದಸ್ಯರು ಇರುತ್ತಾರೆ. ಆ ಸಮಿತಿಯಲ್ಲಿ ನಮ್ಮ ಸದಸ್ಯರು ಇರುತ್ತಾರೆ. ಆ ಸಮಿತಿಯಲ್ಲಿ ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳಿದ್ದೇನೆ. ಆಗ ಅದರ ಬಗ್ಗೆ ಚರ್ಚೆ ಮಾಡಿ, ಕ್ರಮ ಕೈಗೊಳ್ಳುತ್ತಾರೆ. ಖಾಸಗಿ ನಿರ್ಣಯ ಶ್ರೀ ವೆಂಕಟೇಶ್. ನಿಯಮ 68ರ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು. ಕೇವಲ ಹತ್ತು ನಿಮಿಷದಲ್ಲಿ ತಮ್ಮ ಮಾತನ್ನು ಮುಗಿಸಿ. ನಿನ್ನೆ ತಾವು ನಲವತ್ತು ನಿಮಿಷವನ್ನು ತೆಗೆದುಕೊಂಡು ಮಾತನಾಡಿದ್ದೀರಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಿನ್ನೆ ಕೇವಲ ಇಪ್ಪತ್ತು ನಿಮಿಷ ಮಾತ್ರ ಮಾತನಾಡಿದ್ದೇನೆ.

**ಸಭಾಪತಿಯವರು:-** ತಾವು ಮಾತನಾಡಿರುವ ಸಮಯವನ್ನು ನೋಡಿದ್ದೇನೆ. ತಾವು ನನಗೆ ಹೇಳುತ್ತೀರಾ.

**ಶ್ರೀ ಎಸ್.ಆರ್. ಪಾಟೀಲ್:-** ಇದು ಇಪ್ಪತ್ಮೂರು ಜಿಲ್ಲೆಗಳಿಗೆ ಸಂಬಂಧಪಟ್ಟ ವಿಚಾರವಿದು.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ ಸ್ವಲ್ಪ ಇರಿ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇದು ಹಕ್ಕುಚ್ಯುತಿ ಸಮಿತಿಗೆ ಹೋಗುವುದು ಸರಿ. ಇದು ಸಾಮಾನ್ಯ ಪರಿಸ್ಥಿತಿ. ಇದನ್ನು ಪಾಲನೆ ಮಾಡತಕ್ಕಂತಹದ್ದು ಸರಿ. ನಿನ್ನೆ ನಡೆದಂತಹ ಘಟನೆ ಸದನ ನಡೆಯುವಾಗ, ಆಘಾತಕರ ಘಟನೆಯಾಗಿದೆ. ಇಂತಹ ಘಟನೆ ನಡೆದಾಗ, ಸಾಮಾನ್ಯವಾಗಿ ಹಕ್ಕುಚ್ಯುತಿ ಸಮಿತಿಗೆ ಹೋಗುವಂತಹದ್ದು, ನಾವೆಲ್ಲರೂ ನೋಡಿದ್ದೇವೆ.

(ಮುಂದು)

---

**(1148)17.12.2021/1.00/ಎಂ.ಎಂ-ಎ.ಕೆ**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ. ಹರಿಪ್ರಸಾದ್ (ಮುಂದು):-**

ನಿನ್ನೆ ನಡೆದಂತಹ ಘಟನೆ ಏನಿದೆ, ಇದು ಸದನ ನಡೆಯುವಂತಹ ಸಂದರ್ಭದಲ್ಲಿ ಆಗಿರುವಂತಹ ಘಟನೆಯಾಗಿದೆ. ಆದ್ದರಿಂದ ಇದಕ್ಕೆ ತತಕ್ಷಣವಾದ ಪರಿಹಾರ ಬೇಕು. ತತಕ್ಷಣವಾದ ಕ್ರಮ ಬರಬೇಕು. ಅದಕ್ಕೋಸ್ಕರ ದಯವಿಟ್ಟು ತಾವು ಇದಕ್ಕೆ ಏನಾದರೂ ನಿರ್ದೇಶನ ಕೊಡಬೇಕು.

**ಸಭಾಪತಿಯವರು:-** ಅದನ್ನು ಸರ್ಕಾರ ಹೇಳುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಇಡೀ ಘಟನೆಯನ್ನು ಗಮನಿಸಿದ್ದೀರಿ. ಇವರು ಮಾಮೂಲಿಯಾಗಿ ಬರುವ ವಾಹನದಲ್ಲಿ ಬರಲಿಲ್ಲ, ಟ್ರ್ಯಾಕ್ಟರ್‌ನಲ್ಲಿ ಬಂದಿದ್ದಾರೆ ಅದಕ್ಕೆ ಕಾರಣಗಳೇನೇ ಇರಬಹುದು. ಸಾರ್ವಜನಿಕ ಜೀವನದಲ್ಲಿ ಅನೇಕ ಕಾರಣಗಳನ್ನು ಕೊಡುತ್ತಾರೆ. ಅದರ ಬಗ್ಗೆ ನಾವೇನೂ ಉಲ್ಲೇಖ ಮಾಡಿಲ್ಲ. ಮಾಮೂಲಿ ವಾಹನದಲ್ಲಿ ಬರಲಿಲ್ಲ, ಟ್ರ್ಯಾಕ್ಟರ್‌ನಲ್ಲಿ ಬಂದಿದ್ದಾರೆ ಎನ್ನುವ ಕಾರಣಕ್ಕೆ ಅವರು ಮತ್ತು ಪೊಲೀಸರ ಮಧ್ಯೆ ಚಕಮಕಿಯಾಗಿದೆ. ತಮ್ಮ ಗಮನಕ್ಕೆ ಇದು ಬಂದಾಗ ತಾವು ಗೃಹ ಮಂತ್ರಿಗಳಿಗೆ ಹೇಳಿದಿರಿ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಸಭಾಪತಿಯವರು ರೂಲಿಂಗ್ ಕೊಟ್ಟಿದ್ದಾರೆ ಬಿಡಿ. ಏತಕ್ಕೆ ಚರ್ಚೆ ಮಾಡುತ್ತೀರಿ?

**ಸಭಾಪತಿಯವರು:-** ಅವರು ಕೇಳಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅನಂತರ ಗೃಹ ಮಂತ್ರಿಗಳು, ಮಾನ್ಯ ಸಚಿವರಾದ ಗೋವಿಂದ ಕಾರಜೋಳರವರ ಸಹಿತ ಎಲ್ಲರೂ ಕೂಡ ಮಧ್ಯಪ್ರವೇಶ ಮಾಡಿದ್ದಾರೆ, ನಿಮ್ಮ ಸಲಹೆಯ ಮೇರೆಗೆ ಮಾನ್ಯ ಮುಖ್ಯಮಂತ್ರಿಯವರೂ ಕೂಡ ಮಧ್ಯಪ್ರವೇಶ ಮಾಡಿರಬಹುದು ಎಂದು ಅಂದುಕೊಂಡಿದ್ದೇನೆ. ಅನಂತರ ಅವರಿಗೆ ಅಲ್ಲಿ ನಿರ್ಬಂಧ ಮಾಡಿದ್ದನ್ನು ತೆರವು ಮಾಡಿದ್ದಾರೆ. ಈ ಮಧ್ಯೆ ಒಂದೆರಡು ಗಂಟೆ ಆಗಿದ್ದು ಸತ್ಯ. ಅಲ್ಲಿ ಬಹಳ ಪ್ರತಿರೋಧಗಳಾಯಿತು. ಮಾನ್ಯ ವಿರೋಧ ಪಕ್ಷದ ನಾಯಕರು ಇದು ಹಕ್ಕು ಚ್ಯುತಿಯಾಗುತ್ತದೆ ಎಂದು ಹೇಳಿದರು. ಸ್ವಾಭಾವಿಕವಾಗಿ ಪೊಲೀಸರು ಅಡ್ಡಗಟ್ಟಿದ್ದಾರೆ. ಮೊದಲು ನಾವು ವಿರೋಧಪಕ್ಷದಲ್ಲಿದ್ದಾಗ ಇಂತಹದ್ದನ್ನು ಅನುಭವಿಸಿದ್ದೇವೆ. ಆಡಳಿತಪಕ್ಷದಲ್ಲಿದ್ದಾಗಲೂ ಕೂಡ ಕೆಲವು ಸಲ ಅವರು ಭದ್ರತೆಯ ದೃಷ್ಟಿಯಿಂದ ತಕರಾರು ಮಾಡುತ್ತಾರೆ. ಆದರೂ ಕೂಡ ಮಾನ್ಯ

---

ವಿರೋಧಪಕ್ಷದ ನಾಯಕರು ಬಹಳ ಸವಿಸ್ತಾರವಾಗಿ ತಮ್ಮ ಘನತೆಗೆ ಧಕ್ಕೆಯಾಗಿದೆ ಎಂದು ಹೇಳಿದಾಗ ತಾವು ಇದನ್ನು ಹಕ್ಕುಬಾಧ್ಯತಾ ಸಮಿತಿಗೆ ಕೊಟ್ಟಿದ್ದೀರಿ. ಇದು ಹಕ್ಕುಚ್ಯುತಿಯಾಗುತ್ತದೆಯೇ ಎಂದು ಚರ್ಚೆ ಮಾಡಿದರೆ ನಮ್ಮಲ್ಲಿನ್ನೂ ಕೂಡ ಜಿಜ್ಞಾಸೆ ಇದೆ. ಆದರೆ ಹಿರಿಯ ಸದಸ್ಯರಾದ ವಿರೋಧಪಕ್ಷದ ನಾಯಕರು ನಿಮಗೆ ಕೊಟ್ಟಿರುವ ಅಹವಾಲಿನಲ್ಲಿ ತಾವು ಇದನ್ನು ಹಕ್ಕುಚ್ಯುತಿ ಸಮಿತಿಗೆ ಮಂಡನೆ ಮಾಡಿದ್ದೀರಿ. ನಮ್ಮದೇನೂ ಗೊಂದಲವಿಲ್ಲ. ವಿನಾಕಾರಣ ಮತ್ತೆ ಇದನ್ನು ಮುಂದುವರೆಸುವುದಕ್ಕಿಂತ ನೀವು ಹೇಳಿರುವುದಕ್ಕೆ ನಾವು ಒಪ್ಪಿಕೊಂಡಿದ್ದೇವೆ.

**ಶ್ರೀ ಕೆ.ಪ್ರತಾಪ ಚಂದ್ರ ಶೆಟ್ಟಿ:-** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 178ರಲ್ಲಿ ಸಭೆಗೆ ಅಧಿಕಾರವಿಲ್ಲವೇ?

**ಸಭಾಪತಿಯವರು:-** ನನಗೆ ಗೊತ್ತಿಲ್ಲ. ನಾನು ಸರ್ಕಾರಕ್ಕೆ ಹೇಳಿದ್ದೇನೆ.

**ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 178ರ ಅನುಮತಿಸಲಾದ ಹಕ್ಕುಬಾಧ್ಯತೆ ಪ್ರಶ್ನೆಯನ್ನು ಸದನವು ಪರಿಶೀಲಿಸುವುದು ಅಥವಾ ಹಕ್ಕುಬಾಧ್ಯತೆ ಸಮಿತಿಗೆ ಒಪ್ಪಿಸುವುದು ಎಂದು ಹೇಳುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಪ್ರತಾಪ ಚಂದ್ರ ಶೆಟ್ಟಿಯವರೇ, ಪೀಠ ಆದೇಶ ಕೊಟ್ಟಾಯಿತು, ಸಮಿತಿಗೆ ಒಪ್ಪಿಸಿಯಾಯಿತು. ನೀವು ಪುನಃ ರಿವರ್ಸ್ ಗೇರ್‌ನಲ್ಲಿ ಏತಕ್ಕೆ ಬರುತ್ತೀರಿ? ಅದರಲ್ಲಿ ಇನ್ನೂ ಜಿಜ್ಞಾಸೆ ಇದೆ. ಇದು ಬೇರೆ ಪ್ರಶ್ನೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-** ಎಲ್ಲರಿಗೂ ಒಂದೇ, ನನಗದು ಬೇಕಾಗಿಲ್ಲ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಒಂದು ನಿಮಿಷ ಇಲ್ಲಿ ನೋಡಿ. ದಯಮಾಡಿ ತಿಳಿದುಕೊಳ್ಳಿ. ನಾನು ಒಂದು ಸಲ ರೂಲಿಂಗ್ ಕೊಟ್ಟ ಮೇಲೆ ಪದೇ ಪದೇ ಏತಕ್ಕೆ ಚರ್ಚೆ ಮಾಡುತ್ತೀರಿ?

**ಶ್ರೀ ಎಸ್.ಆರ್. ಪಾಟೀಲ್:-** ನಾವು ಒಪ್ಪಿಕೊಂಡಿದ್ದೇವೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಯು.ಬಿ.ವೆಂಕಟೇಶ್‌ರವರು ಹೊರಗಿದ್ದರು; ಅವರನ್ನು ಕರೆಸಿದೆವು, ಬಂದರು. ಅವರು ಮಾತನಾಡಲಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

## 7. <u>ಖಾಸಗಿ ಸದಸ್ಯರ ಕಾರ್ಯಕಲಾಪ</u>

## ಖಾಸಗಿ ನಿರ್ಣಯದ ಮೇಲಿನ ಚರ್ಚೆ

**ವಿಷಯ:- ದೇಸೀಯ ಪರಂಪರೆಯ ಆಯುರ್ವೇದ ವೈದ್ಯ ಪದ್ಧತಿಗೆ ಮನ್ನಣೆ ದೊರಕಿಸಿ ಕೊಡುವ ಸಲುವಾಗಿ ನೀತಿಯೊಂದನ್ನು ರೂಪಿಸುವ ಕುರಿತು.**

- - - - -

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಇದನ್ನು ಸುಮಾರು ಒಂದೂವರೆ ವರ್ಷದಿಂದ ಪ್ರತಿ ಅಧಿವೇಶನದಲ್ಲಿ ನಾವು ಮತ್ತು ನಮ್ಮ ಸ್ನೇಹಿತರಾದ ಮಾನ್ಯ ರುದ್ರೇಗೌಡರು ಪ್ರಸ್ತಾಪ ಮಾಡಬೇಕೆಂದು ಬಹಳ ಒತ್ತಾಯಿಸುತ್ತಿದ್ದೆವು. ಇವತ್ತು ತಾವು ನಮಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ಮೊದಲನೆಯದಾಗಿ ತಮಗೆ ಧನ್ಯವಾದವನ್ನು ಸಲ್ಲಿಸುತ್ತೇವೆ.

ಸಾಮಾಜಿಕ ರೋಗಗಳಿಗೆ ಬರೀ ಅಲೋಪತಿ ಒಂದೇ ಎಂಬ ರೂಪ ನಮ್ಮ ಅಧಿಕಾರಿಗಳಿಗೆ ಬಂದುಬಿಟ್ಟಿದೆ. ಆದರೆ ಇದಕ್ಕೂ ಮೊದಲು ನಾವು ಬರೀ ಆಯುರ್ವೇದದಲ್ಲಿಯೇ ಬದುಕುತ್ತಿದ್ದೆವು ಎನ್ನುವುದನ್ನು ಅವರೆಲ್ಲಾ ಮರೆತುಬಿಟ್ಟಿದ್ದಾರೆ. ಆಯುರ್ವೇದವು 4000 ವರ್ಷದಷ್ಟು ಹಳೆಯದಾದ ಪದ್ಧತಿಯಾಗಿದೆ. ಇದನ್ನು ಸಂಸ್ಕೃತ ಮತ್ತು ಮೂಲವಾಗಿ ಜೀವನ ಜ್ಞಾನ ಎಂದು ಹೇಳುತ್ತೇವೆ. ಈಗ ಮಾತ್ರೆಗಳನ್ನು ಮಾಡುವ ಕಂಪನಿಯವರ ಮಾತು ಕೇಳಿ ಅಧಿಕಾರಿಗಳು ಬರೀ ಅಲೋಪತಿಗೆ ಮನ್ನಣೆ ಕೊಡುವುದು ಬಿಟ್ಟರೆ ಆಯುರ್ವೇದಕ್ಕೆ ಮನ್ನಣೆಯನ್ನೇ ಕೊಡುವುದಿಲ್ಲ. ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು 15 ಕಾಲೇಜುಗಳಿವೆ. ಪ್ರತಿ ವರ್ಷ ಸುಮಾರು 5000 ಮಕ್ಕಳು ವೈದ್ಯರಾಗಿ ಬರುತ್ತಾರೆ. ಮೂರು ಕಾಲೇಜು ಅದರಲ್ಲಿ ಯುನಿಟ್ ಕೂಡ ಇದ್ದು ಡಾಕ್ಟರೇಟ್‌ಗಳನ್ನು ಮಾಡುತ್ತಾರೆ. ಇಷ್ಟು ಜನರು ಹೊರಗಡೆ ಬಂದು ಇವರೇನಾದರೂ ಚಿಕಿತ್ಸೆ ಕೊಡಬೇಕೆಂದರೆ ಸರ್ಕಾರದಲ್ಲಿ ಇದಕ್ಕೆ ಮಾನ್ಯತೆಯೇ ಇಲ್ಲ. ಇವರೇನಾದರೂ ಹೇಳಿದರೆ ಅವರು ಎಂ.ಬಿ.ಬಿ.ಎಸ್., ನವರ ಕೆಳಗೆ ಹೋಗಲು ಹೇಳುತ್ತಾರೆ. ಹಾಗಾದರೆ ಸರ್ಕಾರ ಏತಕ್ಕೆ ಇಷ್ಟು ಕಾಲೇಜುಗಳನ್ನು ತೆರೆದು ವರ್ಷ ವರ್ಷ ಅವರಿಗೆ ಪ್ರವೇಶ ಕೊಟ್ಟು 4-5 ಸಾವಿರ ವೈದ್ಯರುಗಳನ್ನು ಮಾಡಿ ಅವರು ಡಾಕ್ಟರಾಗಿ ಹೊರಗಡೆ ಬಂದ ಮೇಲೆ ಅವರು ಕೊಡುವಂತಹ ಚಿಕಿತ್ಸೆಗೆ ಮಾನ್ಯತೆಯೇ ಇಲ್ಲವೆಂದರೆ ಇದು ಹೇಗೆ? ಆ ಮಕ್ಕಳು ಏನು ತಪ್ಪು ಮಾಡಿದ್ದಾರೆ? ನೀವು ಕಾಲೇಜನ್ನೂ ಮಾಡಬಾರದಾಗಿತ್ತು, ಅವರನ್ನು ಡಾಕ್ಟರಾಗಿಯೂ ಮಾಡಬಾರದಾಗಿತ್ತು. ವೈದ್ಯರು ಯಾರಾದರೂ ಅನಾರೋಗ್ಯರಾಗಿದ್ದಾರೆಂದರೆ ಅವರು ಮೊದಲು ರೆಫರ್ ಮಾಡುತ್ತಿದ್ದುದು ಅಲೋಪತಿಗೆ. ಅಲೋಪತಿಯವರು ಏನು ಮಾಡುತ್ತಾರೆಂದರೆ, ಅವರದ್ದೇ ಆದಂತಹ ಚಿಕಿತ್ಸಾ ವಿಧಾನಕ್ಕೋಸ್ಕರ ಬೇರೆ ಪದ್ಧತಿಗಳಿಗೆ ಮನ್ನಣೆ ಕೊಡುವಂತಹ ಕೆಲಸವನ್ನೇ

ಮಾಡುವುದಿಲ್ಲ. ಅದು ರಾಷ್ಟ್ರ ಮಟ್ಟದಲ್ಲಾಗಬಹುದು, ರಾಜ್ಯ ಮಟ್ಟದಲ್ಲಾಗಬಹುದು. ಎಷ್ಟೇ ಕಮಿಟಿಗಳಿರಲಿ ಅದರಲ್ಲಿ ಅಲೋಪತಿಯವರನ್ನು ಒಬ್ಬರನ್ನೂ ತೆಗೆದುಕೊಳ್ಳುವುದಿಲ್ಲ. ಪ್ರತಿ ವರ್ಷ ಐದೂವರೆ ಸಾವಿರದಿಂದ ಆರು ಸಾವಿರ ಮಕ್ಕಳು ಹೊರಗೆ ಬರುತ್ತಾರೆ. ಅವರ್ಯಾರಿಗೂ ಮನ್ನಣೆಯೇ ಇಲ್ಲ. ವೈದ್ಯಕೀಯ ಮಂತ್ರಿಗಳು ಯಾವಾಗಲೂ ಅಲೋಪತಿ ಡಾಕ್ಟರನ್ನೇ ಮಾಡುತ್ತಾರೆ. ಏನೇ ಮಾಡಿದರೂ ಶೇ.90ರಷ್ಟು ಅಲೋಪತಿಗೇ ಅವಕಾಶ ಕೊಡುತ್ತಾರೆ. ಶೇ. 10ರಷ್ಟು ಭಾಗ ಆಯುರ್ವೇದ, ಯೋಗ, ಯುನಾನಿ, ಸಿದ್ದ ಮತ್ತು ಹೋಮಿಯೋಪಥಿಗೆ ಇದೆ. ಶೇ. 90ರಷ್ಟು ಅನುದಾನ ಹಂಚಿಕೆಯನ್ನು ಅಲೋಪತಿಗೆ ಮಾಡುತ್ತಾರೆ. ವೈದ್ಯರು ತಾನು ತನ್ನ ಕ್ಷೇತ್ರದಲ್ಲಿ ಒಂದೇ ಪ್ರಯತ್ನದಲ್ಲಿ ಎಂ.ಬಿ.ಬಿ.ಎಸ್., ಮಾಡಿ ಒಂದು ಆಸ್ಪತ್ರೆ ತೆರೆದು ಚಿಕಿತ್ಸೆ ಮಾಡಬೇಕಾದರೆ ಅಲೋಪತಿ ಜೊತೆಗೆ ಯೋಗ ಅಥವಾ ಫಿಸಿಯೋಥೆರಪಿ ಮಾಡುವುದಕ್ಕೆ ನಿಮ್ಮ ಸರ್ಕಾರದಲ್ಲಿ ಅನುಮತಿ ಇಲ್ಲ. ನೀವು ಒಂದನ್ನೆ ಮಾಡಬೇಕೆನ್ನುತ್ತಾರೆ. ಅದೇ ನೀವು ಬೇರೆ ಡಾಕ್ಟರುಗಳಿಗೆ ಸರ್ಕಾರದಲ್ಲಿ, ಖಾಸಗಿ ಕ್ಲಿನಿಕ್‌ನಲ್ಲಿ ಕೆಲಸ ಕೊಡುತ್ತೀರಿ. ಆದರೆ ಅವನು ಹೊರಗಡೆ ಹೋಗಿ ಇನ್ನೂ consultations ಮಾಡುತ್ತಾನೆ. ಇದಕ್ಕೆಲ್ಲಾ ಪ್ರಾವಿಜನ್ ಇದೆ. ಆಯುರ್ವೇದ, ಯೋಗ, ಯುನಾನಿ, ಸಿದ್ದ ಮತ್ತು ಹೋಮಿಯೋಪಥಿ ಇವುಗಳಿಗೆಲ್ಲಾ ಮಾನ್ಯತೆ ಸಿಗಬೇಕು. ಕಾಲಕಾಲಕ್ಕೆ ಅಲೋಪತಿ ಡಾಕ್ಟರುಗಳು ಇದನ್ನು ತುಳಿಯುವುದಕ್ಕೋಸ್ಕರ ಇದರ ಅಭಿವೃದ್ಧಿಗೆ ಗಮನ ಕೊಡುತ್ತಿಲ್ಲ. ದಶಕಗಳಿಂದ ಅಲೋಪತಿ ಬರುವುದಕ್ಕೂ ಮೊದಲು ಆಯುರ್ವೇದ ಪದ್ಧತಿ ಚಲಾವಣೆಯಲ್ಲಿತ್ತು. ರಾಮಾಯಣ, ಮಹಾಭಾರತ ಕಥೆಗಳನ್ನು ಓದಿದರೆ ಅದರಲ್ಲಿ ಆಯುರ್ವೇದದ ಚಿಕಿತ್ಸೆಗಳ ಬಗ್ಗೆ ಪ್ರಸ್ತಾಪವಾಗಿರುವುದು ಕಂಡು ಬರುತ್ತದೆ. ಕ್ರಿಸ್ತ ಪೂರ್ವ 2000ದಲ್ಲಿಯೇ 'ಸುಶ್ರುತ' ಎನ್ನುವಂತಹ ಮೊದಲ ಸರ್ಜನ್ ಬನಾರಸ್ ವಿಶ್ವವಿದ್ಯಾನಿಲಯದಲ್ಲಿ ಪ್ಲಾಸ್ಟಿಕ್ ಸರ್ಜರಿ ಮಾಡಿ ಪ್ರಪಂಚಕ್ಕೆ ತೋರಿಸಿಕೊಟ್ಟಿದ್ದಾರೆ. ಇಷ್ಟು ಹಳೆಯ ಪದ್ಧತಿಯನ್ನು ನಾವೇಕೆ ನಿರ್ನಾಮ ಮಾಡುವುದಕ್ಕೆ ಹೊರಟಿದ್ದೇವೆ ಎನ್ನುವುದನ್ನು ಸರ್ಕಾರ ಹೇಳಬೇಕು. ಕೇಂದ್ರದಲ್ಲಾಗಬಹುದು ಅಥವಾ ರಾಜ್ಯದಲ್ಲಾಗಬಹುದು ಯಾವುದೇ ವೈದ್ಯಕೀಯ ತಜ್ಞರನ್ನು ನೇಮಿಸುವಾಗಾಗಲೀ, ವೈದ್ಯಕೀಯ ಚಿಕಿತ್ಸೆಯನ್ನು ಕೊಡುವಾಗಾಗಲೀ ಆಯುರ್ವೇದಕ್ಕೆ ಪ್ರಾತಿನಿಧ್ಯವನ್ನೇ ಕೊಡುವುದಿಲ್ಲ. ನಮ್ಮ ರಾಜ್ಯದಲ್ಲಿ ಪ್ರತಿ ವರ್ಷ 55 ಆಯುರ್ವೇದ ಮೆಡಿಕಲ್ ಕಾಲೇಜುಗಳಿಂದ 5-6 ಸಾವಿರ ಮಕ್ಕಳು ವಿದ್ಯಾಭ್ಯಾಸ ಮುಗಿಸಿ ಬರುತ್ತಾರೆ. ಇದರಲ್ಲಿ ಸರ್ಕಾರದ್ದೇ ಮೂರು ಆಯುರ್ವೇದ ಕಾಲೇಜು ಇದೆ. ಆದರೆ ಅವನು ಹೊರಗಡೆ ಬಂದಾಗ ಅವನಿಗೆ ಮಾನ್ಯತೆ ಕೊಡುವುದಿಲ್ಲ. 15 ಆಯುರ್ವೇದ ಕಾಲೇಜುಗಳಲ್ಲಿ Post Graduate Surgical Department ಇದೆ. ಇವರಿಗೆ ಮೂರು ವರ್ಷ ಸರ್ಜರಿ ಮಾಡುವುದನ್ನು ಹೇಳಿಕೊಡುತ್ತಾರೆ. ಆದರೆ ಅವರು ಕಾಲೇಜಿನಿಂದ ಹೊರಗಡೆ ಬಂದ ಮೇಲೆ ಸರ್ಜರಿ ಮಾಡುವ ಹಾಗಿಲ್ಲ. ಇದು ಏತಕ್ಕೆಂದು ಸರ್ಕಾರ ಹೇಳಬೇಕು. ಅವರು ಅಲ್ಲಿ ಐದು ವರ್ಷ ಕಲಿತು, ಪುನಃ ಮೂರು ವರ್ಷ ಓದಿ ಬಂದರೂ ಹೊರಗಡೆ ಬಂದರೆ ಈ ಪದ್ಧತಿಗೆ ಮಾನ್ಯತೆ ಇಲ್ಲ. ಈಗ 'ಕೊರೋನಾ' ಬಂತು. ಅದಕ್ಕೆ ಏನು ಔಷಧಿಯನ್ನು ಕೊಟ್ಟರು ಎಂದರೆ

---

'ಡೋಲೋ' ಮಾತ್ರೆ ಕೊಟ್ಟರು. ಈ ಕಾಯಿಲೆ ಏನು ಎನ್ನುವುದು ಯಾರಿಗೂ ಗೊತ್ತಿರಲಿಲ್ಲ. ಈಗೇನೋ ಇಂಜಕ್ಷನ್ ಬಂದಿದೆ ಅದನ್ನು ಕೊಟ್ಟರು. ಆದರೆ ಆಯುರ್ವೇದದವರು; ಅದಕ್ಕೂ ಮೊದಲೇ ನಾನು ಒಂದನ್ನು ಹೇಳುತ್ತೇನೆ. 'ಕಜೆ' ಎಂಬುವರೊಬ್ಬರು ಬೆಂಗಳೂರಿನಲ್ಲಿದ್ದಾರೆ. ಅವರು 2-3 ರೀತಿಯ ಮಾತ್ರೆಗಳನ್ನು ಮಾಡಿದರು. ಅದನ್ನು ಲಕ್ಷಾಂತರ ಜನರಿಗೆ ಉಚಿತವಾಗಿ ಕೊಟ್ಟರು. ಮಾನ್ಯ ಯಡಿಯೂರಪ್ಪನವರ ಸರ್ಕಾರ ಇದ್ದಾಗ ಅವರು ಒಂದು ಪತ್ರ ಬರೆದು ಈ ರೆಸಿಪಿಯನ್ನು ಉಚಿತವಾಗಿ ಕೊಡುತ್ತೇನೆ, ಇದನ್ನು ಯಾರಾದರೂ ಮಾಡಿಕೊಳ್ಳಲಿ ಎಂದು ಪತ್ರ ಬರೆದಾಗ ಇದಕ್ಕೆ ಟೆಸ್ಟ್ ಆಗಬೇಕೆಂದು ಹೇಳಿದರು. ಅವರೇ ಒಂದು ಲ್ಯಾಬ್ ಕೊಟ್ಟು ಸಂಶೋಧನೆ ಮಾಡುವ ಲ್ಯಾಬ್‌ನಲ್ಲಿ ಟೆಸ್ಟ್ ಮಾಡಿಸುತ್ತಾರೆ. ಅಲ್ಲಿಂದ ಟೆಸ್ಟ್ ಮಾಡಿಸಿಕೊಂಡು ಬರುತ್ತಾರೆ. ನಂತರ ಮಾನ್ಯ ದೇವೇಗೌಡರು ಕೂಡ ಮಂಗಳೂರಿನ ವೈದ್ಯರೊಬ್ಬರನ್ನು ಸರ್ಕಾರಕ್ಕೆ recommend ಮಾಡಿ ಅವರ ಬಳಿ ಸಲಹೆ ತೆಗೆದುಕೊಂಡು ಆಯುರ್ವೇದಕ್ಕೆ ಮನ್ನಣೆ ಕೊಡಬೇಕೆಂದು ಕೇಳುತ್ತಾರೆ. ಅದಕ್ಕೆ ಸರ್ಕಾರ ಮನಸ್ಸೇ ಮಾಡುವುದಿಲ್ಲ. ಇವರಿಗೆ ಏತಕ್ಕೆ ಮನಸ್ಸು ಬರುವುದಿಲ್ಲ ಎಂಬುದು ನಮಗೆ ಗೊತ್ತಾಗುವುದಿಲ್ಲ. ಅಲೋಪತಿ ವೈದ್ಯ ವಿಧಾನ ಏನಾಗಿದೆ ಎಂದರೆ ಏಕಚಕ್ರಾಧಿಪತ್ಯದಂತಾಗಿದೆ. ವೈದ್ಯರುಗಳು ಎರಡನೆಯವರು. ಮೊದಲು ಮಾತ್ರೆ ಮಾಡುವ ಕಂಪನಿಗಳು. ಅವರು ಮಾತ್ರೆಯನ್ನು 60 ಪೈಸೆಯಂತೆ ಮಾರಿದರೆ ಅದಕ್ಕೆ ಆರು ಲಕ್ಷ ರೂಪಾಯಿಗಳಷ್ಟು ಜಾಹೀರಾತನ್ನು ಮೊದಲು ಕೊಡುತ್ತಾರೆ. ಆಮೇಲೆ ಮಾತ್ರೆ ಮಾರುವುದಕ್ಕೆ ಬಿಡುತ್ತಾರೆ. ಡಾಕ್ಟರುಗಳಿಗೆ ಏನಾಗಿದೆ ಎಂದರೆ, ಇಂಗ್ಲಿಷ್ ಮಾತ್ರೆಯನ್ನು ಮಾರಿದರೆ ತಮಗೆ ಚೆನ್ನಾಗಿ ಹೆಸರು ಬರುತ್ತದೆ ಎಂದು ಅಲೋಪತಿಗೆ ಬರುತ್ತಾರೆ. ಆದರೆ ಇವರೆಲ್ಲಾ ಬಡವರು. ಇದಕ್ಕೆ ಹೋಗುವವರೆಲ್ಲರೂ ಡೊನೇಷನ್, ಪೇಮೆಂಟ್ ಸೀಟ್ ಗೆ ಬರುವುದಿಲ್ಲ. ಯಾರಿಗೆ ಪೇಮೆಂಟ್ ಸೀಟ್‌ಗೆ ಹೋಗುವುದಕ್ಕೆ ಆಗುವುದಿಲ್ಲ; ಉಡುಪಿ ಕಡೆಗಳಲ್ಲೆಲ್ಲಾ ಮಂಜುನಾಥ ಆಯುರ್ವೇದ ಕಾಲೇಜುಗಳಲ್ಲಿ ಓದುತ್ತಾರೆ. ನನ್ನ ಚಿಕ್ಕಪ್ಪನ ಮಗನೇ ಡಾಕ್ಟರಾಗಿದ್ದಾನೆ. ಹೊರಗಡೆ ಬಂದರೆ ಅವನಿಗೆ ಮಾನ್ಯತೆ ಇಲ್ಲ. ಅವನು ಎಂ.ಬಿ.ಬಿ.ಎಸ್. ಡಾಕ್ಟರಿಗಿಂತ ಒಳ್ಳೆಯ ಚಿಕಿತ್ಸೆ ಕೊಡುವವನಿದ್ದಾನೆ. ಸರ್ಕಾರದ ಮಟ್ಟದಲ್ಲಿ ನೀತಿ ನಿರೂಪಿಸುವವರು ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಆಯುರ್ವೇದದವರಿಗೆ ಪ್ರಾತಿನಿಧ್ಯ ಕೊಡಬೇಕು. ನೀವು ಎಲ್ಲಾ ಕಡೆ ಕಮಿಟಿಗಳನ್ನು ಮಾಡಿದ್ದೀರಿ.

(ಮುಂದು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1149) 17-12-2021 KH/AK 1-10

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಯು.ಬಿ.ವೆಂಕಟೇಶ್(ಮುಂದು):-**

ಮೆಡಿಕಲ್ ಎಂಪ್ಲಾಯ್‌ಮೆಂಟ್‌ಗೆ ಆಗಬಹುದು, medical jurisdiction ಗೆ ಆಗಬಹುದು. ತಮ್ಮಲ್ಲಿ 10 ಜನ ಇದ್ದರೆ, ಕನಿಷ್ಠಪಕ್ಷ ಒಬ್ಬ ಆಯುರ್ವೇದದವರಿಗಾದರೂ ಪ್ರಾತಿನಿಧ್ಯ ಕೊಟ್ಟು, ಒಂದು ಕೆಲಸ ಕೊಡಿ. ನಾನು ಕೇಳುವುದು ಇಷ್ಟೇ. ನಾನು ತಂದಿರುವಂತಹ ಖಾಸಗಿ ನಿರ್ಣಯವನ್ನು ಅನುಮೋದಿಸಿ ಎಲ್ಲಾ ಆಯುರ್ವೇದ ಮತ್ತು ದೇಸಿಯಾ ವೈದ್ಯರುಗಳಿಗೆ ಮನ್ನಣೆ ಕೊಡಬೇಕು. ಎಲ್ಲಾ ಮಾನ್ಯ ಸದಸ್ಯರುಗಳು ನನ್ನ ಜೊತೆ ಧ್ವನಿಗೂಡಿಸಬೇಕೆಂದು ಕೈಮುಗಿದು ಕೇಳಿಕೊಳ್ಳುತ್ತೇನೆ. ಇವತ್ತು ದೇಶದಲ್ಲಿ ತಮ್ಮ ಸರ್ಕಾರ ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಪ್ರಧಾನ ಮಂತ್ರಿಯವರ ಭಾವಚಿತ್ರ ಹಾಕಿ ಆಯುಷ್ ಎಂದು ಅಂಗಡಿಗಳನ್ನು ತೆಗೆದಿದ್ದಾರೆ. ಆಯುಷ್ ಇಲಾಖೆಗೆ 470 ಕೋಟಿ ರೂಪಾಯಿಗಳು ಖರ್ಚಾಗಿದೆ ಎನ್ನುವ ಮಾಹಿತಿ ನೆನ್ನೆಯ ದಿನಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿರಬಹುದು. ಅದರಲ್ಲಿ ಶೇಕಡಾ 70 ರಷ್ಟು ಹಣ ಜಾಹೀರಾತುಗಳಿಗೆ ಹೋಗಿದೆ. ಇದರಲ್ಲಿ ಮಾರಾಟ ಮಾಡುವುದು ಏನು? ಇದರಲ್ಲಿ ನಮ್ಮ ಆಯುರ್ವೇದ ಔಷಧಿಗಳು ಬರುತ್ತವೆ. ಆದರೆ, ತಾವು ಆಯುರ್ವೇದ ಔಷಧಿಗಳಿಗೆ ಮಾರ್ಯಾದೆ ಕೊಡುವುದಿಲ್ಲ. ತಾವು ಯಾರದಾದರೂ ಫೋಟೋ ಹಾಕಿಕೊಳ್ಳಿ. ತಮ್ಮದೇ ಹಾಕಿಕೊಳ್ಳಿ. ನಮ್ಮದೇನೂ ಅಡ್ಡಿ ಇಲ್ಲ. ನಮ್ಮ ಪುರಾತನ ಕಾಲದಿಂದ ನಮ್ಮ ನಂಜನಗೂಡಿನ ಬಿ.ವಿ.ಪಂಡಿತ್ ಮತ್ತು ಕೇರಳದ ಕೊಟ್ಟಕಲ್ ರವರು ಈ ಕ್ಷೇತ್ರದಲ್ಲಿ ದಶಕಗಳಿಂದ ಸೇವೆ ಮಾಡಿಕೊಂಡು ಬಂದಿದ್ದಾರೆ. ಅವರ ಹತ್ತಿರ ಮಾತ್ರೆ ತೆಗೆದುಕೊಂಡರೆ ಇವತ್ತು ಎಷ್ಟೋ ಜನರು ಆಸ್ಪತ್ರೆಗೆ ಹೋಗುವುದಿಲ್ಲ. ಬಿ.ವಿ.ಪಂಡಿತ್‌ರವರ ಟಾನಿಕ್ ಕೊಡಿ ಎಂದು ಕೇಳುತ್ತಾರೆ. ಕೇರಳದ ಕೊಟ್ಟಕಲ್‌ಗೆ ಹೋಗಿ ಬನ್ನಿ ಎಂದು ಹೇಳುತ್ತಾರೆ. ಆದರೆ, ಈ ಇಂಗ್ಲಿಷ್ ಮಾತ್ರೆಯನ್ನು ಯಾರು ಕೇಳುತ್ತಾರೆ? ಆದರೆ, ಸರ್ಕಾರ ಇದಕ್ಕೆ ಮನ್ನಣೆ ಕೊಡುವುದು ಸರಿಯಲ್ಲ. ಫಿಸ್ತುಲ ಎನ್ನುವುದು ಒಂದು ಕಾಯಿಲೆ. ಒಬ್ಬ ಅಮೇರಿಕನ್ 26 ಬಾರಿ ಚಿಕಿತ್ಸೆ ಮಾಡಿಸಿಕೊಳ್ಳುತ್ತಾನೆ. ಇದಕ್ಕೆ ನಾನು ದಾಖಲೆಗಳನ್ನು ಕೊಡುತ್ತೇನೆ. 26 ಬಾರಿ ಚಿಕಿತ್ಸೆ ಮಾಡಿಸಿದರೂ ಅದು ಫಲಕಾರಿಯಾಗುವುದಿಲ್ಲ. ಅವರು ಇಲ್ಲಿಗೆ ಬಂದಮೇಲೆ ನಮ್ಮ ಆಯುರ್ವೇದ ಪದ್ಧತಿಯಲ್ಲಿ ಶಾರಸೂತ್ರ ಚಿಕಿತ್ಸೆ ಪಡೆದು ಗುಣಮುಖರಾಗಿದ್ದಾರೆ. ಇದು ಗಿನ್ನಿಸ್ ದಾಖಲೆಗೆ ಸೇರಿದೆ. ಇದು ನಮ್ಮ ಆಯುರ್ವೇದದಲ್ಲಿ ಮಹತ್ತರವಾದ ಕೊಡುಗೆಯಾಗಿದೆ. ಇಂತಹ ಉದಾಹರಣೆಗಳು ನಮ್ಮಲ್ಲಿ ಬೇಕಾದಷ್ಟು ಇವೆ. ದಯವಿಟ್ಟು ಸರ್ಕಾರ ಆಯುರ್ವೇದ ಕ್ಷೇತ್ರಕ್ಕೆ ಹೆಚ್ಚಿನ ಮನ್ನಣೆಯನ್ನು ನೀಡಿ. ಈ ಕ್ಷೇತ್ರದಲ್ಲಿರುವ ಎಲ್ಲಾ ವೈದ್ಯರಿಗೂ, ಫಲಾನುಭವಿಗಳಿಗೂ, ನಮ್ಮೆಲ್ಲರಿಗೂ ಒಳ್ಳೆಯದಾಗಲಿ ಎನ್ನುವ ಉದ್ದೇಶದಿಂದ ತಕ್ಷಣ ಆಯುರ್ವೇದ ಚಿಕಿತ್ಸಾ ಕ್ರಮಗಳಿಗೆ ಹೆಚ್ಚಿನ ಮನ್ನಣೆ ಮತ್ತು ಗಮನ ನೀಡಬೇಕೆಂದು ನಾನು ಸರ್ಕಾರದಲ್ಲಿ ಕೇಳುತ್ತೇನೆ. ನಾನು ಇದರ ಬಗ್ಗೆ ಸ್ವಲ್ಪ ಸಲಹೆಗಳನ್ನು ನೀಡುತ್ತೇನೆ. ಒಂದೇ ಸೂರಿನಡಿ ಆಯಾಯ ನಿರ್ದಿಷ್ಟ ತಜ್ಞರನ್ನು ಒಳಗೊಂಡ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿವಿಧ ಔಷಧ ಪದ್ಧತಿಗಳ ಲಭ್ಯತೆಯನ್ನು ಅನುಮೋದಿಸಬೇಕೆಂದು 2018ನೇ ಸಾಲಿನಲ್ಲಿ ಸರ್ಕಾರ ಒಂದು ಆದೇಶವನ್ನು ಮಾಡುತ್ತದೆ. ಈ ರೀತಿಯ ಆಯುರ್ವೇದ ವೈದ್ಯರುಗಳು ಒಂದೇ ಕಡೆ ಮಾಡಿಕೊಳ್ಳಬಹುದೆನ್ನುವ ಮಾಹಿತಿಯನ್ನು ಸಹ ಕೊಡುತ್ತೇನೆ. ಇವರು ಅಲೋಪತಿ influence ಗೆ ಹೋಗಿಬಿಡುತ್ತಾರೆ. 2019ನೇ ಸಾಲಿನಲ್ಲಿ ಒಬ್ಬ ಡಾಕ್ಟರ್ ಒಂದೇ ಕಡೆ ಒಂದೇ ಮಾಡಬೇಕೆಂದು ತಿಳಿಸುತ್ತದೆ. ಇದು ತಪ್ಪು. ಇದು ಬದಲಾವಣೆಯಾಗಬೇಕು. ಅವರಿಗೆ ಯಾವ್ಯಾವುದ್ದರಲ್ಲಿ ಮಾಡುವಂತಹ ಶಕ್ತಿ ಇದೆ ಅಥವಾ ಅವರು ಪರಿಣತಿ ಇದ್ದಾರೆ, ಅದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆಯುಷ್ ವ್ಯವಸ್ಥೆಯ ಜನಪ್ರಿಯತೆ ಹೆಚ್ಚುತ್ತಿರುವುದರಿಂದ, P.P.P (Public-Private Partnership) ಮಾದರಿ ಆಧರಿಸಿ O.P.D. (Outpatient Department) ಗಳನ್ನು ವಿವಿಧ ಪ್ರಮುಖ ನಗರಗಳಲ್ಲಿ, ಪಟ್ಟಣಗಳಲ್ಲಿ ಸ್ಥಾಪಿಸಬಹುದು. ಆಯುರ್ವೇದ ಚಿಕಿತ್ಸಾ ಕೇಂದ್ರಗಳನ್ನು ಪ್ರಾಥಮಿಕ, ದ್ವಿತೀಯ ಮತ್ತು ತೃತೀಯ ಕೇಂದ್ರಗಳಾಗಿ ವಿಂಗಡಿಸಬಹುದು. ಭಾರತೀಯ ಔಷಧ ಪದ್ಧತಿಯ ವಿವಿಧ ವಿಶೇಷತೆಗಳೇನು? ಶಬ್ದ, ಕಾಲಾತ್ಮ, ಪಂಚಕರ್ಮ ಇತ್ಯಾದಿಗಳಿಗೆ ಪ್ರಾಮುಖ್ಯತೆ ಕೊಟ್ಟು C.S.R. (Corporate Social Responsibility), P.P.P. ಮಾದರಿಯಲ್ಲಿ ವಿಶೇಷ ಚಿಕಿತ್ಸಾಲಯಗಳನ್ನು ಪ್ರಾರಂಭಿಸಬಹುದು. ಆಯುರ್ವೇದದಲ್ಲಿ ನರ್ಸಿಂಗ್ ಕೋರ್ಸ್ ಆರಂಭಿಸಿದಲ್ಲಿ ನುರಿತ ಪಂಚಕರ್ಮ ಚಿಕಿತ್ಸಕರು ಮತ್ತು ಆಯಾ ವಿಶೇಷ ಘಟಕಗಳಿಗೆ ಸಹಾಯಕರನ್ನು ಪಡೆಯುವಂತಾಗಿ ಸರಿಯಾದ ಶೈಕ್ಷಣಿಕ ಅರ್ಹತೆಯೊಂದಿಗೆ ಜನರು ಸಂಘಟಿತ ಕ್ಷೇತ್ರದ ವ್ಯವಸ್ಥೆಯಲ್ಲಿ ಇದು ಸಹಾಯ ಮಾಡುತ್ತದೆ. ಉಚಿತ ಆಯುಷ್ ವೈದ್ಯಕೀಯ ಶಿಬಿರಗಳನ್ನು ನಡೆಸಲು ಸಾಮಾನ್ಯ ಜನರಲ್ಲಿ ಭಾರತೀಯ ಔಷಧಿಗಳ ಬಗ್ಗೆ ಅರಿವು ಮೂಡಿಸಲು ಸಿ.ಎಸ್.ಆರ್ ನಿಧಿಯನ್ನು ಬಳಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಮೇಲ್ದರ್ಜೆಗೆ ಉನ್ನತೀಕರಿಸಿ ತಾಲ್ಲೂಕು ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆ, ಶಲ್ಯ ಮತ್ತು ಶಾಲಾಕ್ಯ ಎಂದು ಆಯುರ್ವೇದದಲ್ಲಿ ಹೇಳುತ್ತಾರೆ. ಸ್ನಾತಕೋತ್ತರ ಪದವಿ ಹೊಂದಿರುವ ತಜ್ಞ ವೈದ್ಯರುಗಳು ಕಳೆದ 8 ವರ್ಷಗಳಿಂದ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಈ ತಜ್ಞ ವೈದ್ಯರುಗಳಿಗೆ ಇನ್ನೂ ಹೆಚ್ಚಿನ ಸಹಕಾರ ದೊರತರೆ ತಾಲ್ಲೂಕು ಆಸ್ಪತ್ರೆಗಳಲ್ಲಿನ ಶಸ್ತ್ರ ಚಿಕಿತ್ಸಕರ ಮೇಲಿನ ಒತ್ತಡ ಕಡಿಮೆಯಾಗುತ್ತದೆ. ಅಲ್ಲದೇ, ಸಾರ್ವಜನಿಕರಿಗೆ ಶೀಘ್ರದಲ್ಲಿಯೇ ಚಿಕಿತ್ಸೆ ಪಡೆಯಲು ಅವಕಾಶವಾಗುತ್ತದೆ. ಪ್ರೌಢಶಾಲಾ ತರಗತಿಗಳಲ್ಲಿ ಭಾರತೀಯ ಔಷಧ ಪದ್ಧತಿಗಳ ಕಡ್ಡಾಯ ವಿಷಯದ ಪರಿಚಯ ಮತ್ತು ಆರೋಗ್ಯಯೇತರ ಆಹಾರ ಪದ್ಧತಿಯ ಪ್ರಾಯೋಗಿಕ ತರಗತಿಗಳನ್ನು ಆರಂಭಿಸುವುದಕ್ಕೆ ಸಲಹೆ ಕೊಡುತ್ತೇನೆ. ಇಷ್ಟೆಲ್ಲಾ ನಾವು ಹೇಳುತ್ತೇವೆ. ಸೌಖ್ಯ ಹೆಲ್ತ್ ಸೆಂಟರ್‌ಗೆ Prince Charles ಎನ್ನುವವರು ಲಂಡನ್‌ನಿಂದ ಬೆಂಗಳೂರಿಗೆ ಬಂದು ಇಲ್ಲಿ ಟ್ರೀಟ್‌ಮೆಂಟ್ ತೆಗೆದುಕೊಂಡು ಗುಣಮುಖರಾಗಿ ಹೋಗುತ್ತಾರೆ. ಈ ರೀತಿಯಲ್ಲಿಯೇ ನಮ್ಮಲ್ಲಿ ಜಿಂದಾಲ್ ಇದೆ, ಉಜಿರೆ ಹತ್ತಿರ ನಮ್ಮ ಧರ್ಮಸ್ಥಳದವರದು ಮಾಡಿರುವಂಥದ್ದು ಇದೆ, ಈ ರೀತಿ ಬೇಕಾದಷ್ಟು ಇದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ರುದ್ರೇಗೌಡ**:- ಮಾನ್ಯ ಸಭಾಪತಿಯವರೇ, . . .

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಎಸ್. ರುದ್ರೇಗೌಡರವರೇ, ಒಂದು ನಿಮಿಷ. ನಾನು ಮಾತನಾಡಿ ಮುಗಿಸಿದ ಮೇಲೆ ತಾವೇ ಮಾತನಾಡಿ. ನಾನು ತಮ್ಮ ಹೆಸರನ್ನು ತೆಗೆದುಕೊಂಡಿದ್ದೇನೆ. ನಾನು ಸ್ವಲ್ಪ ಕನ್‌ಕ್ಲ್ಯೂಡ್ ಮಾಡುತ್ತೇನೆ. ಇದರಲ್ಲಿ ಬೇಕಾದಷ್ಟು ಜನರು ಹೈಯರ್ ಡಿಗ್ರಿಗಳನ್ನು ಮಾಡಿ they are above M.Ds and Ph.Ds. ಆದರೆ, ಅವರಿಗೆ ಯಾವುದೇ ಮಾನ್ಯತೆ ಸಿಗದೇ ಅವರು ಏನೂ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ? ನಾನು ಇದರ ಬಗ್ಗೆ 8-10 ಉದಾಹರಣೆಗಳನ್ನು ಕೊಡುತ್ತೇನೆ. ಈ ವೈದ್ಯರುಗಳು ಬೆಂಗಳೂರಿನಲ್ಲಿಯೇ ಇದ್ದಾರೆ. ಇಂತಹವರನ್ನೆಲ್ಲಾ ಉಪಯೋಗಿಸಿಕೊಂಡು, ಆಯುಷ್ ಆಸ್ಪತ್ರೆಗಳಾಗಬಹುದು ಅಥವಾ ಈ ಶಸ್ತ್ರ ಚಿಕಿತ್ಸೆ ಕೊಡುವುದಕ್ಕೆ ಆಗಬಹುದು, ಇವರಿಗೆಲ್ಲಾ ಅನುಮತಿ ಕೊಡಿ. ಇದಕ್ಕೆ ಸರ್ಕಾರ ಶೇಕಡಾ 10 ರಷ್ಟು ಏಕೆ ಕೊಡುತ್ತದೆ? ಅಲೋಪತಿಗೆ ಶೇಕಡಾ 90 ರಷ್ಟು ಕೊಟ್ಟು, ಇದಕ್ಕೆ ಶೇಕಡಾ 10 ರಷ್ಟು ಕೊಡುತ್ತೀರಿ. ಇದು ನಮ್ಮ ದೇಶೀಯ ಪದ್ಧತಿ. ಇದರಿಂದ ನಾವು ಬದುಕಿದ್ದೇವೆ. ಇವತ್ತು ನೆನ್ನೆ ಈ ಡಾಕ್ಟರ್‌ಗಳು, ಇಂಜಿನಿಯರಿಂಗ್, ಎಕ್ಸ್‌ರೇ ಮೆಷಿನ್ ಬಂದಿವೆ. ಇವು ಇಲ್ಲದೇ ಆಯುರ್ವೇದದಲ್ಲಿಯೇ ಸುಮಾರು 2000 ವರ್ಷಗಳ ಹಿಂದೆಯೇ ನಮ್ಮವರು ಆಪರೇಷನ್ ಮಾಡಿದ್ದಾರೆ. ಅದರಿಂದ, ನಾನು ಮತ್ತೆ ಮಾತನಾಡುವುದಿದೆ. ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರು ಮಾತನಾಡಲಿ.

**ಸಭಾಪತಿಯವರು:-** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ಮತ್ತೆ ಅವಕಾಶ ಕೊಡುವುದಿಲ್ಲ. ಏನಿದ್ದರೂ ಈಗಲೇ ಮಾತನಾಡಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನೇ ಮಾತನಾಡುತ್ತೇನೆ. ಒಂದೇ ಕಡೆ, ಒಂದೇ ಮಾಡಬೇಕು, ಎರಡು ಮಾಡಬಾರದೆಂದು ಸರ್ಕಾರ ತಂದಿರುವಂತಹ ಅಮೆಂಡ್‌ಮೆಂಟ್ ಏನಿದೆ? ಇದಕ್ಕೆ ತಕ್ಕಂತ ಅಮೆಂಡ್‌ಮೆಂಟ್ ತಂದು ಯಾರ್ಯಾರಿಗೆ ಏನೇನು ಪರಿಣತಿ ಇದೆ. ಒಂದಲ್ಲ, ಎರಡಲ್ಲ, ಮೂರಲ್ಲ ಅದನ್ನು ಮಾಡುವುದಕ್ಕೆ ಸರ್ಕಾರದಲ್ಲಿ ಅವಕಾಶ ಮಾಡಿಕೊಡಬೇಕು. ಅವರು ರಾಜ್ಯ ಸರ್ಕಾರಕ್ಕೆ ಮನವಿಯನ್ನು ಕೊಟ್ಟಿದ್ದಾರೆ. World Journal ನಲ್ಲಿ ನಮ್ಮ ಆಯುರ್ವೇದದ ಬಗ್ಗೆ ಬೇಕಾದಷ್ಟು writeups ಬರುತ್ತವೆ. ಅವರು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ತಾವು ಏನು ಬೇಕಾದರೂ ಇಂಡಿಯಾದಲ್ಲಿ ಮಾಡಿಸಿಕೊಳ್ಳಬಹುದು, ಯಾವುದಕ್ಕೆ ಚಿಕಿತ್ಸೆ ಸಿಗುವುದಿಲ್ಲ, ಅದಕ್ಕೆಲ್ಲಾ ಭಾರತಕ್ಕೆ ಹೋಗಿ ಎಂದು ಅವರು ಬರೆಯುತ್ತಾರೆ. ಇದು "Anal fistula communicating to anterior abdominal wall treated with ksharasutra (medicated seton): a rare case study" ಎಂದು ರಮೇಶ್‌ಭಟ್ ರವರು ಮಾಡುತ್ತಾರೆ. ಇದು World Journal ನಲ್ಲಿ ಅಂದರೆ 'Journal of Surgical Case Reports' ನಲ್ಲಿ ಬರುತ್ತದೆ. ನಾವು ಬರೆಯುವುದಿಲ್ಲ. ನಮ್ಮ ದೇಶದಲ್ಲಿ, ನಮ್ಮ ರಾಜ್ಯದಲ್ಲಿ ಈ ಕಾನೂನು ಏಕೆ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಂದಿದ್ದೇವೆಂದು ನೋಡಿ ಮಾಡಿ. ಈ ಆಯುರ್ವೇದಕ್ಕೆ ಮನ್ನಣೆ ಕೊಡುವುದಕ್ಕೋಸ್ಕರ ಆಯುರ್ವೇದ ಡಾಕ್ಟರ್‌ಗಳನ್ನು ಬೇರೆ ಡಾಕ್ಟರ್‌ಗಳ ರೀತಿಯಲ್ಲಿಯೇ ಟ್ರೀಟ್ ಮಾಡಬೇಕು. ಅವರಿಗೂ ಸರ್ಕಾರದಲ್ಲಿ ಅವಕಾಶ ಕೊಡಬೇಕು. ಕೆಲಸ ಇರುವ ಕಡೆ ಅವರನ್ನು ಹಾಕಿ. ಈಗ ಒಂದು ಕಡೆ ಡಾಕ್ಟರ್ ಇಲ್ಲ, ಹಳ್ಳಿಗಳಿಗೆ ಡಾಕ್ಟರ್‌ಗಳು ಹೋಗುವುದಿಲ್ಲ ಎಂದು ಹೇಳುತ್ತಾರೆ. ಅಂತಹ ಆಯುರ್ವೇದ ಡಾಕ್ಟರ್‌ಗಳೆಲ್ಲಾ ಹಳ್ಳಿಗಳಲ್ಲಿಯೇ ಇದ್ದಾರೆ. ತಾವು ಕೊಟ್ಟರೆ ನಮ್ಮ ಆಯುರ್ವೇದ ಡಾಕ್ಟರ್‌ಗಳು ಹಳ್ಳಿಗಳಿಗೆ ಹೋಗಿ ಕೆಲಸ ಮಾಡುತ್ತಾರೆ. ತಮ್ಮ ಹಾಗೆ ಬೆಂಗಳೂರು, ಬಂಗಲೋ, ಈ ರೀತಿಯ five star treatment ಬೇಕಿಲ್ಲ. ಈ ಆಯುರ್ವೇದ ಡಾಕ್ಟರ್‌ಗಳೆಲ್ಲಾ recognition ಇಲ್ಲದೇ ಅಲ್ಲಲ್ಲೇ ಇರುವ ಹಳ್ಳಿಗಳಲ್ಲಿ, ಗ್ರಾಮಗಳಲ್ಲಿ ಇದ್ದಾರೆ. ಅವರಿಗೆಲ್ಲಾ ತಾವು ಅವಕಾಶ ಕೊಟ್ಟರೆ ಅವರು ಅಲ್ಲಲ್ಲೇ ಸ್ಥಾಪನೆ ಮಾಡಿಕೊಂಡು ಅಥವಾ ಸರ್ಕಾರದ ಜೊತೆ ಕೈಜೋಡಿಸಿ ಈ ಒಂದು ಬಿಲ್‌ಗೆ ಎಲ್ಲರೂ ಸಹಕರಿಸಬೇಕು. ಸರ್ಕಾರ ದೊಡ್ಡ ಮನಸ್ಸು ಮಾಡಿ, ಇದಕ್ಕೆ ತಕ್ಷಣ ಮನ್ನಣೆ ಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ರುದ್ರೇಗೌಡ**:- ಮಾನ್ಯ ಸಭಾಪತಿಯವರೇ,

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇನ್ನು ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರು ಮಾತನಾಡುವುದಿದ್ದರೆ,

**ಸಭಾಪತಿಯವರು:-** ಮಾನ್ಯ ಸದಸ್ಯರೇ, ನಾನು ಯಾರಿಗೂ ಅವಕಾಶ ಕೊಡುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಯು.ಬಿ.ವೆಂಕಟೇಶ್‌ರವರು ಖಾಸಗಿ ನಿರ್ಣಯವನ್ನು ಮಂಡಿಸಿ, “ದೇಸೀಯಾ ಪರಂಪರೆಯ ಆಯುರ್ವೇದ ವೈದ್ಯ ಪದ್ಧತಿಗೆ ಮನ್ನಣೆ ದೊರಕಿಸಿಕೊಡಬೇಕಾಗಿ, ಹಲವಾರು ನೀತಿ ನಿಯಮಗಳನ್ನು ರೂಪಿಸುವುದಕ್ಕೆ ವಿಶೇಷವಾಗಿ ಆಯುಷ್ ಮತ್ತು ಆಯುರ್ವೇದದ ಬಗ್ಗೆ ಕಾಳಜಿಯಿಂದ ನಿಯಮಗಳನ್ನು ರೂಪಿಸುವುದಕ್ಕೆ ಮತ್ತು ಅದಕ್ಕೆ ಒತ್ತು ಕೊಡುವುದಕ್ಕೆ ಬೇಕಾದಂತಹ ಖಾಸಗಿ ನಿರ್ಣಯದ ಬಗ್ಗೆ ವಿಸ್ತೃತವಾದಂತಹ ವಿಷಯವನ್ನು ಮಂಡನೆ ಮಾಡಿದ್ದಾರೆ. ಮಧ್ಯದಲ್ಲಿ ಈ ಕಾರ್ಯಕ್ರಮಗಳಿಗೆ ದೇಶದ ಪ್ರಧಾನಿ ಮತ್ತು ಮುಖ್ಯಮಂತ್ರಿಯವರ ಫೋಟೋ ಹಾಕಿರುವುದರ ಬಗ್ಗೆ ಏಕೆ ಹೇಳಿದ್ದಾರೆ ಎಂಬುದು ನನಗೆ ಗೊತ್ತಾಗಲಿಲ್ಲ?

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾನಾಯಕರೇ, ಆಯುಷ್ ಇದೆ.

**(ಗೊಂದಲ)**

---

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ತಾವು ಹೇಳಿದ್ದು ತಪ್ಪು ಎಂದು ಹೇಳಿದ್ದೇನೆಯೇ? ತಾವೆಲ್ಲಾ ಸರಿ ತಾನೇ ಹೇಳುವುದು. ನಾನು ಆ ರೀತಿ ಹೇಳಲಿಲ್ಲ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾನಾಯಕರೇ, ಆಯುರ್ವೇದದ ಆಯುಷ್ ಮಾರ್ಕ್ ಇದ್ದು, ತಾವು ಆಯುರ್ವೇದದ ಬಗ್ಗೆ ನಮ್ಮ ರಾಜ್ಯದಲ್ಲಿ ಪ್ರಾಮುಖ್ಯತೆಯನ್ನು ಕೊಡುತ್ತಿಲ್ಲ ಎಂದು ಹೇಳಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಆಯುರ್ವೇದ ಪ್ರಚಾರದಂತೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಜೊತೆ ಅನುಷ್ಠಾನ ಮಾಡುವಾಗ ದೇಶದ ಪ್ರಧಾನಿ ಮತ್ತು ಮುಖ್ಯಮಂತ್ರಿಯವರ ಫೋಟೋ ಹಾಕುವುದು ರೂಢಿ. ಅದು ಯಾವ ಪಾರ್ಟಿಯ ಅಂತಲ್ಲ. ಹಾಗಾಗಿ ಆಕ್ಷೇಪ ಮಾಡಿದ್ದು ಏಕೆ ಎನ್ನುವುದು ನನಗೆ ಅರ್ಥವಾಗಲಿಲ್ಲ ಎನ್ನುವುದನ್ನು ಬಿಟ್ಟರೆ ನಾನೇನಾದರೂ ಆಕ್ಷೇಪ ಮಾಡಿದ್ದೇನೆಯೇ?

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾನಾಯಕರೇ, ಅದಕ್ಕೆ ನನ್ನ ಆಕ್ಷೇಪ ಇಲ್ಲ. ಹಾಕಿದ್ದು ಒಳ್ಳೆಯದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಆಯಿತು. ಸರಿ. ಆಕ್ಷೇಪ ಇಲ್ಲವೆಂದರೆ ಮುಗಿಯಿತ್ತಲ್ಲವೇ?

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾನಾಯಕರೇ, ಅದರಲ್ಲಿ ಆಯುರ್ವೇದ ಕೂಡ ಇರುತ್ತದೆ. ಇದರ ಜೊತೆಗೆ ಆಯುರ್ವೇದಕ್ಕೆ ಮನ್ನಣೆ ಕೊಡಿ ಎಂದು ಹೇಳಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ಆಯಿತು. ತಾವು ಹೇಳಿದ್ದನ್ನು ನಾನು ಕೇಳಿದ್ದನ್ನು ಗಮನಿಸಿದ್ದೇನೆ ಅಷ್ಟೇ. ಇದರಲ್ಲಿ ಮತ್ತೇನೂ ಇಲ್ಲ. ಇದಕ್ಕೆ ಯಾವುದೇ ಆಕ್ಷೇಪಗಳು ಇಲ್ಲ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾನಾಯಕರೇ, ನಾನು ಆಕ್ಷೇಪ ಮಾಡಿಲ್ಲ. ಕೇವಲ ಫೋಟೋ ಹಾಕಿದ್ದಾರೆ ಎಂದೆನಷ್ಟೇ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಎಂದರೆ. . .

**(ಗೊಂದಲ)**

---

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಹೋಗಲಿ ಬಿಡಿ. ಮತ್ತೆ ಏಕೆ ಚರ್ಚೆ ಮಾಡುತ್ತೀರಿ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಯು.ಬಿ.ವೆಂಕಟೇಶ್‌ರವರ ಬಗ್ಗೆ ನನಗೆ ಯಾವತ್ತೂ ಚರ್ಚೆ ಇಲ್ಲ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ತಾವು ಸರ್ಕಾರದ ಪರವಾಗಿ ಉತ್ತರವನ್ನು ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ದೇಶೀಯ ಪರಂಪರೆಯ ಆಯುರ್ವೇದ ವೈದ್ಯ ಪದ್ಧತಿಗೆ ಮನ್ನಣೆ ದೊರಕಿಸಿಕೊಡಬೇಕೆನ್ನುವುದು ಅವರ ಖಾಸಗಿ ನಿರ್ಣಯದಲ್ಲಿರುವ ವಿಸ್ತೃತವಾದಂತಹ ಅಂಶ ಮತ್ತು ವಿಷಯ. ಇದಕ್ಕೆ ಸೋಮವಾರ ಮಾನ್ಯ ಆರೋಗ್ಯ ಮಂತ್ರಿಗಳಿಂದ ಉತ್ತರವನ್ನು ಕೊಡಿಸುತ್ತೇನೆ.

**ಸಭಾಪತಿಯವರು:-** ಆಯಿತು. ಮಾನ್ಯ ವಿರೋಧ ಪಕ್ಷದ ನಾಯಕರೇ ನೆನ್ನೆಯ ದಿವಸ ತಾವು 28 ನಿಮಿಷ ಮಾತನಾಡಿದ್ದೀರಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನನಗೆ ಎರಡು ಗಂಟೆಗಳ ಕಾಲಾವಕಾಶ ಬೇಕು.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಆಯಿತು. ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

## 8. ನಿಯಮ 68 ರ ಮೇರೆಗೆ ಮುಂದುವರೆದ ಚರ್ಚೆ

**ವಿಷಯ: ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಪ್ರವಾಹ ಮತ್ತು ಅತಿವೃಷ್ಠಿಯಿಂದ ರೈತರ ಬೆಳೆಗಳು ನಾಶವಾಗಿ, ಜಾನುವಾರುಗಳ ಪ್ರಾಣ ಹಾನಿಯಾಗಿ ಸಾರ್ವಜನಿಕ ಆಸ್ತಿಗಳಿಗೆ ಧಕ್ಕೆ ಉಂಟಾಗಿರುವ ಸಮಸ್ಯೆಗಳ ಕುರಿತು.**

- - - - -

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈ ವಿಚಾರ ಒಂದು ತಾಲ್ಲೂಕು ಮತ್ತು ಒಂದು ಜಿಲ್ಲೆಗೆ ಸಂಬಂಧಪಟ್ಟಿರುವುದಲ್ಲ.

(ಮುಂದು)

(1150) ಎಸ್‌ಪಿಆರ್/ಆರ್‌ಎನ್ 1:20 17/12/2021

(ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ನೀವು ಒಂದು ಗಂಟೆಗಳಷ್ಟು ಮಾತನಾಡಿ; ನಾನು ನಿಮಗೆ ಅವಕಾಶ ನೀಡುತ್ತೇನೆ. ನಿನ್ನೆಯ ದಿನ ನೀವು 20 ನಿಮಿಷಗಳೆಂದು ಹೇಳಿ 28 ನಿಮಿಷಗಳಷ್ಟು ಮಾತನಾಡಿದ್ದೀರಿ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು 25 ನಿಮಿಷಗಳ ಕಾಲ ಮಾತನಾಡಿದ್ದೇನೆ.

**ಸಭಾಪತಿಯವರು:-** ನೀವು 28 ನಿಮಿಷಗಳ ಕಾಲ ಮಾತನಾಡಿದ್ದೀರಿ. ನಾನು ಸಮಯವನ್ನು ಗಮನಿಸಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನೂ ಸಹ ಸಮಯವನ್ನು ಗಮನಿಸುತ್ತಿರುತ್ತೇನೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳು – ನಿಯಮ 68 ರಡಿ ನಿನ್ನೆಯ ದಿನ ನಾನು ಸ್ವಲ್ಪ ಸಮಯದವರೆಗೆ ಚರ್ಚಿಸಿದ್ದೇನೆ. ಆದರೆ ಇವತ್ತಿನ ದಿವಸ ...

**ಸಭಾಪತಿಯವರು:-** ನೀವು ಭಾರಿ ಮೊಂಡ ಇದ್ದೀರಿ. ಹೀಗಾಗಿ ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಚಂಡ ಮಾರುತದಿಂದಾಗಿ ಪ್ರಸಕ್ತ ವರ್ಷದ ಮೇ ತಿಂಗಳಿನಿಂದ ಹಿಡಿದು ಡಿಸೆಂಬರ್‌ವರೆಗೆ 31 ಲಕ್ಷ ಎಕರೆಯಷ್ಟು ಭೂಮಿಯಲ್ಲಿ ಬೆಳೆದ ಪೈರು ನಾಶವಾಗಿದೆ. ಇದರ ಜೊತೆಗೆ 35,321 ಮನೆಗಳು ಹಾಳಾಗಿವೆ. ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ Memorandum ನಲ್ಲಿ 11,916.30 ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ ನಿಯಮಾನುಸಾರ 1,281.91 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಕೋರಲಾಗಿದೆ. ಆದರೆ, ಕೇಂದ್ರ ಸರ್ಕಾರವು ಇನ್ನೂ ಪರಿಹಾರ ಮೊತ್ತವನ್ನು ಬಿಡುಗಡೆ ಮಾಡಿಲ್ಲ. ಇದುವರೆವಿಗೆ ಒಂದು ರೂಪಾಯಿಗಳಷ್ಟೂ ಅನುದಾನ ಬಿಡುಗಡೆಗೊಂಡಿರುವುದಿಲ್ಲ. ರಾಜ್ಯದ ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ರಾಮನಗರ, ದಾವಣಗೆರೆ, ಮಂಡ್ಯ, ಮೈಸೂರು, ಚಾಮರಾಜನಗರ ಮುಂತಾದ ದಕ್ಷಿಣ ಒಳನಾಡಿನ ಜಿಲ್ಲೆಗಳು ಅಕ್ಷರಶಃ ಪ್ರವಾಹದ ಪರಿಸ್ಥಿತಿಯನ್ನು ಎದುರಿಸುತ್ತಿವೆ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರು ಸಭಾಪೀಠವನ್ನು ಅಲಂಕರಿಸಿದರು)**

ರಾಜ್ಯದ ಮಲೆನಾಡು ಮತ್ತು ಕರಾವಳಿಗಳ ಪ್ರದೇಶಗಳಲ್ಲಿಯೂ ಸಹ ಬಹಳ ಹಾನಿಯಾಗಿದೆ. ರಾಜ್ಯದ ದಕ್ಷಿಣ ಒಳನಾಡಿನಲ್ಲಾದ ಪರಿಸ್ಥಿತಿಯಂತೆ ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿಯೂ ಸಹ ಹಾನಿಯುಂಟಾಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳಬಯಸುತ್ತೇನೆ. ಸರ್ಕಾರದ ಯಾವ ಮಂತ್ರಿಗಳು ಪ್ರಸ್ತುತ ಸದನದಲ್ಲಿ ಉಪಸ್ತಿತರಿದ್ದಾರೆ? ಹಾಲಿ ಸದನದಲ್ಲಿ ಸಭಾನಾಯಕರು ಮತ್ತು ಶ್ರೀಮತಿ ಶಶಿಕಲಾ ಜೊಲ್ಲೆ ರವರುಗಳು ಮಾತ್ರವೇ ಇದ್ದಾರೆ. ಕನಿಷ್ಠ ಮೂರು ಜನ ಮಂತ್ರಿಗಳಾದರೂ ಸಹ ಸದನದಲ್ಲಿ ಉಪಸ್ಥಿತರಿರಬೇಕಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಪ್ರಸ್ತುತ ನಾವು ಮೂರು ಮಂತ್ರಿಗಳು ಸದನದಲ್ಲಿ ಉಪಸ್ಥಿತರಿದ್ದೇವೆ. ಶ್ರೀ ಎಸ್.ಅಂಗಾರ ರವರು ಸ್ವಲ್ಪ ಗಿಡ್ಡವಾಗಿರುವುದರಿಂದ ಅವರು ನಿಮಗೆ ಕಾಣಿಸಿಲ್ಲ. ಒಟ್ಟು ನಾವು ಮೂರು ಜನ ಇಲ್ಲಿದ್ದೇವೆ. ನೀವು ಪ್ರಸ್ತಾಪಿಸಿದ ಎಲ್ಲಾ ಮಾತುಗಳನ್ನು ನಾವುಗಳು ಬಹಳ ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ಅವರ ಕ್ಷೇತ್ರಕ್ಕೆ ಭೇಟಿ ನೀಡಿದಾಗ ಅವರು ನಮ್ಮ ಬಗ್ಗೆ ಬಹಳ ಕಾಳಜಿಯನ್ನು ವಹಿಸುತ್ತಾರೆ. ಅವರ ಬಗ್ಗೆ ನಮಗೆ ಗೌರವವಿದೆ. ಭತ್ತ ಬೆಳೆದವರ ಪರಿಸ್ಥಿತಿಯು ಬಹಳ ಚಿಂತಾಜನಕವಾಗಿದೆ. ಮಂಡ್ಯ, ಮೈಸೂರು, ಹಾಸನ, ಚಾಮರಾಜನಗರ, ದಾವಣೆಗೆರೆ, ಶಿವಮೊಗ್ಗ, ತುಮಕೂರು, ಉತ್ತರಕನ್ನಡ, ಚಿಕ್ಕಮಗಳೂರು, ದಕ್ಷಿಣಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಬೆಳೆದಿರುವ ಭತ್ತವು ಸಂಪೂರ್ಣವಾಗಿ ನೆಲಕಚ್ಚಿದೆ.

**ಶ್ರೀ ಸಿ.ಎಂ.ಲಿಂಗಪ್ಪ:-** ಮಾನ್ಯ ಸಭಾಪತಿಯವರೇ, ಮೆಣಸಿನಕಾಯಿ ಇದು ಉತ್ತರ ಕರ್ನಾಟಕದ ಪ್ರಮುಖ ಬೆಳೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ದಕ್ಷಿಣ ಕರ್ನಾಟಕದ ಒಳನಾಡಿನ ಭಾಗದ ಬಗ್ಗೆ ಹೇಳುತ್ತಿದ್ದೇನೆ. ಶ್ರೀ ಸಿ.ಎಂ.ಲಿಂಗಪ್ಪರವರು ಪ್ರಸ್ತಾಪಿಸಿದಂತೆ, ತರಕಾರಿ ಬೆಳೆಗಳೂ ಸಹ ಪೂರ್ತಿಯಾಗಿ ಸರ್ವನಾಶಗೊಂಡಿವೆ. ಮುಸುಕಿನ ಜೋಳ ಅಂದರೆ ಗೋವಿನ ಜೋಳದ ಉತ್ಪಾದನೆಯಲ್ಲಿ ಶೇಕಡಾ 60 ರಷ್ಟು ಅಂದರೆ ಬಹಳ ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದೆ. ಅಡಿಕೆ ಬೆಳೆಯು ನಮ್ಮ ಭಾಗದಲ್ಲಿಲ್ಲ. ಅಡಿಕೆಯ ಮೊಳಕೆಯು ಉದುರಿ ಕೆಳಗೆ ಬಿದ್ದಿದೆ.

**ವೈಸ್ ಛೇರ್ಮನ್:-** ನಮ್ಮ ಕಡೆಗಳಲ್ಲಿ ಅದನ್ನು 'ಗೋಟು' ಎಂಬುದಾಗಿ ಹೇಳುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅಡಿಕೆ ಬೆಳೆಯು ಮೊಳಕೆಯೊಡೆದಿದೆ. ಅಡಿಕೆಯ ಗೋಟು ಉದುರಿ ಬಿದ್ದು ಮೊಳಕೆಯಾಗಿದೆ. ಮುಂದುವರೆದು, ಅಡಿಕೆ ಮರಗಳಿಗೆ ಹಳದಿ ಮತ್ತು ಕೊಳೆಗಳಂತಹ ರೋಗಗಳಾವರಿಸಿ, ಅವುಗಳೂ ಸಹ ಸಂಪೂರ್ಣವಾಗಿ ಹಾನಿಗೊಂಡಿವೆ. ವಾಣಿಜ್ಯ ಬೆಳೆಗಳಾದ ಕಾಫೀ ಮತ್ತು ಮೆಣಸು ಇವುಗಳೂ ಸಹ ಸಂಪೂರ್ಣವಾಗಿ ನಾಶಗೊಂಡಿವೆ. 4.9 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ಬೆಳೆದ ಶೇಂಗಾ ಬೆಳೆಯೂ ಸಹ ನಾಶವಾಗಿದೆ. ಬೆಳೆದ ಶೇಂಗಾ ಬೆಳೆಯನ್ನು ರೈತರಿಗೆ ಭೂಮಿಯಿಂದ ಕಿತ್ತುಕೊಳ್ಳಲು ಸಹ ಆಗಲಿಲ್ಲ. ಅವುಗಳೆಲ್ಲವೂ ಫಲಿತವಾಗಿ ಕಿತ್ತಿಕೊಳ್ಳುವ ಹಂತಕ್ಕೆ ಬಂದಿತ್ತು. ಅವುಗಳನ್ನು ಕಿತ್ತುಕೊಳ್ಳಬೇಕೆಂದರೆ, ಅವುಗಳ ಮೇಲಿನ ತೊಪ್ಪಲುಗಳು ಮಾತ್ರವೇ ಕೈಗೆ ಹರಿದುಕೊಂಡು ಬರುತ್ತವೆ. ಬೆಳೆದ ಶೇಂಗಾಗಳು ಭೂಮಿಯಲ್ಲಿಯೇ ಉಳಿದುಕೊಂಡು, ಅಲ್ಲಿಯೇ ಮೊಳಕೆ ಒಡೆದುಬಿಟ್ಟಿವೆ. ಇವುಗಳು ನಾವು ನಿತ್ಯ ಎದುರಿಸುವ ಸಮಸ್ಯೆಗಳಾಗಿವೆ.

ಉತ್ತರ ಕರ್ನಾಟಕ ಭಾಗವನ್ನು ನಾವು 'ತೊಗರಿಯ ಕಣಜ' ಎಂಬುದಾಗಿ ಕರೆಯುತ್ತೇವೆ. ಇಲ್ಲಿನ ತೊಗರಿಯ ಗಿಡಗಳು ಹಸಿರಾಗಿವೆ; ಆದರೆ, ಅವುಗಳಲ್ಲಿನ ಹೂವುಗಳೆಲ್ಲವೂ ಸಹ ಉದುರಿ ಹೋಗಿವೆ. ತೊಗರಿಯೂ ಸಹ ಬಹಳ ದೊಡ್ಡ ಪ್ರಮಾಣದಲ್ಲಿ ಹಾನಿಗೊಂಡಿದೆ. ಈ ಸಂಗತಿಯು ಬೆಳೆಗಳ ಮೌಲ್ಯಮಾಪನದಲ್ಲಿ ಬರುವುದಿಲ್ಲ. ಯಾರೇ ತೊಗರಿ ಗಿಡಗಳನ್ನು ನೋಡಿದರೆ, ಇದು ಚೆನ್ನಾಗಿಯೇ ಇದ್ದು ಯಾವುದೇ ಹಾನಿಯಾಗಿಲ್ಲ ಎಂದು ಹೇಳುತ್ತಾರೆ. ಆದರೆ ಅಲ್ಲಿನ ಹೂವು ಮತ್ತು ಕಾಪು ಇವುಗಳು ಹವಾಮಾನದ ವೈಪರಿತ್ಯದ ಪರಿಣಾಮದಿಂದಾಗಿ ಉದುರಿ ಹೋಗಿವೆ. ಅಲ್ಲಿ ಒಂದು ತೊಗರಿ ಕಾಳೂ ಸಹ ಬೆಳೆಯದಂತಹ ಪರಿಸ್ಥಿತಿಯುಂಟಾಗಿದೆ. ಆದರೆ ಇವರುಗಳು ತೊಗರಿ ಬೆಳೆಯು ಇದೆ; ಅದು ಕಣ್ಣಿಗೆ ಕಾಣುತ್ತಿದೆ ಎಂಬುದಾಗಿ ಮೌಲ್ಯಮಾಪನ ಮಾಡುತ್ತಾರೆ. ಇವರುಗಳು ಈ ಬೆಳೆಯ ಬಗ್ಗೆ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

ಆಳವಾಗಿ ಪರಿಶೀಲಿಸಿ, ಮೌಲ್ಯಮಾಪನ ಮಾಡುವುದಿಲ್ಲ. ಈ ರೀತಿಯಾಗಬಾರದೆಂದು ನಾನು ಹೇಳುತ್ತೇನೆ.

ಕಲ್ಯಾಣ ಕರ್ನಾಟಕದ ಕಿತ್ತೂರು ಭಾಗದ ರೈತರು ಒಂದು ಮಳೆ ಬಂದ ಕೂಡಲೇ, ಅಲ್ಲಿನ ಮೊಳಕೆಯಿರುವ ಪೈರು ಮತ್ತು ಸಣ್ಣ ಸಸಿಗಳೆಲ್ಲವೂ ನಾಶಗೊಂಡಿವೆ. ಭಾರಿ ಪ್ರಮಾಣದಲ್ಲಿ ಮಳೆ ಬಂದಾಗ ಅವುಗಳು ಯಾವುದೂ ಸಹ ಉಳಿಯುವುದಿಲ್ಲ. ಅಲ್ಲಿನ ರೈತರುಗಳೆಲ್ಲರೂ ಎರಡೆರಡು ಬಾರಿ ಬಿತ್ತನೆ ಮಾಡಿದ್ದಾರೆ. ಎರಡನೇ ಬಾರಿ ಮಾಡಿದ ಬಿತ್ತನೆಯೂ ಸಹ ನಾಶವಾಗಿದೆ. ತೊಗರಿ, ಉದ್ದು, ಹೆಸರು, ಸೋಯಾಬಿನ್, ಭತ್ತ, ಜೋಳ ಇವುಗಳು ನಿರಂತರವಾಗಿ ಮಳೆ ಸುರಿದಿದ್ದರಿಂದ ಈ ಗಿಡಗಳನ್ನು ನೋಡುವುದಕ್ಕೂ ಸಿಗದೇ ಇರುವಂತಹ ಪರಿಸ್ಥಿತಿ ಉದ್ಭವಿಸಿದೆ.

2019, 2020 ಮತ್ತು 2021 ನೇ ವರ್ಷಗಳಲ್ಲಿ ಅತಿವೃಷ್ಟಿ ಅಥವಾ ಮಹಾಪೂರದಿಂದ ಹಾನಿಯುಂಟಾಗಿದೆ. 2019ನೇ ವರ್ಷದಿಂದ ಇಲ್ಲಿಯವರೆಗೆ 2.5 ಲಕ್ಷ ಕೋಟಿ ರೂಪಾಯಿಗಳಷ್ಟು ಹಾನಿಯುಂಟಾಗಿದೆ. ಅತಿವೃಷ್ಟಿಯಿಂದ ಸಾಮಾನ್ಯ ಜನರಿಗೆ, ರೈತರಿಗೆ ಮತ್ತು ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಹಾನಿಯುಂಟಾಗಿದೆ. ಒಟ್ಟಾರೆ ಹಾನಿಯ ಮೊತ್ತ 2.5 ಲಕ್ಷ ಕೋಟಿ ರೂಪಾಯಿಗಳಷ್ಟಾಗಿದೆ. ಆದರೆ, ಕೇಂದ್ರ ಸರ್ಕಾರವು ಬಿಡುಗಾಸಿನಷ್ಟು ಪರಿಹಾರ ಮೊತ್ತವನ್ನು ಬಿಡುಗಡೆ ಮಾಡಿದೆ. ಕೇಂದ್ರ ಸರ್ಕಾರವು 2019-20, 2020-21 ನೇ ಸಾಲುಗಳಿಗೆ ಅನುಕ್ರಮವಾಗಿ 1,652 ಮತ್ತು 1,311 ಕೋಟಿ ರೂಪಾಯಿಗಳಷ್ಟು ಪರಿಹಾರ ಮೊತ್ತವನ್ನು ಬಿಡುಗಡೆ ಮಾಡಿದೆ. ಒಟ್ಟಾರೆಯಾಗಿ ಕೇಂದ್ರ ಸರ್ಕಾರವು 2,963 ಕೋಟಿ ರೂಪಾಯಿಗಳಷ್ಟನ್ನು ಮಾತ್ರವೇ ಬಿಡುಗಡೆ ಮಾಡಿದೆ. ಆದರೆ ಅಲ್ಲಿ ವಾಸ್ತವವಾಗಿ 2.5 ಲಕ್ಷ ಕೋಟಿ ರೂಪಾಯಿಗಳಷ್ಟು ಹಾನಿಯುಂಟಾಗಿದೆ. ಆದರೆ ಕೇಂದ್ರ ಸರ್ಕಾರವು ಅಂದಾಜು 3,000 ಕೋಟಿ ರೂಪಾಯಿಗಳಷ್ಟನ್ನು ಮಾತ್ರವೇ ಪರಿಹಾರ ನೀಡಿದೆ. ಇಲ್ಲಿ ಬಹಳಷ್ಟು ಅಂತರವಿದೆ. ವಾಡಿಕೆ ಮಳೆಯ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿರುವುದರಿಂದಲೇ, ಇಂತಹ ಪರಿಸ್ಥಿತಿಯುಂಟಾಗಿದೆ.

ರಾಜ್ಯದ 17 ಜಿಲ್ಲೆಗಳ ಮಳೆಯ ಪ್ರಮಾಣದ ಮಾಹಿತಿಯನ್ನು ನಾನು ಸಂಕ್ಷಿಪ್ತವಾಗಿ ಸದನಕ್ಕೆ ನೀಡುತ್ತೇನೆ. ಬೆಂಗಳೂರು ಗ್ರಾಮಾಂತರದಲ್ಲಿ ವಾಡಿಕೆ ಮಳೆಯ ಪ್ರಮಾಣ 41 ಮಿಲಿ ಮೀಟರ್‌ನಷ್ಟಿದ್ದು, ಆದರೆ ವಾಸ್ತವವಾಗಿ 204 ಮಿಲಿ ಮೀಟರ್‌ನಷ್ಟು ಮಳೆಯಾಗಿದೆ. ಅಂದರೆ ಶೇಕಡಾ 393 ಮಿಲಿ ಮೀಟರ್‌ನಷ್ಟು ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿದೆ. ರಾಮನಗರ ಜಿಲ್ಲೆಯಲ್ಲಿ ವಾಡಿಕೆ ಮಳೆಯ ಪ್ರಮಾಣ 43 ಎಂ.ಎಂ.ನಷ್ಟಿದ್ದು, ವಾಸ್ತವವಾಗಿ 195 ಎಂ.ಎಂ.ನಷ್ಟು ಮಳೆಯಾಗಿದ್ದು, ಅಂದರೆ, ಶೇಕಡಾವಾರು 357 ರಷ್ಟು ಹೆಚ್ಚಿನ ಮಳೆಯಾಗಿದೆ. ಅದೇ ರೀತಿಯಾಗಿ ಕೋಲಾರ ಜಿಲ್ಲೆಯಲ್ಲಿ ವಾಡಿಕೆ ಮಳೆಯು 48 ಎಂ.ಎಂ.ನಷ್ಟಿದ್ದು, ವಾಸ್ತವವಾಗಿ 220 ಎಂ.ಎಂ.ನಷ್ಟು

**"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

---

ಮಳೆಯಾಗಿದ್ದು, ಅಂದರೆ, ಶೇಕಡಾವಾರು 355 ರಷ್ಟು ಹೆಚ್ಚಿನ ಮಳೆಯಾಗಿದೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ವಾಡಿಕೆ ಮಳೆಯು 40 ಎಂ.ಎಂ.ನಷ್ಟಿದ್ದು, ವಾಸ್ತವವಾಗಿ 222 ಎಂ.ಎಂ.ನಷ್ಟು ಮಳೆಯಾಗಿದೆ. ತುಮಕೂರು ಜಿಲ್ಲೆಯಲ್ಲಿ ವಾಡಿಕೆ ಮಳೆಯು 34 ಎಂ.ಎಂ.ನಷ್ಟಿದ್ದು, ವಾಸ್ತವವಾಗಿ 197 ಎಂ.ಎಂ.ನಷ್ಟು ಮಳೆಯಾಗಿದೆ. ಹೆಚ್ಚಿನ ಸಮಯ ಬೇಕಾಗುತ್ತದೆ ಎನ್ನುವ ಕಾರಣಕ್ಕಾಗಿ ನಾನು ಕೆಲವು ಜಿಲ್ಲೆಗಳ ಶೇಕಡಾವಾರು ಮಾಹಿತಿಯನ್ನು ಹೇಳುವುದಿಲ್ಲ. ಚಿತ್ರದುರ್ಗ ಜಿಲ್ಲೆಯಲ್ಲಿ 32 ಎಂ.ಎಂ.ನಷ್ಟು ವಾಡಿಕೆ ಮಳೆಯಾಗಬೇಕಾಗಿದ್ದು, ವಾಸ್ತವವಾಗಿ 103 ಎಂ.ಎಂ.ನಷ್ಟು ಮಳೆಯಾಗಿದೆ. ದಾವಣಗೆರೆ ಜಿಲ್ಲೆಯಲ್ಲಿ 34 ಎಂ.ಎಂ.ನಷ್ಟು ವಾಡಿಕೆ ಮಳೆಯಾಗಬೇಕಾಗಿದ್ದು, ವಾಸ್ತವವಾಗಿ 71 ಎಂ.ಎಂ.ನಷ್ಟು ಮಳೆಯಾಗಿದೆ. ಚಾಮರಾಜನಗರ ಜಿಲ್ಲೆಯಲ್ಲಿ 56 ಎಂ.ಎಂ.ನಷ್ಟು ವಾಡಿಕೆ ಮಳೆಯಾಗಬೇಕಾಗಿದ್ದು, ವಾಸ್ತವವಾಗಿ 192 ಎಂ.ಎಂ.ನಷ್ಟು ಮಳೆಯಾಗಿದೆ. ಮೈಸೂರಿನಲ್ಲಿ 43 ಎಂ.ಎಂ.ನಷ್ಟು ವಾಡಿಕೆ ಮಳೆಯಾಗಬೇಕಾಗಿದ್ದು, ವಾಸ್ತವವಾಗಿ 147 ಎಂ.ಎಂ.ನಷ್ಟು ಮಳೆ ಸುರಿದಿದೆ. ಮಂಡ್ಯದಲ್ಲಿ 40 ಎಂ.ಎಂ.ನಷ್ಟು ವಾಡಿಕೆ ಮಳೆಯಾಗಬೇಕಾಗಿದ್ದು, ವಾಸ್ತವವಾಗಿ 159 ಎಂ.ಎಂ.ನಷ್ಟು ಮಳೆಯಾಗಿದೆ. ಶಿವಮೊಗ್ಗದಲ್ಲಿ 37 ಎಂ.ಎಂ.ನಷ್ಟು ವಾಡಿಕೆ ಮಳೆಯಾಗಬೇಕಾಗಿದ್ದು, ವಾಸ್ತವವಾಗಿ 141 ಎಂ.ಎಂ.ನಷ್ಟು ಮಳೆಯಾಗಿದೆ. ಹಾಸನದಲ್ಲಿ 41 ಎಂ.ಎಂ.ನಷ್ಟು ವಾಡಿಕೆ ಮಳೆಯಾಗಬೇಕಾಗಿದ್ದು, ವಾಸ್ತವವಾಗಿ 167 ಎಂ.ಎಂ.ನಷ್ಟು ಮಳೆಯಾಗಿದೆ. ವಾಡಿಕೆ ಮಳೆಗೂ ವಾಸ್ತವಿಕ ಮಳೆಗೂ ಅಜಗಜಾಂತರವಿದೆ. ಅದೇ ರೀತಿಯಾಗಿ ಚಿಕ್ಕಮಗಳೂರು ಜಿಲ್ಲೆಯಲ್ಲಿ 44 ಎಂ.ಎಂ.ನಷ್ಟು ವಾಡಿಕೆ ಮಳೆಯಾಗಬೇಕಾಗಿದ್ದು, ವಾಸ್ತವವಾಗಿ 158 ಎಂ.ಎಂ.ನಷ್ಟು ಮಳೆಯಾಗಿದೆ. ಕೊಡಗಿನಲ್ಲಿ 55 ಎಂ.ಎಂ.ನಷ್ಟು ವಾಡಿಕೆ ಮಳೆಯಾಗಬೇಕಾಗಿದ್ದು, ವಾಸ್ತವವಾಗಿ 157 ಎಂ.ಎಂ.ನಷ್ಟು ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 81 ಎಂ.ಎಂ.ನಷ್ಟು ವಾಡಿಕೆ ಮಳೆಯಾಗಬೇಕಾಗಿದ್ದು, ವಾಸ್ತವವಾಗಿ 269 ಎಂ.ಎಂ.ನಷ್ಟು ಮಳೆಯಾಗಿದೆ. ಇದು ಶೇಕಡಾ 237 ರಷ್ಟು ಜಾಸ್ತಿಯಾಗಿದೆ. ಉಡುಪಿ ಜಿಲ್ಲೆಯಲ್ಲಿ 58 ಎಂ.ಎಂ.ನಷ್ಟು ವಾಡಿಕೆ ಮಳೆಯಾಗಬೇಕಾಗಿದ್ದು, ವಾಸ್ತವವಾಗಿ 262 ಎಂ.ಎಂ.ನಷ್ಟು ಮಳೆಯಾಗಿದೆ. ಉತ್ತರ ಕನ್ನಡದಲ್ಲಿ 33 ಎಂ.ಎಂ.ನಷ್ಟು ವಾಡಿಕೆ ಮಳೆಯಾಗಬೇಕಾಗಿದ್ದು, ವಾಸ್ತವವಾಗಿ 104 ಎಂ.ಎಂ.ನಷ್ಟು ಮಳೆಯಾಗಿದೆ.

ಮುಂಗಾರಿನಲ್ಲಿ ಬಿತ್ತನೆ ಮಾಡಿದ ಬೆಳೆಗಳಲ್ಲಿ ಅತ್ಯಂತ ಪ್ರಮುಖ ಬೆಳೆಗಳಾದ ರಾಗಿ, ಮುಸುಕಿನ ಜೋಳ, ಭತ್ತ, ಶೇಂಗಾ ಇರಬಹುದು ಹಾಗೂ ತೋಟಗಾರಿಕೆ ಬೆಳೆಗಳಾದ ಅಡಿಕೆ, ಕಾಫೀ, ಮೆಣಸು, ದ್ರಾಕ್ಷಿ, ದಾಳಿಂಬೆ ಮತ್ತು ತರಕಾರಿ ಬೆಳೆಗಳಾದ ಟೊಮ್ಯಾಟೋ ಇತ್ಯಾದಿಗಳು ಯಾವುದೇ ಬೆಳೆಗಳು ಅತಿವೃಷ್ಟಿಯಿಂದ ಉಳಿದಿಲ್ಲ. ದಾಳಿಂಬೆಯನ್ನು ನಮ್ಮ ಭಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಾರೆ. ಅತಿವೃಷ್ಟಿಯಿಂದ ಬೆಳೆಗಳೆಲ್ಲವೂ ಭಾರಿ ಪ್ರಮಾಣದಲ್ಲಿ ಹಾನಿಗೊಳಗಾಗಿವೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

(1151) 1.30 17.12.2021 ಸಿಎಸ್:ಆರ್‌ಎನ್

(ವೈಸ್ ಚೇರ್ಮನ್‌ರವರ ಉಪಸ್ಥಿತಿ)

**ಶ್ರೀ ಎಸ್.ಆರ್.ಪಾಟೀಲ್ (ಮುಂದು)**

ದಕ್ಷಿಣ ಒಳನಾಡಿನಲ್ಲಿ ಪ್ರಮುಖವಾಗಿ, ರಾಗಿ, ಮುಸುಕಿನ ಜೋಳ, ಭತ್ತ, ಶೇಂಗಾ ಕೊಯ್ಲಿಗೆ ಬಂದಿತ್ತು. ಒಂದು ಅಂದಾಜಿನ ಪ್ರಕಾರ 7 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆದಂತಹ ರಾಗಿ ಪೂರ್ತಿ ಹಾಳಾಗಿದೆ. ರಾಗಿ ಒಂದರಿಂದಲೇ ಎಷ್ಟು ಹಾನಿಯಾಗಿದೆ ಎಂದು ಲೆಕ್ಕ ಹಾಕಿದರೆ, ಹುಲ್ಲು ಸೇರಿಸಿ ಅಂದಾಜು ರೂ. 5000 ಕೋಟಿಯಷ್ಟು ಹಾನಿಯಾಗಿದೆ. ಇಷ್ಟೆಲ್ಲಾ ದೊಡ್ಡ ಮೊತ್ತದಷ್ಟು ಹಾನಿಯಾಗಿದ್ದರೂ ಸಹಾ, ಎರಡೂವರೆ ಲಕ್ಷದಷ್ಟು ಹಾನಿಯಾಗಿದ್ದಲ್ಲಿ 3000 ಕೋಟಿ ರೂಪಾಯಿಗಳಿಗಿಂತ ಕಡಿಮೆ ಹಣವನ್ನು ಬಿಡುಗಡೆ ಮಾಡಿದ್ದಾರೆ. ಮಾನ್ಯ ಸಭಾನಾಯಕರು ನಿಮ್ಮ ಯುಪಿಎ ಸರ್ಕಾರಕ್ಕಿಂತ ಹೆಚ್ಚಿಗೆ ಹಣವನ್ನು ಮಾನ್ಯ ನರೇಂದ್ರ ಮೋದಿಯವರ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ ಎಂದು ಹೇಳಿದರು. ಈಗ ಸ್ವಲ್ಪ ಪ್ರಮಾಣದ ಹಣವನ್ನು ಕೊಟ್ಟು, ಏನೋ ದೊಡ್ಡ ಪ್ರಮಾಣದಲ್ಲಿ ಹಣ ನೀಡಿರುವ ಹಾಗೆ ಹೇಳಿಕೊಂಡರೆ ಕೇಂದ್ರ ಸರ್ಕಾರದವರು ಆರಾಮವಾಗಿ ಇರುತ್ತಾರೆ. ಅದಕ್ಕೆ ನೋಡಿ, ನಮಗೆ ಇಷ್ಟು ಹಾನಿಯಾಗಿದೆ, ಅದಕ್ಕೆ ನೀವು ಇಷ್ಟು ಜುಜುಬಿ ಹಣ ನೀಡಿದ್ದೀರಿ ಎಂದು ನಾವು ಹೇಳಬೇಕಲ್ಲವೇ? ಇಲ್ಲದಿದ್ದರೆ ಅವರು ನಾವು ಬಾರಿ ಹಣ ನೀಡಿದ್ದೇವೆ, ಹಿಂದೆ ಕೇಂದ್ರ ಸರ್ಕಾರದಲ್ಲಿದ್ದ ಡಾ||ಮನಮೋಹನ್ ಸಿಂಗ್‌ರವರ ಸರ್ಕಾರಕ್ಕಿಂತಲೂ ಸಹ ಹೆಚ್ಚಿನ ಹಣವನ್ನು ನೀಡಲಾಗಿದೆ ಎಂದು ಹೇಳುತ್ತಿದ್ದಾರೆ. ಇದನ್ನೆಲ್ಲ ಬಿಟ್ಟು ಬಹಳ ಚೆನ್ನಾಗಿ ಕೊಟ್ಟಿದ್ದೇವೆ ಎಂದರೆ ಮುಗಿಯಿತು. ಮಗು ಅತ್ತರೆ ತಾಯಿ ಹಾಲು ಕೊಟ್ಟೆ ಕೊಡುತ್ತಾಳೆ. ನಮಗೆ ನೀಡಿರುವ ಹಣ ಕಡಿಮೆ ಆಗಿದೆ ಎಂದಾದರೂ ಹೇಳಿ, protest ಮಾಡಬೇಕು, ಇಲ್ಲಪ್ಪಾ ನಾವು protest ಮಾಡುವುದಿಲ್ಲ ಎಂದರೆ ಸನ್ಮಾನ್ಯ ನರೇಂದ್ರ ಮೋದಿಯವರು ನಾವು ಸಂತೃಪ್ತಿಯಿಂದ ಇದ್ದೇವೆ ಎಂದು ಹೇಳುತ್ತಾರೆ, ಸರ್ಕಾರ ನಡೆಸುತ್ತಿರುವವರು ನೇರವಾಗಿ ಹೋಗಿ, ಪ್ರದಾನಿಗಳ ಬಳಿ ನಮ್ಮ ರಾಜ್ಯದ ಪರವಾಗಿ ಕೇಳಿಕೊಳ್ಳಬೇಕು. ಏಕೆಂದರೆ 25 ಜನ ಎಂಪಿ ಗಳನ್ನು ನಮ್ಮ ರಾಜ್ಯದಿಂದ ಕೇಂದ್ರಸರ್ಕಾರಕ್ಕೆ ಆರಿಸಿ ಕೊಟ್ಟಿದ್ದೇವೆ. ಯುಪಿಎ ಸರ್ಕಾರ ಇದ್ದಾಗ ಕರ್ನಾಟಕದಲ್ಲಿ ಪೆಟ್ರೋಲ್ ಡೀಸಲ್ ನಿಂದ 3-4 ಸಾವಿರ ಕೋಟಿ ರೂಪಾಯಿಗಳನ್ನು ಕಲೆಕ್ಟ್ ಮಾಡಲಾಗುತ್ತಿತ್ತು. ಈಗ ಪೆಟ್ರೋಲ್ ಡೀಸಲ್ ನಿಂದ ವರ್ಷಕ್ಕೆ 35 ಕೋಟಿ ರೂಪಾಯಿಗಳನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಈಗ ನಮ್ಮ ರಾಜ್ಯದಿಂದ ಹೆಚ್ಚಿಗೆ ಹಣ ಹೋಗುತ್ತಿದೆ. 2013-14ನೇ ಸಾಲಿನಲ್ಲಿ ಡಾ||ಮನಮೋಹನ ಸಿಂಗ್‌ರವರು ಪ್ರಧಾನಿಯಾಗಿದ್ದ ಯುಪಿಎ ಸರ್ಕಾರ ಇದ್ದ ಕೊನೆಯ ವರ್ಷದಲ್ಲಿ 16.65 ಲಕ್ಷ ಕೋಟಿಗಳ ಬಜೆಟ್ ಗಾತ್ರವಿತ್ತು. ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ಎನ್‌ಡಿಎ ಸರ್ಕಾರದ 2020-21ರ ಬಜೆಟ್ ಗಾತ್ರ 34.83 ಲಕ್ಷ ಕೋಟಿ ರೂಪಾಯಿಗಳಿವೆ. ಈಗ ನಮ್ಮ ರಾಜ್ಯದಲ್ಲಿ ಎರಡೂವರೆ ಲಕ್ಷ ಕೋಟಿಯಷ್ಟು ಹಾನಿಯಾದಾಗ 2963 ಕೋಟಿ ರೂಪಾಯಿಗಳ ಪರಿಹಾರ ನೀಡಿದರೆ ಬಕಾಸುರನ ಹೊಟ್ಟೆಗೆ ಒಂದು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಹಿಡಿ ಅನ್ನವನ್ನು ಹಾಕಿದ ಹಾಗಾಗುತ್ತದೆ. ಇದು ಒಂದಕ್ಕೊಂದು ಸಂಬಂಧ ಇಲ್ಲ ಸೂತ್ರ ಇಲ್ಲ. ಇದನ್ನೇ ಒಂದು ಸಾಧನೆ ಎಂದು ನಮ್ಮ ಸಭಾನಾಯಕರು ಹೇಳುತ್ತಾರೆ. ಈಗ ಪರಿಸ್ಥಿತಿ ಬಹಳ ಕೈ ಮೀರಿದೆ. ಈ ವರ್ಷದ್ದು ಒಂದೇ ನೋಡಿದರೂ ಸಹ ಯುದ್ಧೋಪಾದಿಯಲ್ಲಿ ಹಾನಿಯ ಸಮೀಕ್ಷೆಯನ್ನು ಮಾಡಬೇಕಾಗುತ್ತದೆ. ಯಾವ ರೈತರು ಹಾನಿಗೆ ಒಳಗಾಗಿದ್ದಾರೆ, ಮನೆಗಳನ್ನು ಕಳೆದುಕೊಂಡಿದ್ದಾರೆ, ಇವರಿಗೆ ಪರಿಹಾರವನ್ನು ನೀಡಬೇಕಾಗುತ್ತದೆ. ಈ ರಾಜ್ಯದ ಜನರನ್ನು ಸಂಕಷ್ಟದಿಂದ ಪಾರು ಮಾಡುವ ಜವಾಬ್ದಾರಿ ಈ ಸರ್ಕಾರಕ್ಕೆ ಇಲ್ಲವೇ? ಏನು NDRF norms ಇದೆ, ಅದರ ಪ್ರಕಾರ ಪರಿಹಾರ ಕೊಡಿ. Once for all ರೈತರು 5-6 ವರ್ಷಗಳು ಕಳೆದರೂ ಸಹ ಸುಸ್ಥಿತಿಗೆ ಬರುವುದಿಲ್ಲ. NDRF & SDRF ನಾರ್ಮ್ಸ್ ಪ್ರಕಾರ ೧೦ ಎಕರೆಯ ಬೆಳೆ ಹಾಳಾದರೆ 2 ಎಕರೆಗೆ ಪರಿಹಾರ ಕೊಡುತ್ತೇವೆ ಎಂದರೆ ಉಳಿದ 8 ಎಕರೆಯ ಗತಿಯೇನು? ಇದಕ್ಕೆ ಏನು ಮಾಡಬೇಕು? ಅದರಲ್ಲಿಯೂ 33% ಹಾನಿಯಾಗಿರಬೇಕೆಂದು ಹೇಳುತ್ತಾರೆ. 33% ಹಾನಿಯಾಗಿಲ್ಲ ಅಂದರೆ ಪರಿಹಾರ ಇಲ್ಲ. ಈ ವಿಚಾರವಾಗಿ ಸರ್ಕಾರಕ್ಕೆ ನನ್ನ ಸಲಹೆ ಏನೆಂದರೆ NDRF & SDRF Norms ಇರಲಿ. ಒಟ್ಟು ಎಷ್ಟು ಹೆಕ್ಟೇರ್ ಹಾನಿಯಾಗಿದೆ, ಅದಕ್ಕೆ ರಾಜ್ಯದ ಬೊಕ್ಕಸದಿಂದ ಪರಿಹಾರವನ್ನು ನೀಡುವುದಕ್ಕೆ ಯಾವುದೇ ಸಮಸ್ಯೆ ಇಲ್ಲ. ಹೆಚ್ಚಿಗೆ ಪರಿಹಾರ ನೀಡಿದರೆ ಯಾರು ಬೇಡ ಎಂದು ಹೇಳುತ್ತಾರೆ. ರಾಜ್ಯ ಸರ್ಕಾರದವರು ಈ ರಾಜ್ಯದ ರೈತರ ಬಗ್ಗೆ ಚಿಂತನೆ ಮಾಡುವವರು ರೈತರಿಗೆ ಹೆಚ್ಚಿಗೆ ಪರಿಹಾರವನ್ನು ನೀಡಿದರೆ ಒಳ್ಳೆಯದಲ್ಲವೇ? ರಾಜ್ಯದ ಜನರು ನಿಮ್ಮನ್ನು ನೆನಸಿಕೊಳ್ಳುತ್ತಾರೆ.

ಡಾ||ಮನಮೋಹನ ಸಿಂಗ್ ರವರ ಸರ್ಕಾರ ಇದ್ದಾಗ ಎಷ್ಟು ಎಕರೆ ಬೆಳೆ ಹಾಳಾಗಿದೆ, ಮತ್ತು ಮಾನ್ಯ ನರೇಂದ್ರ ಮೋದಿಯವರ ಸರ್ಕಾರದಲ್ಲಿ ಎಷ್ಟು ಎಕರೆ ಭೂಮಿಯ ಬೆಳೆ ಹಾಳಾಗಿದೆ ಎಂದು ಲೆಕ್ಕ ಹಾಕಿದರೆ ಮಾನ್ಯ ಮೋದಿಯವರು ಅಧಿಕಾರಕ್ಕೆ ಬಂದಮೇಲೆ 547.62 ಲಕ್ಷ ಎಕರ ಭೂಮಿಯಲ್ಲಿ ಬೆಳೆ ಹಾಳಾಗಿದೆ. ಮಾನ್ಯ ಮನಮೋಹನ ಸಿಂಗ್‌ರವರು ಅಧಿಕಾರದಲ್ಲಿದ್ದಾಗ 2008-2009 ರಿಂದ 2013-2014ರವರೆಗೆ 283 ಲಕ್ಷ ಎಕರೆ ಭೂಮಿಯ ಬೆಳೆ ಹಾಳಾಗಿದೆ. ಅದು ಹೆಚ್ಚು ಕಡಿಮೆ ಡಬಲ್ ಆಗಿದೆ. ರಾಜ್ಯದ ಒಟ್ಟಾರೆ ನಷ್ಟ, ಇದೇ 2 ತಿಂಗಳಿನಲ್ಲಿ ಅಂದರೆ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಿನಲ್ಲಿ 11,916 ಕೋಟಿ. ಇದರಲ್ಲಿ 19,366 ಕಿ.ಮೀ ರಸ್ತೆ ಹಾಳಾಗಿದೆ, ಜುಲೈ, ಆಗಸ್ಟ್ ತಿಂಗಳು ಸೇರಿಸಿದರೆ ಇದೇ ವರ್ಷದಲ್ಲಿ 43000 ಕಿ.ಮೀ ರಸ್ತೆ ಹಾಳಾಗಿದೆ. 20083 ಮನೆಗಳು , ಒಟ್ಟು ಮನೆಗಳು 35331 ಇದೇ ವರ್ಷದಲ್ಲಿ ಹಾಳಾಗಿವೆ. ನಮ್ಮ ರಾಜ್ಯದ 31 ಜಿಲ್ಲೆಯಲ್ಲಿ 23 ಜಿಲ್ಲೆ ಅತಿವೃಷ್ಟಿಯನ್ನು ಎದುರಿಸಿವೆ. 2/3 ಆಗಿದೆ. ಇನ್ನೂ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಿನಲ್ಲಿ harvesting season. Harvesting ಸಂದರ್ಭದಲ್ಲಿ ಮಳೆ ಆದರೆ ಕೈಯಿಗೆ ಬಂದ ತುತ್ತು ಬಾಯಿಗೆ ಬರದ ಹಾಗಾಗುತ್ತದೆ. ನಮ್ಮ ಹಳ್ಳಿಗಳಲ್ಲಿ ಬೆಳೆ ಚೆನ್ನಾಗಿ ಬಂದಿದೆ ಎಂದು ಖುಷಿಯಿಂದ ರೈತ ಇರುತ್ತಾನೆ, last minute harvest ಮಾಡುವ ಸಂದರ್ಭದಲ್ಲಿ heavy rainfall ಆದರೆ ಕೈಯಿಗೆ ಬಂದ ತುತ್ತು ಬಾಯಿಗೆ ಬರದ

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

ಪರಿಸ್ಥಿತಿ ನಿರ್ಮಾಣ ಆಗಿದೆ. ಒಬ್ಬ ತಜ್ಞರು ನೀಡಿದ ಹೇಳಿಕೆಯ ಪ್ರಕಾರ ಕಳೆದ 60 ವರ್ಷದಲ್ಲಿ ಇಂತಹ ಮಳೆ ಆಗಿಲ್ಲ. ಅಷ್ಟು ದೊಡ್ಡ ಪ್ರಮಾಣದಲ್ಲಿ ಮಳೆ ಆಗಿದೆ. ಹವಮಾನ ತಜ್ಞರು ಕೂಡ ಎಚ್ಚರಿಕೆ ನೀಡಿ, ಮುಂದಿನ ದಿನಗಳಲ್ಲಿ ಮಳೆಯ ಪ್ರಮಾಣ ತೀವ್ರವಾಗಿ ಹೆಚ್ಚಾಗುತ್ತದೆ ಎಂದು ಹೇಳಿದ್ದಾರೆ. ಇದಕ್ಕೆ ಬೇಕಾದ ತಯಾರಿಯನ್ನು ಸರ್ಕಾರ ಮಾಡಿಕೊಳ್ಳಬೇಕಲ್ಲವೇ? ತಜ್ಞರ ವರದಿಯನ್ನು ನಾವು ನಿಲಕ್ಷ್ಯ ಮಾಡುವುದಕ್ಕೆ ಆಗುವುದಿಲ್ಲ. ನಿರೀಕ್ಷೆ ಮಾಡದಷ್ಟು ಮಳೆಯಾಗುತ್ತದೆ ಎಂದು ಹೇಳಿದಾಗ ಅದಕ್ಕೆ ಅಗತ್ಯ ಮುನ್ನಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕಲ್ಲವೇ? ಆದರೆ ಸರ್ಕಾರ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ತಜ್ಞರು ವರದಿ ಮಾಡಿದ್ದು ಪತ್ರಿಕೆಗಳಲ್ಲಿ ವರದಿಯಾಯಿತು. ದೂರದರ್ಶನದಲ್ಲಿ ಪ್ರಸಾರವಾಯಿತು. ಅಲ್ಲಿಗೆ ಮುಗಿಯಿತು. ಸರ್ಕಾರ ಈ ಬಗ್ಗೆ ಎಚ್ಚೆತ್ತುಕೊಂಡು ಕ್ರಮ ಕೈಗೊಳ್ಳಬೇಕಾಗಿತ್ತಲ್ಲವೇ?

ಕೃಷಿ ವಿಶ್ವವಿದ್ಯಾನಿಲಯಗಳಾದರೂ ರೈತರ ನೆರವಿಗೆ ಬರಬೇಕಲ್ಲವೇ? ನಮ್ಮ ಬಾಗಲಕೋಟೆಯಲ್ಲಿ ತೋಟಗಾರಿಕಾ ಕೃಷಿ ವಿಶ್ವವಿದ್ಯಾನಿಲಯ ಇದೆ. ಅವರು ಇಂತಹ ಪರಿಸ್ಥಿತಿ ಬಂದಾಗ adverse climate ಇದ್ದಾಗ ರೈತರ ಸಹಾಯಕ್ಕೆ ಬರಬೇಕಲ್ಲವೇ?

ಈಗ ನೀವು ಸಹ ದ್ರಾಕ್ಷಿ ಬೆಳೆಗಾರರು, ದ್ರಾಕ್ಷಿ ಬೆಳೆಯ ಪರಿಸ್ಥಿತಿ ಏನಾಗಿದೆ, ಈ ಬೆಳೆಗೆ ಭಯಾನಕ Downy mildew and Powdery mildew ಎಂದು ಎರಡು ವ್ಯಾದಿಗಳು ಬರುತ್ತವೆ. Because of adverse climate ಇವತ್ತು 25 ಟನ್ ದ್ರಾಕ್ಷಿ ಬೆಳೆಯುತ್ತಿದ್ದವರಿಗೆ 25 ಕೆ.ಜಿ ದ್ರಾಕ್ಷಿಯನ್ನು ಬೆಳೆಯಲಾಗದ ಸ್ಥಿತಿಯಲ್ಲಿದ್ದಾರೆ.

(ಮುಂದು)

(1152)/1-40/17-12-2021/ಎಲ್‌ಎಂ/ಎಂಡಿ

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಈ flowering ಸಮಯದಲ್ಲಿ ಮಳೆಯಾಗಿಬಿಟ್ಟರೆ ದ್ರಾಕ್ಷಿ ಬೆಳೆ ಏನು ಬರುವುದಿಲ್ಲ. ನಾವು ಕೇವಲ ದ್ರಾಕ್ಷಿ ಬೆಳೆಯನ್ನಷ್ಟೇ ನೋಡಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಕೃಷಿ ವಿಶ್ವವಿದ್ಯಾನಿಲಯಗಳು, ತೋಟಗಾರಿಕಾ ವಿಶ್ವವಿದ್ಯಾನಿಲಯಗಳು, they should rush to the rescue of the farmers. ಇದರ ಬಗ್ಗೆ ರೈತರಿಗೆ ಮಾರ್ಗೋಪಾಯಗಳನ್ನು ಹೇಳಬೇಕು, ಬೆಳೆಯನ್ನು ಹೇಗೆ ರಕ್ಷಿಸಿಕೊಳ್ಳಬೇಕು ಎನ್ನುವ ಮಾಹಿತಿಯನ್ನು ನೀಡಬೇಕು. ಬೆಳೆಗಳಿಗೆ ಬರುವ disease, pest ಬಗ್ಗೆ ತಕ್ಷಣ ಅವರು ಸ್ಪಂದಿಸಬೇಕು. ನಾವೆಲ್ಲ ಗ್ರಾಮಗಳಲ್ಲಿ ಬೆಳೆದವರು, ನಮ್ಮಲ್ಲಿ ಹನಮಂತ ದೇವರು, ದುರ್ಗವ್ವ, ದ್ಯಾಮವ್ವ, ಲಕ್ಕವ್ವ ದೇವರಗಳ ಗುಡಿಗಳು ಇರುತ್ತವೆ. ರೈತರು ಬೆಳಗ್ಗೆ ಎದ್ದ ತಕ್ಷಣ ಸ್ನಾನ ಮಾಡಿ ಊದ್ದಿನಕಡ್ಡಿ ತೆಗೆದುಕೊಂಡು ಹೋಗಿ ದೇವರಿಗೆ ಹಚ್ಚಿ ನಮಸ್ಕಾರ ಮಾಡಿಕೊಂಡು ಬರುತ್ತಾರೆ. ಆದರೆ ನನ್ನ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದೃಷ್ಟಿಯಲ್ಲಿ ರೈತರಿಗೆ ಮಂದಿರಗಳು ಎಂದರೆ ಈ ಎರಡು ವಿಶ್ವವಿದ್ಯಾನಿಲಯಗಳು. ಅಲ್ಲಿ ಇರುವ ದೇವರು ಎಂದರೆ, ವಿಜ್ಞಾನಿಗಳು. ಅವರು ನಮ್ಮ rescue ಗೆ ಬಂದರೆ ಏನಾದರೂ ಪರಿಹಾರಗಳನ್ನು ಕಂಡುಕೊಳ್ಳಬಹುದು. ಬೆಳಗ್ಗೆ ಎದ್ದು ಹನಮಂತ ದೇವರಿಗೆ ನಮಸ್ಕಾರ ಮಾಡುವ ಬದಲು ಕೃಷಿ ವಿಶ್ವವಿದ್ಯಾನಿಲಯಗಳಿಗೆ ನಮಸ್ಕಾರ ಮಾಡಬೇಕು. ಇವೆ ನಮ್ಮ ದೇವಾಲಯಗಳು. They are the real temples. ಅಲ್ಲಿ ಇರುವ ವಿಜ್ಞಾನಿಗಳು highly qualified ಇರುತ್ತಾರೆ. ನಮಗೆ ಅನುಭವ ಮತ್ತು ತಿಳುವಳಿಕೆ ಎರಡೂ ಕಡಿಮೆ ಇರುತ್ತದೆ. ಏನಾಯಿತು ಇದು ಎಂದು ತಲೆ ಮೇಲೆ ಕೈಹೊತ್ತುಕೊಂಡು ಕೂಡುವುದಷ್ಟೆ ನಮ್ಮ ಕೆಲಸವಾಗಿದೆ. ಆದ್ದರಿಂದ ವಿಶ್ವವಿದ್ಯಾನಿಲಯಗಳು ಸಹಾಯ ಮಾಡಬೇಕು. ಅದೇ ರೀತಿ ಮಂತ್ರಿಗಳು ಈ ವಿಶ್ವವಿದ್ಯಾನಿಲಯಗಳ ಮೇಲೆ ನಿಗಾ ಇಟ್ಟು what is your contribution ಎಂದು ಕೇಳಬೇಕು. ಇವತ್ತು ಬೆಳಗ್ಗೆ ಮಾನ್ಯ ಸದಸ್ಯರಾದ ಸಾಬಣ್ಣನವರು ೧೫೦ ಕೋಟಿ ರಾಣಿ ಚೆನ್ನಮ್ಮ... ಅದನ್ನು ನಾವು ಸ್ವಾಗತ ಮಾಡುತ್ತೇವೆ. Men and material ಸರ್ಕಾರ ಕೊಡುತ್ತದೆ. ಆದರೆ ಅದಕ್ಕೆ ತಕ್ಕಹಾಗೆ result ಕೂಡಾ ಬರಬೇಕು. ಏನೂ ಕೆಲಸ ಮಾಡದೆ ಇದ್ದರೆ ವಿಶ್ವವಿದ್ಯಾನಿಲಯಗಳು ಏಕೆ ಇರಬೇಕು. ೨೦೧೯ರಿಂದ ಪ್ರತಿ ವರ್ಷ ಪ್ರವಾಹ ಮತ್ತು ಅತಿವೃಷ್ಟಿಯಿಂದ ರಾಜ್ಯದಲ್ಲಿ ೩.೩೧.೩೭೩ ಮನೆಗಳು ಬಿದ್ದಿವೆ. ಆದರೆ ಇದಕ್ಕಿಂತ ದುಪ್ಪಟ್ಟು ಮನೆಗಳು ಬಿದ್ದಿವೆ. ಆದರೆ ನಾನು ಸರ್ಕಾರ ಕಳುಹಿಸಿದ memorandum ಪ್ರಕಾರ ಹೇಳುತ್ತಿದ್ದೇನೆ. ಮೂರು ವರ್ಷದ ಹಿಂದೆ ಇಷ್ಟೊಂದು ಮನೆಗಳು ಹಾನಿಯಾಗಿದೆ. ಅದಕ್ಕೆ ಹದಿನಾರು ಸಾವಿರದ ಇನ್ನೂರಾ ಹತ್ತೊಂಭತ್ತು ಕೋಟಿ ರೂಪಾಯಿಗಳ ಹಾನಿಯಾಗಿದೆ ಎಂದು memorandum ನಲ್ಲಿ ಹೇಳಿದ್ದಾರೆ. ಆದರೆ ನಮ್ಮ ಸರ್ಕಾರ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ memorandum ನಲ್ಲಿ ೨೦೧೯ರಲ್ಲಿ ೨.೪೭,೬೨೮ ಮನೆಗಳು ಪ್ರವಾಹದಿಂದ ಹಾನಿಯಾಗಿವೆ ಎಂದು ತಿಳಿಸಿದ್ದಾರೆ. ಸರ್ಕಾರಿ ಲೆಕ್ಕದ ಪ್ರಕಾರ ಹಾನಿ ಮೊತ್ತ ೯,೬೨೨ ಕೋಟಿ ರೂಪಾಯಿಗಳು. ಆದರೆ ಪರಿಹಾರ ಕೊಟ್ಟಿರುವುದು ೨.೨೯ ಕೋಟಿ ರೂಪಾಯಿಗಳಷ್ಟು. ಇದು ನಾನು ಮಾಹಿತಿ ಸಂಗ್ರಹ ಮಾಡಿರುವ ಪ್ರಕಾರ. ೨೦೨೦ನೇ ಸಾಲಿನಲ್ಲಿ ಮೂರು ಹಂತದಲ್ಲಿ ಅಂದರೆ ಮೇ, ಜುಲೈ, ಅಕ್ಟೋಬರ್, ನವೆಂಬರ್‌ನಲ್ಲಿ ಈ ಪ್ರವಾಹದಿಂದ ಒಟ್ಟು ೪೮,೪೨೪ ಮನೆಗಳು ತೀವ್ರ ಹಾನಿಗೊಳಗಾಗಿವೆ, ೪೬೬ ಕೋಟಿ ರೂಪಾಯಿಗಳಷ್ಟು ನಷ್ಟ ಸಂಭವಿಸಿದೆ ಎಂದು ಕೇಂದ್ರಸರ್ಕಾರಕ್ಕೆ memorandum ಸಲ್ಲಿಸಿದ್ದಾರೆ. ಆದೆ ಪರಿಹಾರ ನೀಡಿರುವುದ ಕೇವಲ ೧೯೨ ಕೋಟಿ ರೂಪಾಯಿಗಷ್ಟು. ಇಷ್ಟೊಂದು ಬೃಹದಾಕಾರದ ಹಾನಿಯಾಗಿದೆ. NDRF (National Disaster Response Fund) and SDRF (State Disaster Response Fund) norms ಪ್ರಕಾರ ಕೇಂದ್ರಕ್ಕೆ ಮನವಿ ಕಳುಹಿಸಿದ್ದಾರೆ. ಇವರು ಕಳುಹಿಸಿದಷ್ಟು ಪರಿಹಾರವನ್ನು ಕೊಟ್ಟರೂ ಪರಿಹಾರಕ್ಕಾಗಿ ಹಣ ಸಾಕಾಗುವುದಿಲ್ಲ. ಆದರೆ ಈ ಸರ್ಕಾರ ಕೊಟ್ಟಿರುವುದು ಕೇವಲ ೧೯೨ ಕೋಟಿ ರೂಪಾಯಿಗಳ ಪರಿಹಾರ ಮಾತ್ರ. ೨೦೨೧ರಲ್ಲಿ *Tauktae* ಚಂಡಮಾರುತ ನಂತರ ಜುಲೈ ತಿಂಗಳಲ್ಲಿ ಭೀಕರ ಪ್ರವಾಹ ಈ ಪ್ರವಾಹದಲ್ಲಿ ೧೫,೨೩೮ ಮನೆಗಳಿಗೆ ಧಕ್ಕೆ ಉಂಟಾಗಿದೆ. ಈ ಮನೆಗಳಿಗೆ ಒಂದು ರೂಪಾಯಿಯ

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಪರಿಹಾರವನ್ನು ಕೊಟ್ಟಿರುವುದಿಲ್ಲ. ಅಕ್ಟೋಬರ್, ನವೆಂಬರ್‌ನಲ್ಲಿ ೨೦,೦೮೩ ಮನೆಗಳಿಗೆ ಹಾನಿಯಾಗಿದೆ. *Memorandum* ಕಳುಹಿಸಿದ್ದಾರೆ. ಆದರೆ ೧೦ ಪೈಸೆಯು ಬಂದಿರುವುದಿಲ್ಲ. ೨೦೨೧ನೇ ಸಾಲಿನಲ್ಲಿ ಮನೆಗಳು ಹಾನಿಗೊಳಗಾಗಿವೆ, ಸಾರ್ವಜನಿಕ ಆಸ್ತಿ -ಪಾಸ್ತಿ ಕೊಚ್ಚಿಕೊಂಡು ಹೋಗಿದೆ, ಬೆಳೆ ಹಾನಿಯಾಗಿದೆ. ಒಂದು ರೂಪಾಯಿಯ ಪರಿಹಾರಧನವು ಬಂದಿರುವುದಿಲ್ಲ. ಈ ಸಂದರ್ಭದಲ್ಲಿ ಎಷ್ಟು ಸಾಧ್ಯವಿದೆ ಅಷ್ಟು ತಿರುಗಾಡಿ ನೋಡಿದ್ದೇನೆ. ಅಲ್ಲಿಯ ಪರಿಸ್ಥಿತಿಯನ್ನು ನೋಡುವ ಹಾಗೆ ಇಲ್ಲ.

( **ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು**)

ಮೂರು ವರ್ಷದಲ್ಲಿ ಹಾನಿಯಾದ ಬೆಳೆಯ ಪ್ರಮಾಣ ೯೩.೫೨ ಲಕ್ಷ ಎಕರೆಯಷ್ಟು ಮೂರು ವರ್ಷದಲ್ಲಿ ಅಂದಾಜು ೧.೭೫ ಕೋಟಿ ರೂಪಾಯಿಗಳಷ್ಟು ಬೆಳೆ ಹಾನಿಯಾಗಿದೆ. ಸರ್ಕಾರದವರು ೨ ಹೆಕ್ಟೇರ್‌ಗೆ ಮತ್ತು ೩೩% ಬೆಳೆ ಹಾನಿಯಾಗಿದ್ದರೆ ಮಾತ್ರ ಬೆಳೆ ಪರಿಹಾರವನ್ನು ಕೊಡುತ್ತಾರೆ. ಬೆಳೆ ಹಾನಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ಕಳುಹಿಸಿರುವ *memorandum* ನಲ್ಲಿ, ಎರಡು ಎಕರೆಗೆ ಪರಿಹಾರ ಕೊಡಲಾಗುತ್ತದೆ ಎನ್ನುವ ಕಾನೂನಿನ ಪ್ರಕಾರ, NDRF norms ಪ್ರಕಾರ ಮೂರು ವರ್ಷದಲ್ಲಿ ೩೮,೦೦೦ ಕೋಟಿ ರೂಪಾಯಿಗಳಷ್ಟು ಬೆಳೆ ಹಾನಿಯಾಗಿದೆ ಎಂದು ಸರ್ಕಾರ ಹೇಳಿದೆ. ಆದರೆ ಇದುವರೆಗೆ ಬೆಳೆ ಪರಿಹಾರಕ್ಕೆ ಬಂದ ಹಣ ೨,೧೩೯.೮೫ ಕೋಟಿ ರೂಪಾಯಿಗಳು ಮಾತ್ರ. ಅತಿವೃಷ್ಟಿ ಮತ್ತು ಅನಾವೃಷ್ಟಿ ಸಮಯದಲ್ಲಿ ನಮ್ಮ ರಾಜ್ಯಕ್ಕೆ ಪರಿಹಾರವನ್ನು ಕೊಡುವಲ್ಲಿ ನಮಗೆ ವಂಚನೆಯಾಗಿದೆ ಎಂದು ಹೇಳಿದರೂ ತಪ್ಪಾಗುವುದಿಲ್ಲ. ಸರ್ಕಾರದ ಆಸ್ತಿ-ಪಾಸ್ತಿಗೆ ಸಂಬಂಧಿಸಿದ ಹಾಗೆ ೨೦೧೯/೨೦೨೦ ಮತ್ತು ೨೦೨೧ನೇ ಸಾಲಿನಲ್ಲಿ ೧೯.೪೩೩.೮ ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆ. ಇದು ಸರ್ಕಾರದ ಆಸ್ತಿ ಅದರಲ್ಲಿ ಶಾಲೆಗಳು, ಅಂಗನವಾಡಿ ಕೇಂದ್ರ ಇತ್ಯಾದಿ ಎಲ್ಲವು ಬರುತ್ತವೆ. ಈ ವಿಚಾರವಾಗಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದ memorandum ನಲ್ಲಿ ಮೂರು ಬಾಬ್ತು ಸೇರಿದೆ.

**ಸಭಾಪತಿಯವರು**:- ಮಾನ್ಯ ವಿರೋಧ ಪಕ್ಷದ ನಾಯಕರೆ ತಮಗೆ ಇನ್ನು ಎಷ್ಟು ಸಮಯ ಬೇಕು?

**ಶ್ರೀ ಎಸ್.ಆರ್.ಪಾಟೀಲ್:-** ನಾನು ಈಗ ಪ್ರಾರಂಭ ಮಾಡಿದ್ದೇನೆ.

**ಸಭಾಪತಿಯವರು**:- ೧ ಗಂಟೆ ೨೦ ನಿಮಿಷಕ್ಕೆ ನೀವು ಮಾತನಾಡಲು ಪ್ರಾರಂಭ ಮಾಡಿದ್ದೀರಿ. ನಾನು ಸಮಯವನ್ನು ಬರೆದುಕೊಂಡಿದ್ದೇನೆ. ಈಗ ಬೇಗನೆ ಮುಕ್ತಾಯ ಮಾಡಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಗಳೆ, ಒಬ್ಬ ವ್ಯಕ್ತಿಯ ಬಗ್ಗೆ ಎರಡು ದಿನಗಳವರೆಗೆ ಸದನವನ್ನು ನಡೆಸುತ್ತೀರಿ.

**ಸಭಾಪತಿಯವರು**:- ಮಾತನಾಡಿ ನಮ್ಮದೇನು ತಕರಾರು ಇಲ್ಲ. ಆದರೆ....

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ಇಡೀ ಕರ್ನಾಟಕ ರಾಜ್ಯದ ೩೧ ಜಿಲ್ಲೆಗಳ ಪೈಕಿ ೨೩ ಜಿಲ್ಲೆಗಳಲ್ಲಿ ಲಕ್ಷಾಂತರ ಕೋಟಿ ರೂಪಾಯಿಗಳ ಹಾನಿಯಾಗಿದೆ. ಇಂತಹ ವಿಚಾರವನ್ನು ಪ್ರಸ್ತಾಪಿಸುತ್ತಿರುವಂತಹ ಸಮಯದಲ್ಲಿ ಮುಗಿಸಿಬಿಡಿ ಎಂದರೆ ಹೇಗೆ?

**ಸಭಾಪತಿಯವರು**:- ತಾವು ಹೇಳಿರುವುದು ಸರ್ಕಾರಕ್ಕೆ ಎಲ್ಲವೂ ಅರ್ಥವಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ಸರ್ಕಾರಕ್ಕೆ ಏನು ಅರ್ಥವಾಗಿರುವುದಿಲ್ಲ. ಇದುವರೆಗೆ ಕೇಂದ್ರದಿಂದ ಒಂದು ರೂಪಾಯಿ ಪರಿಹಾರವನ್ನು ಕೊಟ್ಟಿರುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**:- ಮಾನ್ಯ ಸಭಾಪತಿಗಳೆ, ನಮಗೆ ಎಲ್ಲವು ಅರ್ಥವಾಗಿದೆ. ಎಲ್ಲವನ್ನು ನಾನು ಬರೆದುಕೊಂಡಿದ್ದೇನೆ. ಅದಕ್ಕೆ ಸರಿಯಾಗಿ ಸರ್ಕಾರವು ಉತ್ತರ ನೀಡುತ್ತದೆ. ಮಾನ್ಯ ಪ್ರತಾಪಚಂದ್ರ ಶೆಟ್ಟರ ಮನಸ್ಸಿನಲ್ಲಿ ಬೇಗ ಮುಗಿಸಿದರೆ ಊಟ ಮಾಡಬಹುದು ಎನ್ನುವುದು ಇತ್ತು. ನೀವು ಮುಗಿಸುವುದಿಲ್ಲ ಎಂದರೆ ನಮ್ಮದೇನು ಅಭ್ಯಂತರವಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ಇನ್ನು ಸ್ವಲ್ಪ ಸಮಯದಲ್ಲಿ ಮುಗಿಸಿಬಿಡುತ್ತೇನೆ. ಮನೆ ಹಾನಿ, ಬೆಳೆ ಹಾನಿ ಮತ್ತು ಸಾರ್ವಜನಿಕರ ಆಸ್ತಿ ಹಾನಿ ಈ ಬಾಬ್ತುಗಳಿಂದ ೨ ಲಕ್ಷ ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆ. ಆಗಿರುವ ನಿಜವಾದ ಹಾನಿಯ ಅಂಕಿ-ಅಂಶಗಳಿಗೆ ಈ ಬಾಬ್ತು ತುಂಬಾ ಕಡಿಮೆಯಾಗಿದೆ. ಕೇಂದ್ರ ಸರ್ಕಾರದವರು ಈ ಮೂರು ವರ್ಷದಲ್ಲಿ ಬಿಡುಗಡೆ ಮಾಡಿರುವುದು, ೨೦೧೯ನೇ ಸಾಲಿನಲ್ಲಿ ೧೬೫೨ ಕೋಟಿ ರೂಪಾಯಿಗಳು, ೨೦೨೦ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವುದು ೧,೩೧೮.೩ ಕೋಟಿ ರೂಪಾಯಿಗಳು. ಎರಡೂ ಕೂಡಿಸಿದರೆ ಸುಮಾರು ೨,೯೭೦ ಕೋಟಿ ರೂಪಾಯಿಗಳು. ಈ ವರ್ಷವಂತೂ ಬಿಡುಗಡೆ ಮಾಡಿರುವುದೇ ಇಲ್ಲ. ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವುದನ್ನು ರಾಜ್ಯ ಸರ್ಕಾರ ಖರ್ಚು ಮಾಡಿರುವುದಿಲ್ಲ ಎಂದು ನಾನು ಹೇಳುವುದಿಲ್ಲ. ರಾಜ್ಯ ಸರ್ಕಾರವು ೫,೪೪೧ ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿದ್ದೀರಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಅದನ್ನು ನಾನು ಹೇಳುತ್ತೇನೆ. ಕೇಂದ್ರ ಮತ್ತು ರಾಜ್ಯಸರ್ಕಾರ ಎರಡು ಸೇರಿ ಬೆಳೆ ಮತ್ತು ಮನೆಯನ್ನು ಕಳೆದುಕೊಂಡು ಕಷ್ಟಕ್ಕೆ ಸಿಲುಕಿದಂತಹ ಜನರಿಗೆ ಖರ್ಚು ಮಾಡಿರುವುದು, ಬೆಳೆ ಪರಿಹಾರಧನವಾಗಿ ೨,೧೩೪ ಕೋಟಿ ರೂಪಾಯಿಗಳು.

‘ (ಮುಂದು )

(1153)17-12-2021(01-50)bsd-vk(md)

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಆರ್. ಪಾಟೀಲ್ (ಮುಂದು)**

ಮನೆ ಪರಿಹಾರವಾಗಿ ರೂ. ೨,೩೨೪ ಕೋಟಿ ಕೊಟ್ಟಿದ್ದು, ಎರಡೂ ಸೇರಿದಂತೆ ರೂ.೪,೪೫೮ ಕೋಟಿ ನೀಡಲಾಗಿದೆ. ರೂ. ೨ ಲಕ್ಷ ಕೋಟಿಗಳ ಬದಲಾಗಿ ರೂ.೪,೪೫೮ ನೀಡಲಾಗಿದೆ. ಈ ವರ್ಷ ಒಂದೂ ಪೈಸೆ ಬಿಡುಗಡೆ ಮಾಡಿಲ್ಲ. ಕೇಂದ್ರದವರು ಏಕೆ ಬಿಡುಗಡೆ ಮಾಡಿಲ್ಲ? ಕೇಂದ್ರ ಸರ್ಕಾರದವರು ಏನೋ ದೊಡ್ಡದಾಗಿ ಹಣ ಬಿಡುಗಡೆ ಮಾಡಿದ್ದಾರೆ ಎನ್ನುವಂತೆ ಕೇಂದ್ರದ ಸಚಿವರು ಜನಾಶೀರ್ವಾದ ಯಾತ್ರೆ ಮಾಡುವಂತೆ ಮಾಡುತ್ತಾರೆ. ಈ ರಾಜ್ಯದಲ್ಲಿ ನಾವು ನೀರಿನಲ್ಲಿ ಮುಳುಗುತ್ತಿದ್ದೇವೆ, ಮನೆ, ಬೆಳೆ, ಸಾರ್ವಜನಿಕ ಕಟ್ಟಡಗಳು ಹೋಗಿವೆ. ಮಾನ್ಯ ನರೇಂದ್ರ ಮೋದಿರವರ ಮುಂದೆ ಕುಳಿತು ರಾಜ್ಯದಲ್ಲಿ ಹಾನಿಯಾಗಿರುವ ಬಗ್ಗೆ ತಿಳಿಸಿ ಹಣ ತೆಗೆದುಕೊಂಡಿದ್ದರೆ ಅವರಿಗೂ ಅನುಕೂಲವಾಗುತ್ತಿತ್ತು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಪಾಟೀಲರು ವಿಷಯದ ಬಗ್ಗೆ ಆಳವಾಗಿ ಅಧ್ಯಯನ ಮಾಡಿ ಅನುಭವಪೂರ್ಣವಾಗಿ ಮಾತನಾಡುತ್ತಿದ್ದಾರೆ. ಉತ್ತರ ಕೊಡುವಾಗ ಎಲ್ಲದ್ದಕ್ಕೂ ಸಮರ್ಪಕವಾಗಿ ಉತ್ತರ ಕೊಡುತ್ತೇವೆ.

**ಶ್ರೀ ಎಸ್. ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಜನಾಶೀರ್ವಾದ ಯಾತ್ರೆ ಎಂದು ನಮ್ಮ ಯಾದಗಿರಿಯಲ್ಲಿ ಮೇಲೆ ಬಂದೂಕದ ಗುಂಡು ಹಾರಿಸಿದರು.

**ಸಭಾಪತಿಯವರುಃ-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಸಭಾನಾಯಕರು ಸೋಮವಾರ ಮತ್ತು ಮಂಗಳವಾರ ಸವಿಸ್ತಾರವಾದ ಉತ್ತರ ನೀಡುವ ಬಗ್ಗೆ ಹೇಳಿದ್ದಾರೆ. ತಾವು ಮುಕ್ತಾಯ ಮಾಡಿದರೆ ಒಳ್ಳೆಯದು.

**ಶ್ರೀ ಎಸ್.ಆರ್. ಪಾಟೀಲ್:-** ಮುಗಿಸುತ್ತೇನೆ, ತಮಗೂ ಅವಸರವೇ?

**ಸಭಾಪತಿಯವರುಃ-** ನನಗೆ ಅವಸರ ಇಲ್ಲ, ಕೋರಂ ಆಗಬೇಕು........

**ಶ್ರೀ ಎನ್. ರವಿಕುಮಾರ್:-** ಅವರ ಭಾಷಣವನ್ನು ಎಲ್ಲರೂ ಕೇಳಬೇಕು ಎಂದು ಆಸೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರುಃ-** ನಿಮ್ಮ ಆಸೆ ಕೈಗೂಡುವುದಿಲ್ಲ, ಕುಳಿತುಕೊಳ್ಳಿ, ಆಯಿತು, ಮಾತನಾಡಿ. ಅವಸರ ಏನೂ ಇಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ೨೫ ಜನ ಸಂಸತ್ ಸದಸ್ಯರು ಹಾಗೂ ಸುಮಲತಾ ರವರು ಬೆಂಬಲ ಕೊಟ್ಟಿದ್ದಾರೆ. ಇದಲ್ಲದೇ ನಮ್ಮ ಪಕ್ಷ ಹಾಗೂ ಮಾನ್ಯ ದೇವೇಗೌಡರ ಪಕ್ಷದ ಒಬ್ಬರು ಸೇರಿ ಇಷ್ಟು ಮಂದಿಯ ಆನೆ ಬಲ ಕೇಂದ್ರ ಸರ್ಕಾರಕ್ಕಿದೆ. ಪ್ರಧಾಮಂತ್ರಿ ಮಾಡಲು ಅವರ ಪಕ್ಷದಿಂದ ೨೬ ಜನ ಸಂಸತ್ ಸದಸ್ಯರು ಆಯ್ಕೆಯಾಗಿ ಹೋಗಿದ್ದಾರೆ. ಆದರೆ ಅವರಿಂದ ಏನಾದರೂ ನಿರೀಕ್ಷೆ ಮಾಡಬೇಕಲ್ಲವೇ? ನಮ್ಮನ್ನು ಏಕೆ ಆಯ್ಕೆ ಮಾಡಿ ಕಳುಹಿಸುತ್ತಾರೆ? ಪಾಟೀಲರು ಸದನದಲ್ಲಿ ಏನಾದರೂ ಮಾತನಾಡಿ ಏನಾದರೂ ಪರಿಹಾರ ಕಂಡುಕೊಳ್ಳಲಿ ಎಂದು ಆಶೀರ್ವಾದ ಮಾಡಿ ಕಳುಹಿಸುತ್ತಾರೆ. ಮಾನ್ಯ ಸಭಾಪತಿಯವರಾದ ತಾವು ನಾನು ಏನನ್ನೂ ಹೇಳದೇ ಮುಗಿಸಿ ಎಂದು ಹೇಳುತ್ತಿದ್ದೀರಿ. ಮಾನ್ಯ ರವಿಕುಮಾರ್ ರವರು ಮುಗಿಸಿ ಎನ್ನುತ್ತಿದ್ದಾರೆ. ಕೇಂದ್ರ ಸರ್ಕಾರ ರಾಜ್ಯಕ್ಕೆ ನೀಡಬೇಕಾದ ಪರಿಹಾರ ಹಾಗೂ ರಾಜ್ಯದ ಪಾಲಿನ ತೆರಿಗೆ ಹಂಚಿಕೆಯಲ್ಲಿ ಅನ್ಯಾಯವಾಗಿದೆ, ಸಹಾಯಧನ ಇಲ್ಲ. ಸಂಸತ್ ಸದಸ್ಯರು ಏಕೆ ಕೇಳುವುದಿಲ್ಲ ಎಂದು ನನಗೆ ಆಶ್ಚರ್ಯ ಎನಿಸುತ್ತದೆ. ೨೦೨೧ರಲ್ಲಿ ೧೩ ಜಿಲ್ಲೆಗಳ ಪೈಕಿ ೮೩ ತಾಲ್ಲೂಕು ಪ್ರವಾಹ ಪೀಡಿತ ಎಂದು ಕಂದಾಯ ಸಚಿವರು declare ಮಾಡಿ, ಕೇಂದ್ರಕ್ಕೆ ರೂ.೭೬೫ ಕೋಟಿಗಳ ಪ್ರಸ್ತಾವನೆ ಸಲ್ಲಿಸಿದ್ದರೂ, ಒಂದು ಪೈಸೆ ಬಂದಿಲ್ಲ. ವಿಶೇಷವಾಗಿ ಉತ್ತರ ಕರ್ನಾಟಕದ ಭಾಗದಲ್ಲಿ ತೊಗರಿ, ಹತ್ತಿ, ಶೇಂಗಾ, ಮೆಣಸಿನಕಾಯಿ, ಈರುಳ್ಳಿ ಬೆಳೆಗಳು ಸೇರಿದಂತೆ ಮುಂತಾದ ಬೆಳೆಗಳು ಬಹುಪಾಲು ಹಾಳಾಗಿವೆ. ಗಿಡ ನೋಡುವುದಕ್ಕೆ ಹಸಿರಾಗಿ ಕಾಣುತ್ತವೆ, ತೇವದ ಶಕ್ತಿ ಇರುವುದರಿಂದ ಬೆಳೆ ನಾಶವಾಗಿಲ್ಲ ಎಂದು ಅನಿಸುತ್ತದೆ, ಆದರೆ ಅದರಿಂದ ಆದಾಯ ಬರುತ್ತಿಲ್ಲ.

ಮಾನ್ಯ ಸಭಾಪತಿಯವರೇ, ಇಷ್ಟೆಲ್ಲಾ ಅನಾಹುತಗಳಾಗಿದ್ದರೂ ಮಾನ್ಯ ಕಂದಾಯ ಸಚಿವರು ಹಾಗೂ ಇತರೆ ಸಚಿವರುಗಳು ವಿಸಿಟ್ ಮಾಡಬೇಕಲ್ಲವೇ? ಇಷ್ಟು ದೊಡ್ಡ ಪ್ರಮಾಣದಲ್ಲಿ ಹಾನಿ ಅನುಭವಿಸಿ ಜನರು ನೀರಿನಲ್ಲಿ ಮುಳುಗುವ ಮುನ್ನ ಹೋಗಿ ನೋಡಬೇಕಲ್ಲವೇ? ಇದು ನೂರಕ್ಕೆ ನೂರರಷ್ಟು ಪರಿಹಾರವಲ್ಲದಿದ್ದರೂ ಜನರಿಗೆ ಸ್ವಾಂತನ ಹೇಳಿದಂತಾಗುತ್ತದೆ. ಮಂತ್ರಿಯವರು, ಜಿಲ್ಲಾ ಉಸ್ತುವಾರಿ ಮಂತ್ರಿಯವರು ಬಂದಿದ್ದರು ಎಂದು ಅವರು ಖುಷಿ ಪಡುತ್ತಾರೆ. ಇದರಿಂದ ಅವರಿಗೆ ಏನಾದರೂ ಒಂದು ಆಸೆ ಹುಟ್ಟುತ್ತದೆ. ಮಂತ್ರಿಗಳು ಬಂದಾಗ ಅಧಿಕಾರಿಗಳು ಜವಾಬ್ದಾರಿಯಿಂದ ಸ್ಪಂದನೆ ಮಾಡುತ್ತಾರೆ. ಅಧೀನ ಅಧಿಕಾರಿಗಳಾದ ಜಿಲ್ಲಾಧಿಕಾರಿ ಅಥವಾ ಎ.ಸಿ. ಸೇರಿದಂತೆ ಕೆಳಗಿನ ಅಧಿಕಾರಿಗಳು ಸ್ಪಂದನೆ ಮಾಡುತ್ತಾರೆ. ಸ್ಥಳಕ್ಕೆ ಹೋಗಿ ನೋಡಿ ಜನರು ನೂರೆಂಟು ಕೇಳುತ್ತಾರೆ, ಕೊಡುವುದಕ್ಕೆ ಆಗುವುದಿಲ್ಲವಾದ್ದರಿಂದ ಹೋಗುವುದೇ ಬೇಡ ಎಂದು ಬಿಟ್ಟುಬಿಟ್ಟಿದ್ದಾರೆಯೇ? ನಮ್ಮಲ್ಲಿ ಒಬ್ಬ ರಾಜಕಾರಣಿ ಇದ್ದರು, ನಾನು ಅವರ ಹೆಸರನ್ನು ಹೇಳುವುದಿಲ್ಲ. ಅವರು ನನಗೆ ’

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಪಾಟೀಲರೆ, ನೀವು ಹಳ್ಳಿ ತಿರುಗಾಡಬೇಡಿ, ಹೋದಾಗ ಸಾವಿರ ಹೇಳುತ್ತಾರೆ, ಇನ್ನೊಮ್ಮೆ ಹೋದಾಗ ಏಕೆ ಮಾಡಿಲ್ಲ ಎಂದು ಕೇಳುತ್ತಾರೆ, ಅದಕ್ಕೆ ನಾನು ಎಲ್ಲಿಗೂ ಹೋಗುವುದೇ ಇಲ್ಲ, ನನ್ನನ್ನು ಕೇಳುವುದೇ ಇಲ್ಲ' ಎಂದು ಹೇಳುತ್ತಿದ್ದರು. ಚುನಾವಣೆ ಬಂದಾಗ ಹೇಳಿದ್ದನ್ನು ಮಾಡಲಿಲ್ಲ ಎಂದು ಕೇಳುತ್ತಾರೆ. ೫ ವರ್ಷದ ನಂತರ ಹೋದರೆ ಅವರಿಗೆ ಏನನ್ನೂ ಕೇಳುವುದಿಲ್ಲವಂತೆ!. ಮಾನ್ಯ ಮನಮೋಹನ್ ಸಿಂಗ್ ಅವರಿಗಿಂತ ಮಾನ್ಯ ಮೋದಿ ರವರು ಹೆಚ್ಚು ಹಣವನ್ನು ಕೇಂದ್ರದಿಂದ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಮಾನ್ಯ ಮನಮೋಹನ್ ಸಿಂಗ್‌ರವರು ಮಂಡಿಸಿದ ಬಜೆಟ್ ಗಾತ್ರವು ೨೦೧೩-೧೪ ರಲ್ಲಿ ರೂ.೧೬.೬೫ ಲಕ್ಷ ಕೋಟಿ ಇತ್ತು. ೨೦೨೧-೨೨ ರಲ್ಲಿ ಅಂದರೆ ಈಗಿನ ಎನ್.ಡಿ.ಎ ಸರ್ಕಾರದಲ್ಲಿ ರೂ.೩೪.೮೩ ಲಕ್ಷ ಕೋಟಿ ಆಗಿದೆ. ಅಂದರೆ ಇದರಲ್ಲಿ ರೂ.೧೫.೬ ಲಕ್ಷ ಕೋಟಿ ಸಾಲ ಇದೆ. ನಾನು ಬಜೆಟ್ ಗಾತ್ರ ಹೇಳಿದೆ. ಮೊದಲು ತೆರಿಗೆ ಹಾಕುವ ಅಧಿಕಾರ ನಮ್ಮ ರಾಜ್ಯಕ್ಕೆ ಇತ್ತು, ಅದರಂತೆ ಬರುತ್ತಿದ್ದ ಆದಾಯದಿಂದ ಅತಿವೃಷ್ಟಿ ಮತ್ತು ಅನಾವೃಷ್ಟಿಯನ್ನು ಎದುರಿಸುವ ಸಾಮರ್ಥ್ಯ ಇತ್ತು. ಈಗ ಏನಾಗಿದೆ? ಜಿಎಸ್‌ಟಿ ಪದ್ಧತಿ ಜಾರಿಗೆ ಬಂದ ಮೇಲೆ ಜಿಎಸ್‌ಟಿಯಿಂದ ರಾಜ್ಯ ರೂ.೨ ಲಕ್ಷ ಕೋಟಿ ಕಳೆದುಕೊಂಡಿದೆ. ೨೦೧೩-೧೪ ರ ಯುಪಿಎ ಸರ್ಕಾರದಲ್ಲಿ ರಾಜ್ಯದ ಆದಾಯವು ರೂ.೧೧.೨೨ ಲಕ್ಷ ಕೋಟಿ ಇತ್ತು. ಈಗ ೨೦೨೧-೨೨ ರಲ್ಲಿ ರೂ.೧೯.೭೬ ಲಕ್ಷ ಕೋಟಿ ಇದೆ. Enormous increase ಆಗಿದೆ ಮತ್ತು ಸಾಲ ಹೆಚ್ಚಾಗಿದೆ. ೨೦೧೩-೧೪ ರಲ್ಲಿ ರೂ.೪.೫೭ ಲಕ್ಷ ಕೋಟಿ ಸಾಲ ಇತ್ತು. ೨೦೨೧-೨೨ ರಲ್ಲಿ ರೂ.೧೫.೦೬ ಲಕ್ಷ ಕೋಟಿ ಸಾಲ ಇದೆ. ಅಂದರೆ ನಾಲ್ಕು ಪಟ್ಟು ಹೆಚ್ಚಾಗಿದೆ. ೧೫ನೇ ಹಣಕಾಸು ಯೋಜನೆಯಲ್ಲಿ ಇಡೀ ಭಾರತ ದೇಶದಲ್ಲಿ ನಾವು ಹೆಚ್ಚು suffer ಆಗಿದ್ದೇವೆ. ಹೋದ ವರ್ಷ ರೂ.೨೧ ಸಾವಿರ ಕೋಟಿ ಬಿಡುಗಡೆ ಮಾಡಿದರು. ಈ ವರ್ಷ ರೂ.೨೪ ಸಾವಿರ ಕೋಟಿ ಬಿಡುಗಡೆ ಮಾಡಿದ್ದಾರೆ. ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದ ಆದಾಯ ತೆರಿಗೆ ಇರಬಹುದು, custom ತೆರಿಗೆ ಇರಬಹುದು, ಜಿಎಸ್‌ಟಿ ಇರಬಹುದು, IT-BT ರಫ್ತಿನಿಂದ ಇರಬಹುದು, petrol, diesel ಮೇಲೆ ಸಂಗ್ರಹಿಸಿದ additional excise duty ಇನ್ನೂ ಹಲವು cess ಗಳು ಸೇರಿ ಕನಿಷ್ಟ ಎಂದರೆ ರೂ.೩ ಲಕ್ಷ ಕೋಟಿ ಕರ್ನಾಟಕದಿಂದ ಕೇಂದ್ರ ಸರ್ಕಾರವು ಸಂಗ್ರಹಿಸುತ್ತದೆ. ನಮ್ಮ ರಾಜ್ಯದಿಂದ ಕೇಂದ್ರಕ್ಕೆ ಹೋಗುವ ಹಣವಾಗಿದೆ. ಇದರಲ್ಲಿ ೪೨% ನಮಗೆ refund ಆಗಬೇಕು. ಅಂದರೆ ನಮಗೆ ರೂ.೧.೨೫ ಲಕ್ಷ ಕೋಟಿ ಬರಬೇಕಾಗಿದ್ದು, ಕೇವಲ ರೂ.೫೦ ರಿಂದ ೫೫ ಸಾವಿರ ಕೋಟಿ ಮಾತ್ರ ಬರುತ್ತಿದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1154)/17.12.2021/2.00/ಹೆಚ್‌ವಿ:ಬಿಎನ್‌ಎಸ್

**ಶ್ರೀ ಎಸ್.ಆರ್.ಪಾಟೀಲ್(ಮುಂದುವರಿದದ್ದು):-**

ಇದು ಅರ್ಧಕ್ಕಿಂತಲೂ ಕಡಿಮೆಯಾಗಿದೆ. ಭಾರಿ ಮಳೆಯಿಂದಾಗಿ ಬೆಂಗಳೂರಿನಲ್ಲಿ ಅಂದಾಜು 5-6 ಸಾವಿರ ಕೋಟಿ ರೂಪಾಯಿಗಳಷ್ಟು ಬೆಲೆಬಾಳುವ ರಸ್ತೆಗಳು ಬಹಳ ದೊಡ್ಡ ಪ್ರಮಾಣದಲ್ಲಿ ಹಾನಿಗೀಡಾಗಿವೆ. ಅದನ್ನು ಸರಿಪಡಿಸುವುದಕ್ಕೆ ಹಣವೇ ಇಲ್ಲ. ಮಾನ್ಯ ಮನಮೋಹನ್‌ಸಿಂಗ್‌ರವರು ಪ್ರಧಾನ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಪೆಟ್ರೋಲ್ ಮತ್ತು ಡೀಸೆಲ್‌ನಿಂದ ಗರಿಷ್ಠ 45 ಸಾವಿರ ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡುತ್ತಿದ್ದರು. 2014-15ನೇ ಸಾಲಿನಲ್ಲಿ ನಮ್ಮ ರಾಜ್ಯದಿಂದ ಕೇಂದ್ರ ಸರ್ಕಾರದವರು ಸಂಗ್ರಹಿಸಿದ ಹಣ 6157 ಕೋಟಿ ರೂಪಾಯಿಗಳಾಗಿವೆ. ಅದೇ 2020-21ನೇ ಸಾಲಿನಲ್ಲಿ ಕೋವಿಡ್‌ನ ಸಂಕಷ್ಟಕ್ಕೆ ಸಿಲುಕಿದ್ದ ಕಾರಣದಿಂದಾಗಿ ಎಲ್ಲಾ ಆರ್ಥಿಕ ಚಟುವಟಿಕೆಗಳು ನಿಂತು ಹೋಗಿದ್ದವು. ವ್ಯಾಪಾರ ವಹಿವಾಟುಗಳು ನಿಂತು ಹೋಗಿದ್ದರೂ ಸಹ ಸುಮಾರು 32 ಸಾವಿರ ಕೋಟಿ ರೂಪಾಯಿಗಳನ್ನು ನಮ್ಮ ರಾಜ್ಯದಿಂದ ಕೇಂದ್ರದವರು ಸಂಗ್ರಹ ಮಾಡಿದ್ದಾರೆ. ಈ ವರ್ಷ ನನಗನ್ನಿಸಿದ ಮಟ್ಟಿಗೆ ಸುಮಾರು 40 ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ನಮ್ಮ ರಾಜ್ಯದಿಂದ ಕೇಂದ್ರ ಸರ್ಕಾರದವರು ಸಂಗ್ರಹ ಮಾಡಿದ್ದಾರೆ. They are collecting enormous funds from our State and there should be reciprocative response.

**ಶ್ರೀ ಎನ್.ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಗಂಭೀರವಾಗಿರುವ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಆದ್ದರಿಂದ ಈ ವಿಚಾರವನ್ನು ಸೋಮವಾರ ತೆಗೆದುಕೊಳ್ಳುವುದು ಒಳ್ಳೆಯದು ಎನ್ನುವುದು ನನ್ನ ಭಾವನೆಯಾಗಿದೆ. ಎಲ್ಲ ಅಂಕಿಸಂಖ್ಯೆಗಳ ಸಮೇತವಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಮಂಡಿಸುತ್ತಿದ್ದಾರೆ. ಇಂತಹ ಗಂಭೀರವಾಗಿರುವ ವಿಚಾರವನ್ನು ಎಲ್ಲ ಮಾನ್ಯ ಸದಸ್ಯರುಗಳು ಸದನದಲ್ಲಿ ಹಾಜರಿದ್ದಾಗ ಮಾತನಾಡಿದರೆ ಉತ್ತಮ ಎನ್ನುವುದು ನನ್ನ ಭಾವನೆಯಾಗಿದೆ.

**ಸಭಾಪತಿಯವರು:-** ಆ ರೀತಿ ಆಗುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಈ ದಿನವೇ ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಬೇಕಾಗಿದೆ. ನಿನ್ನೆ ದಿನದ ಕಾರ್ಯಕಲಾಪಗಳ ಪಟ್ಟಿಯಲ್ಲಿನ ವಿಷಯಗಳನ್ನು ಪೂರ್ಣವಾಗಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಈ ದಿನವಾದರೂ ಕಾರ್ಯಕಲಾಪಗಳ ಪಟ್ಟಿಯಲ್ಲಿನ ಎಲ್ಲ ವಿಚಾರಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗಿದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಪ್ರವಾಹ ಪರಿಸ್ಥಿತಿಯನ್ನು ಎದುರಿಸುವುದಕ್ಕೆ 15ನೇ ಹಣಕಾಸಿನ ಆಯೋಗದವರು ಸುಮಾರು 5495 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರವು ಜಿ.ಎಸ್.ಟಿ ಕಾಯಿದೆ ಅನ್ವಯ ಕೊಡಬೇಕಾಗಿರುವ ಸರಕು ಸೇವಾ ಸುಂಕದ ಕರ್ನಾಟಕದ ಭಾಗವನ್ನು ನಮ್ಮ ರಾಜ್ಯ ಸರ್ಕಾರಕ್ಕೆ ಕೊಡಬೇಕೆಂದು ಹೇಳಿದ್ದರೂ ಸಹ ಕೇಂದ್ರ ಸರ್ಕಾರ ಒಂದು ರೂಪಾಯಿಯನ್ನು ಸಹ ಕೊಟ್ಟಿಲ್ಲ. 5490 ಕೋಟಿ ರೂಪಾಯಿಗಳು ಇರಲಿ, ಚಿಲ್ಲರೆ 5 ಕೋಟಿ ರೂಪಾಯಿಗಳನ್ನು ಸಹ ಕೊಟ್ಟಿಲ್ಲ. ನಮ್ಮ ಸಂಸತ್ ಸದಸ್ಯರು ಇದರ ಬಗ್ಗೆ ಏತಕ್ಕೋಸ್ಕರ ಪ್ರಶ್ನೆ ಮಾಡುತ್ತಿಲ್ಲವೆನ್ನುವುದು ನನಗೆ ಅರ್ಥವಾಗುತ್ತಿಲ್ಲ. ನಮ್ಮ ರಾಜ್ಯದ ಲೋಕಸಭಾ ಸದಸ್ಯರ ಒಂದು ನಿಯೋಗ ಮಾನ್ಯ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ, 'ನಮ್ಮ ರಾಜ್ಯದಿಂದ ಕೇಂದ್ರ ಸರ್ಕಾರಕ್ಕೆ ಸುಮಾರು 3 ಲಕ್ಷ ಕೋಟಿ ರೂಪಾಯಿಗಳನ್ನು ನೀಡುತ್ತಿದ್ದೇವೆ. ಅದರಲ್ಲಿ ನಮ್ಮ ಜಿ.ಎಸ್.ಟಿ. ಪಾಲು ಹಣ 1.25 ಲಕ್ಷ ಕೋಟಿ ರೂಪಾಯಿಗಳು ಮಾತ್ರ, ಅರ್ಧವನ್ನಾದರೂ ಕೊಡಿ' ಎಂದು ಕೇಳಬೇಕಾಗಿದೆ. ಕರ್ನಾಟಕ ರಾಜ್ಯದವರು ಏನೂ ಕೇಳುವುದಿಲ್ಲ; ಸಮಾಧಾನದಿಂದ ಇದ್ದಾರೆಂದು ಕೇಂದ್ರ ಸರ್ಕಾರದವರು ನಮ್ಮ ರಾಜ್ಯಕ್ಕೆ ಏನೂ ಕೊಡುತ್ತಿಲ್ಲವೆನ್ನುವುದು ನನ್ನ ಭಾವನೆಯಾಗಿದೆ. ಸಮಾಧಾನದಿಂದ ಇದ್ದರೆ ಯಾವ ಕೆಲಸವೂ ಆಗುವುದಿಲ್ಲ. ನಾವು ಸಮಾಧಾನದಿಂದ ಇರುವುದರಿಂದ ನನ್ನ ಕೆಲಸಗಳು ಆಗುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ಜಿಲ್ಲೆಯಲ್ಲಿ 2019ರಲ್ಲಿ ಬಿದ್ದಂತಹ ಭಾರಿ ಮಳೆಯಿಂದಾಗಿ ಹಾನಿಗೊಳಗಾದ ಮನೆಗಳಿಗೆ ಪರಿಹಾರವನ್ನು ನೀಡುವುದು ಇನ್ನೂ ಬಾಕಿ ಉಳಿದಿದೆ. 2019, 2020 ಮತ್ತು 2021ರಲ್ಲಿ ಪ್ರವಾಹ ಬಂದಾಗ ಅಲ್ಲಿದ್ದ ಜನರನ್ನು ಸ್ಥಳಾಂತರಗೊಳಿಸಲಾಯಿತು. ಪ್ರವಾಹ ಬಂದಂತಹ ಸಂದರ್ಭದಲ್ಲಿ ಮುದುವೊಳಲು ತಾಲ್ಲೂಕಿಗೆ ಅಧಿಕಾರಿಗಳು ಭೇಟಿ ನೀಡಿ ಜನರನ್ನು ಎತ್ತರದ ಸ್ಥಳಗಳಿಗೆ ಶಿಫ್ಟ್ ಮಾಡಿದ್ದರು. ಪ್ರವಾಹ ಕಡಿಮೆಯಾದ ಕೂಡಲೇ ಜನರು ಪುನಃ ಅದೇ ಮನೆಗಳಲ್ಲಿ ಬಂದು ವಾಸಿಸುತ್ತಾರೆ. ಇದಕ್ಕೊಂದು ಶಾಶ್ವತವಾಗಿರುವ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ. ಪ್ರತಿ ವರ್ಷ ಇದೇ ಪರಿಸ್ಥಿತಿಯಾಗಿದೆ. ಅವರುಗಳು ಮರಳಿ ಮನೆಗೆ ಬಂದರೆ, ಮನೆಯೊಳಗೆ ಕೆಸರು ತುಂಬಿರುತ್ತದೆ. ಅದನ್ನು ಕ್ಲೀನ್ ಮಾಡುವುದಕ್ಕೆ ಸುಮಾರು 15 ದಿನಗಳು ಬೇಕಾಗುತ್ತದೆ. ಇಷ್ಟಾಗುವುದರಲ್ಲಿ ಪುನಃ ಪ್ರವಾಹ ಬರುತ್ತದೆಯೆಂದು ಮೊದಲೇ ಅವರನ್ನು ಬೇರೆ ಕಡೆಗೆ ಸ್ಥಳಾಂತರಿಸುತ್ತಾರೆ. ಸರ್ಕಾರ ಇದಕ್ಕೊಂದು ಶಾಶ್ವತವಾಗಿರುವ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಇದಕ್ಕೆ ಸಂಬಂಧಪಟ್ಟಂತೆ ತಾವು ಸರ್ಕಾರಕ್ಕೊಂದು ಸಲಹೆ ಕೊಡಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಇದಕ್ಕೊಂದು ಶಾಶ್ವತವಾಗಿರುವ ವ್ಯವಸ್ಥೆ ಮಾಡಬೇಕಾಗಿದೆ. ಪ್ರವಾಹ ಬಂದಂತಹ ಸಂದರ್ಭದಲ್ಲಿ ಫಲವತ್ತಾಗಿರುವ ಮೇಲ್ಮಣ್ಣು ಕೊಚ್ಚಿಕೊಂಡು ಹೋಗಿವೆ. ಅವು ಸಹ ಇನ್ನೂ ಸುಧಾರಣೆಯಾಗಿಲ್ಲ. Centrally sponsored schemes, flagship programme ಗಳಿಗೆ ಮೊದಲು ರಾಜ್ಯ ಸರ್ಕಾರ ಶೇಕಡಾ 20ರಷ್ಟು ಅನುದಾನವನ್ನು ,ಕೇಂದ್ರ ಸರ್ಕಾರ ಶೇಕಡಾ 80ರಷ್ಟು ಅನುದಾನವನ್ನು ನೀಡುತ್ತಿತ್ತು. ನಂತರ ಅದರ ಪ್ರಮಾಣ ರಾಜ್ಯ ಸರ್ಕಾರ ಶೇಕಡಾ 25ರಷ್ಟು ಅನುದಾನವನ್ನು, ಕೇಂದ್ರ ಸರ್ಕಾರ ಶೇಕಡಾ 75ರಷ್ಟು ಅನುದಾನವನ್ನು ನೀಡುವಂತಾಗಿದೆ. ಈಗ ಈ ಪ್ರಮಾಣದಲ್ಲಿ ಭಾರಿ ಬದಲಾವಣೆಯಾಗಿ ರಾಜ್ಯ ಸರ್ಕಾರ ಶೇಕಡಾ 60ರಷ್ಟು ಅನುದಾನವನ್ನು, ಕೇಂದ್ರ ಸರ್ಕಾರ ಶೇಕಡಾ 40ರಷ್ಟು ಅನುದಾನವನ್ನು ನೀಡುವಂತಾಗಿದೆ. ಎಲ್ಲದರಲ್ಲಿಯೂ ಕೇಂದ್ರ ಸರ್ಕಾರ ಇದೇ ರೀತಿ ಕಡಿತಗೊಳಿಸುತ್ತಾ ಹೋಗುತ್ತಿದೆ. ನಾನು ಎಲ್ಲ ಸದಸ್ಯರ ಭಾವನೆಗಳನ್ನು ಅರ್ಥ ಮಾಡಿಕೊಂಡಿದ್ದೇನೆ. ಈಗಾಗಲೇ ಮಧ್ಯಾಹ್ನ 2 ಗಂಟೆಯಾಗುತ್ತಿದೆ. ಭೋಜನ ವಿರಾಮದ ಸಮಯವಾಗಿದೆ. ಈ ವರ್ಷದಲ್ಲಿ ಆಗಿರುವಂತಹ ಹಾನಿಯ ಬಗ್ಗೆ ಇಲ್ಲಿಯವರೆಗೆ ಸರ್ಕಾರ ಸಮೀಕ್ಷೆಯನ್ನು ಸಹ ಮಾಡಿಲ್ಲ. ಸಮೀಕ್ಷೆ ಮಾಡಿದ ನಂತರ ಅವರಿಗೆ ಪರಿಹಾರವನ್ನು ಕೊಡುವಂತಹ ಕೆಲಸವಾಗಬೇಕಾಗಿದೆ. ಜನರ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ.

ಮಾನ್ಯ ಸಭಾಪತಿಯವರೇ, ತಾವು ಏನೂ ಮಾತನಾಡದೇ ಕುಳಿತಿರುವುದನ್ನು ನೋಡಿದರೆ, ತಮ್ಮ ಮೌನವನ್ನು 'ಮೌನಂ ಸಮ್ಮತಿ ಲಕ್ಷಣಂ' ಎಂದು ತಿಳಿದುಕೊಳ್ಳಬೇಕಾಗಿದೆ.

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿರುವ ಸಂದರ್ಭದಲ್ಲಿ ಮಧ್ಯೆ ಬಾಯಿ ಹಾಕಿದರೆ ಪುನಃ ಹತ್ತು ನಿಮಿಷಗಳ ಕಾಲ ಅವರ ಮಾತು ಮುಂದಕ್ಕೆ ಹೋಗಬಹುದೆಂದು ತಾವು ಸುಮ್ಮನೆ ಕುಳಿತಿರಬಹುದು. ಅವರು ಹೆಚ್ಚು ಸಮಯ ತೆಗೆದುಕೊಂಡರೆ ತಾವು ಇನ್ನೂ ಹೆಚ್ಚು ಮೌನಿಗಳಾಗಬಹುದು.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ನನಗೆ ಎಲ್ಲರ ಹಸಿವಿನ ಅರ್ಥವಾಗಿದೆ. ಬೇಗನೆ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ಶ್ರೀಮತಿ ಭಾರತಿ ಶೆಟ್ಟಿಯವರು ಹಾಗೂ ಡಾ|| ತೇಜಸ್ವಿನಿಗೌಡರವರು ಮಾತ್ರ ನನಗೆ ಬೆಂಬಲವನ್ನು ನೀಡುತ್ತಿದ್ದಾರೆ. ಮಹಿಳಾ ಸದಸ್ಯರು ಮಾತ್ರ ಬೆಂಬಲ ನೀಡುತ್ತಿದ್ದಾರೆ. ಇವರ್ಯಾರು ನನಗೆ ಬೆಂಬಲ ಸೂಚಿಸುತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ನಮ್ಮ ಕಡೆಯಿಂದ ಅವರಿಗೆ ಸಂಪೂರ್ಣವಾಗಿರುವ ಬೆಂಬಲವಿದೆ. ಆದರೆ, ಆ ಕಡೆಯವರು ಮಾನ್ಯ ವಿರೋಧ ಪಕ್ಷದ ನಾಯಕರನ್ನು ಬಿಟ್ಟೇ ಬಿಟ್ಟಿದ್ದಾರೆ.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಅವರು ನಮ್ಮ ನಾಯಕರು. ನಾವುಗಳು ಅವರಿಗೆ ಸಂಪೂರ್ಣವಾದ ಬೆಂಬಲವನ್ನು ನೀಡುತ್ತಿದ್ದೇವೆ.

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ಅವರು ಎಲ್ಲಿ ಸಂಪೂರ್ಣ ಬೆಂಬಲವನ್ನು ನೀಡಿದ್ದಾರೆ? ಮೊನ್ನೆ ನಡೆದಂತಹ ವಿಧಾನ ಪರಿಷತ್ತಿನ ಚುನಾವಣೆಯಲ್ಲಿ ಅವರಿಗೆ ಟಿಕೆಟೇ ಕೊಡಲಿಲ್ಲ. ಅವರಿಗೆ ನಮ್ಮ ಕಡೆಯಿಂದ ಸಂಪೂರ್ಣವಾದ ಬೆಂಬಲವಿದೆ. ಆ ಕಡೆಯವರು ಪಾಪ ಅವರನ್ನು ಬಿಟ್ಟುಬಿಟ್ಟಿದ್ದಾರೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಇನ್ನು ಬಹಳಷ್ಟು ಜನರು ಈ ವಿಷಯದ ಮೇಲೆ ಮಾತನಾಡುವವರಿದ್ದಾರೆ.

**ಶ್ರೀ ಯು.ಬಿ.ವೆಂಕಟೇಶ್:-** ಸನ್ಮಾನ್ಯ ಸಭಾಪತಿಯವರೇ, ಅವರ ಪಕ್ಷದವರು ಎಷ್ಟು ಜನರಿಗೆ ಟಿಕೆಟ್ ಕೊಡುತ್ತಾರೆ, ಎಷ್ಟು ಜನರನ್ನು ಸೋಲಿಸುತ್ತಾರೆ ಎನ್ನುವುದನ್ನು ಹೇಳಬೇಕೇ? ಅವರು ಹೇಗೆ ಟಿಕೆಟ್ ಕೊಟ್ಟಿದ್ದಾರೆ ಎನ್ನುವುದರ ಚರಿತ್ರೆಯನ್ನು ತೆಗೆಯಬೇಕೇ? ಇವರು ಬೆಂಕಿ ಹಾಕುವಂತಹ ಕೆಲಸವನ್ನು ಮಾಡುತ್ತಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್ ಅವರನ್ನು ಮಾರ್ಗದರ್ಶಕ ಮಂಡಲಿಗೆ ಕಳುಹಿಸಿಕೊಡಬೇಕಾಗಿದೆ.

**ಡಾ||ತೇಜಸ್ವಿನಿ ಗೌಡ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಹರಿಪ್ರಸಾದ್‌ರವರ ಭರವಸೆ ಮಾತುಗಳನ್ನು ಕೇಳಿ ನನಗೆ ಸಮಾಧಾನವಾಗಿದೆ.

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರನ್ನು ಅವರ ಪಕ್ಷದವರು ಈ ತರಹ ಭಾಷಣ ಮಾಡುವುದಕ್ಕೆ ಮಾತ್ರ ಇಟ್ಟುಕೊಂಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ನಾನು ಕಡಿಮೆ ಮಾತನಾಡುತ್ತೇನೆ. ಕೃತಿ ಹೆಚ್ಚು ಮಾಡುತ್ತೇನೆ. ನಾನು ಏನು ಮಾತನಾಡುತ್ತೇನೆ. ಅದೇ ರೀತಿಯಲ್ಲಿ ನಡೆದುಕೊಳ್ಳುತ್ತೇನೆ. I will never eat my words in my life. Whatever I speak I do it throughout my career. It is my commitment.

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ಅವರ ನಿಲುವಿಗೆ ನನ್ನ ಬೆಂಬಲವಿದೆ.

**ಶ್ರೀ ಯು.ಬಿ.ವೆಂಕಟೇಶ್:-** ಸನ್ಮಾನ್ಯ ಸಭಾಪತಿಯವರೇ, ಅವರ ಬೆಂಬಲ ತೆಗೆದುಕೊಂಡು ಏನು ಮಾಡಬಹುದು?

**Sri N.RAVIKUMAR**:- Mr. Chairman, he is the right person in the wrong party.

**ಶ್ರೀ ಯು.ಬಿ.ವೆಂಕಟೇಶ್:-** ಸನ್ಮಾನ್ಯ ಸಭಾಪತಿಯವರೇ, he is the wrong person in a right party. First let him accept it. ರಾಜಕೀಯ ಗೊತ್ತಿಲ್ಲದವರನ್ನು ತಂದು ಇಲ್ಲಿ ಕೂಡಿಸಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ನನ್ನ ಮೇಲೆ ಏನೋ ಹೇಳಬೇಕು ಅದಕ್ಕೆ ಹೇಳುತ್ತಿದ್ದಾರೆ. ಕಳೆದ 60 ವರ್ಷಗಳಿಂದ ಆಗದಿರುವಂತಹ ಮಳೆ ಈ ವರ್ಷವಾಗಿದೆ. ಇದರಿಂದಾಗಿ ಸಾಕಷ್ಟು ಮನೆಗಳು ಹಾಳಾಗಿವೆ. ಲಕ್ಷಾಂತರ ಎಕರೆ ಭೂಮಿಯಲ್ಲಿ ಬೆಳೆದಂತಹ ಬೆಳೆ ನಾಶವಾಗಿದೆ. ಕಟ್ಟಡಗಳು ಕುಸಿದು ಬಿದ್ದಿವೆ. ವಿದ್ಯುತ್ ಸಂಪರ್ಕಗಳು ಕಡಿದು ಹೋಗಿವೆ. ವಿದ್ಯುತ್ ಟ್ರಾನ್ಸ್‌ಫಾರಂಗಳು ಮತ್ತು ಕೇಬಲ್‌ಗಳು ಹಾಳಾಗಿವೆ. ವಿದ್ಯುತ್ ಕಂಬಗಳು ಕಿತ್ತುಕೊಂಡು ಹೋಗಿವೆ. ಇದನ್ನು ಸರಿಪಡಿಸಿ ಇವತ್ತಿಗೂ ರೈತರಿಗೆ ವಿದ್ಯುತ್ ಕೊಡುವುದಕ್ಕೆ ಆಗಿಲ್ಲ. ಇಷ್ಟೆಲ್ಲ ದೊಡ್ಡ ಪ್ರಮಾಣದಲ್ಲಿ ಹಾನಿ ಆಗಿರುವುದಕ್ಕೆ ಸರ್ಕಾರ ತಕ್ಷಣವೇ ಸ್ಪಂದಿಸಬೇಕಾಗಿತ್ತು.

(ಮುಂದು)

(1155) 17.12.2021 2.10 ಪಿಕೆ:ಬಿಎನ್‌ಎಸ್

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-**

ತಕ್ಷಣವೇ ಯುದ್ಧೋಪಾದಿಯಲ್ಲಿ ಸಮೀಕ್ಷೆ ಮಾಡಬೇಕು ಮತ್ತು ಅದೇ ವೇಗದಲ್ಲಿ ಇಡೀ ರಾಜ್ಯದ ಬಹುತೇಕ ಜನ ಏನು ತೊಂದರೆಗೆ ಈಡಾಗಿದ್ದಾರೋ ಅವರಿಗೆ ಪರಿಹಾರವನ್ನು ಕಲ್ಪಿಸಿ ನ್ಯಾಯ ಒದಗಿಸುವ ಕೆಲಸ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

---

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ನಿಲುವಳಿ ಸೂಚನೆ ಬಗ್ಗೆ, ಅತಿವೃಷ್ಟಿ ಬಗ್ಗೆ ಅವರೇನು ವಿಷಯ ಮಂಡನೆ ಮಾಡಿದ್ದಾರೋ ಅದಕ್ಕೆ ಸೋಮವಾರ ಅಥವಾ ಮಂಗಳವಾರ ಉತ್ತರ ಕೊಡಿಸುವ ವ್ಯವಸ್ಥೆ ಮಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್**:- ಇನ್ನೂ ನಮ್ಮ ಕಡೆ ಮಾತನಾಡುವವರಿದ್ದಾರೆ.

**ಸಭಾಪತಿಯವರು:-** ಒಂದು ಕೆಲಸ ಮಾಡೋಣ. ಈಗ ಊಟಕ್ಕೆ ವಿರಾಮ ಕೊಟ್ಟು ಮತ್ತೆ ಮೂರು ಗಂಟೆಗೆ ಸೇರೋಣ.

**ಶ್ರೀ ಎಂ.ನಾರಾಯಣಸ್ವಾಮಿ**:- ಮಾನ್ಯ ಸಭಾಪತಿಗಳೆ, ಇವತ್ತು ಶುಕ್ರವಾರ, ಎಲ್ಲರೂ ಊರಿಗೆ ಹೋಗಬೇಕಿದೆ.

**ಸಭಾಪತಿಯವರು:-** ಊರಿಗೆ ಹೊರಟರೂ ಅವರು ರಾತ್ರಿಗೆಯೇ ಹೋಗಬೇಕು. ಅಜೆಂಡಾ ಬಹಳ ಉಳಿದಿದೆ. ಅವೆಲ್ಲವನ್ನೂ ಮುಗಿಸಬೇಕಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಆಯಿತು, ತಾವು ಹೇಗೆ ಹೇಳುತ್ತೀರೋ ಹಾಗೆ ಮಾಡೋಣ. ಸದನ ನಡೆಯಬೇಕು. ಮೂರು ವರ್ಷದ ನಂತರ ಅಪರೂಪಕ್ಕೆ ಇಲ್ಲಿ ಅಧಿವೇಶನ ಸಮಾವೇಶಗೊಂಡಿದೆ. ರಾತ್ರಿ ಹತ್ತು ಗಂಟೆಯಾದರೂ ಪರವಾಗಿಲ್ಲ ನಡೆಸಿ. ನಾವು ಕುಳಿತುಕೊಳ್ಳುವುದಕ್ಕೆ ತಯಾರಿದ್ದೇವೆ.

**ಸಭಾಪತಿಯವರು:-** ಊಟಕ್ಕೆ ಹೋಗಿ ಬಂದು ಮತ್ತೆ ಸೇರೋಣ. ನಿನ್ನೆಯ ಅಜೆಂಡಾ ಹಾಗೆಯೇ ಉಳಿದಿದೆ; ಇವತ್ತಿನ ಅಜೆಂಡಾ ಕೂಡ ಉಳಿದಿದೆ. ಅಜೆಂಡಾ ಮುಗಿಸದೇ ಇದ್ದರೆ ಇದು ಮುಂದುವರೆಯುತ್ತಲೇ ಹೋಗುತ್ತವೆ. ಅಲ್ಲದೇ ಊರಿಗೆ ಹೋಗುವವರು ರಾತ್ರಿಯೇ ಹೋಗುತ್ತಾರೆ ಅಲ್ಲವೇ? ಮೂರು ಗಂಟೆಗೆ ಮತ್ತೆ ಸೇರೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಈಗ ಮುಗಿಸಿ ಸೋಮವಾರ ಸೇರೋಣ. ಕೆಳಮನೆಯ ಕಲಾಪ ಕೂಡ ಮುಗಿದಿದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಬೆಂಗಳೂರಿನಲ್ಲಿ ಅಧಿವೇಶನ ನಡೆಯುವಾಗ, ಬಾಗಲಕೋಟೆಗೆ ಹೋಗಬೇಕು ಎಂದು ನಾವು ಹೇಳುತ್ತೇವೆಯೇ? ರಾತ್ರಿ 12 ಗಂಟೆಯವರೆಗಾದರೂ ಕುಳಿತುಕೊಳ್ಳುತ್ತೇವೆ. ನೀವೂ ಕುಳಿತುಕೊಳ್ಳಿ. ಇಲ್ಲಿ ಕುಳಿತುಕೊಳ್ಳುವುದಕ್ಕೆ ನಿಮಗೇನಾಗಿದೆ? ಮಾನ್ಯ ಸಭಾಪತಿಗಳೆ, ಮತ್ತೆ ಮೂರು ಗಂಟೆಗೆ ಸಮಾವೇಶಗೊಳ್ಳೋಣ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೆ, ನಾವು ಎರಡು ದಿನಗಳಿಂದ ಒಂದು ಮಹತ್ತರವಾದ ವಿಷಯವನ್ನಿಟ್ಟುಕೊಂಡು ಧರಣಿ ಮಾಡುತ್ತಿದ್ದೇವೆ. ನಿನ್ನೆ ತಾವು ತಮ್ಮ ಪೀಠದಿಂದ, ಬೇರೆ ರೂಪದಲ್ಲಿ ಈ ವಿಷಯವನ್ನು ತನ್ನಿ, ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ, ಎಲ್ಲರೂ ತಮ್ಮ ಸ್ಥಾನಕ್ಕೆ ಬನ್ನಿ ಎಂದು ಆದೇಶ ಮಾಡಿದಿರಿ. ಆಗ ನಾವು ನಿಮ್ಮ ಮಾತನ್ನು ಕೇಳಿದೆವು. ನಾವು, ನಿಯಮ 68ರ ಅಡಿ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ಕೇಳಿದ್ದೇವೆ. ಇದು ಬಹಳಷ್ಟು ಜರೂರಾಗಿದೆ. ಇಡೀ ರಾಜ್ಯದ ಜನರು ಈ ಕಡೆ ನೋಡುತ್ತಿದ್ದಾರೆ. ತಾವು ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು**:- ಈಗ ಸದನವನ್ನು ಊಟಕ್ಕೆಂದು ಮೂರು ಗಂಟೆಯ ತನಕ ಮುಂದೂಡೋಣ.

**ಶ್ರೀ ಎಸ್.ಆರ್.ಪಾಟೀಲ್**:- ಮಾನ್ಯ ಸಭಾಪತಿಗಳೆ, ಈಗ ಮುಂದೂಡಿ, ಮತ್ತೆ ಮೂರು ಗಂಟೆಗೆ ಸೇರೋಣ.

**ಸಭಾಪತಿಯವರು**:- ಆಗಬಹುದು. ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವನ್ನು ಮಧ್ಯಾಹ್ನ 2 ಗಂಟೆ 13 ನಿಮಿಷದಿಂದ ಮಧ್ಯಾಹ್ನ 3.00 ಗಂಟೆಯವರೆಗೆ ಮುಂದೂಡಲಾಯಿತು)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1156/17-12-2021/3-10/bkp-gr

**(ಭೋಜನ ವಿರಾಮಕ್ಕೆ ಮಧ್ಯಾಹ್ನ 2 ಗಂಟೆ 13 ನಿಮಿಷಕ್ಕೆ ಮುಂದಡಲ್ಪಟ್ಟ ಸದನವು ಭೋಜನ ವಿರಾಮದ ನಂತರ ಪುನಃ ಮಧ್ಯಾಹ್ನ 3 ಗಂಟೆ 12 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ವಾರದ ಕಡೆ ದಿನ ಅರ್ಧ ದಿನಕ್ಕೆ ಮುಕ್ತಾಯ ಮಾಡುವ ಪರಂಪರೆ ಇದೆ ಮತ್ತು ಅವರವರ ಊರುಗಳಿಗೆ ಹೋಗಬೇಕಾಗಿರುತ್ತದೆ.

**ಸಭಾಪತಿಯವರು:-** ಈಗ ಗಮನಸೆಳೆಯುವ ಸೂಚನೆ ಇದೆ. ಅದನ್ನು ಮುಗಿಸುವಲ್ಲಿ ಸಭಾ ನಾಯಕರನ್ನು ಕೇಳೋಣ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಇದಕ್ಕೆ ಸಂಬಂಧಪಟ್ಟ ಸಚಿವರು ಯಾರು ಇರುವುದಿಲ್ಲ. ಇಲ್ಲದಿದ್ದರೆ ಉದ್ದೇಶವೇ ಸಫಲವಾಗುವುದಿಲ್ಲ. ದಯಮಾಡಿ ಸದನವನ್ನು ಸೋಮವಾರಕ್ಕೆ ಮುಂದೂಡುವುದು ಸೂಕ್ತವೆನಿಸುತ್ತಿದೆ.

**ಶ್ರೀ ಎಂ.ನಾರಾಯಣ ಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಎರಡು ದಿನಗಳಿಂದ ಒಂದು ಮಹತ್ತರವಾದ ವಿಷಯವನ್ನು ಪ್ರಸ್ತಾಪ ಮಾಡಿ ಸಚಿವರು ರಾಜಿನಾಮೆ ಕೊಡಬೇಕೆಂದು ಕೇಳಿದ್ದೆವು.

**ಸಭಾಪತಿಯವರು:-** ಒಂದು ನಿಮಿಷ ಕೇಳಿ, ನಮ್ಮ ಅಜೆಂಡಾದಲ್ಲಿ ಏನಿದೆ, ಅದನ್ನು ಬಿಟ್ಟು ಮಾತನಾಡಲಿಕ್ಕೆ ನಾನು ಬಿಡುವುದಿಲ್ಲ. ನಮ್ಮ ಅಜೆಂಡಾದಲ್ಲಿ ನಿಮ್ಮದು ಏನಿದೆ?

**ಶ್ರೀ ಎಂ.ನಾರಾಯಣ ಸ್ವಾಮಿ:** ಮಾನ್ಯ ಸಭಾಪತಿಯವರೆ, ಇದು ಅಜೆಂಡಾ ಪ್ರಶ್ನೆ ಅಲ್ಲ. ಇದು ಬಹಳ ಮಹತ್ತರವಾದಂತಹ ವಿಷಯ. ಇದರ ವಿಷಯವಾಗಿ ಇಡೀ ರಾಜ್ಯ ಈ ಕಡೆ ನೋಡುತ್ತಿದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಸಭಾಪತಿಯವರು:-** ಒಂದು ನಿಮಿಷ ಕೇಳಿ, ಯಾವುದೇ ಒಂದು ವಿಷಯ ಅಜೆಂಡದಲ್ಲಿದ್ದಾಗ ನಾವು ಕೇಳಬೇಕಾಗುತ್ತದೆ. ಬೇಕು ಬೇಕಾದಾಗ ಮಾತನಾಡಲಿಕ್ಕೆ ಇದು ಧರ್ಮಶಾಲೆಯೇ?

**ಶ್ರೀ ಎಂ.ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಅಜೆಂಡಾ ವಿಷಯವನ್ನು ಕೇಳಲಿಲ್ಲ. ಇದ ಮಹತ್ತರವಾದ ವಿಷಯ. ಇದು ಮಹತ್ತರ ವಿಷಯವಾದ್ದರಿಂದ ಕೇಳುತ್ತಿದ್ದೇನೆ. ಬಾವಿಯಿಂದ ಹೊರಗಡೆ ಬನ್ನಿ ನಾನು ಅವಕಾಶ ಕೊಡುತ್ತೇನೆ ಎಂದು ತಾವು ಹೇಳಿದ್ದರಿಂದ ಕೇಳುತ್ತಿದ್ದೇವೆ.

**ಸಭಾಪತಿಯವರು:-** ಒಂದು ನಿಮಿಷ ಕೇಳಿ, ಇದಕ್ಕೆ ಒಂದು ನೋಟೀಸ್ ಕೊಡಿ.

**ಎಂ.ನಾರಾಯಣ ಸ್ವಾಮಿ:-** ನಾವು ನಿನ್ನೆಯೇ ಕೊಟ್ಟಿದ್ದೇವೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ,

**ಸಭಾಪತಿಯವರು:-** ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ ಯವರೆ, ಒಂದು ನಿಮಿಷ ಕೇಳಿ.

**ಶ್ರೀ ಎಂ.ನಾರಾಯಣ ಸ್ವಾಮಿ:** ನಾವು ಊಟಕ್ಕೆ ಹೋಗುವ ಮುಂಚೆಯೇ ಕೇಳಿದ್ದೆವು. ಆಗ ಆಯಿತು, ಆಮೇಲೆ ತೆಗೆದುಕೊಳ್ಳೋಣವೆಂದು ಹೇಳಿದ್ದೀರಿ.

**ಸಭಾಪತಿಯವರು:-** ನೀವು ನಿಯಮ 68ರ ಬಗ್ಗೆ ಮಾತನಾಡುತ್ತೀರಾ ಎಂದು ತಿಳಿದುಕೊಂಡಿದ್ದೆ.

**ಶ್ರೀ ಎಂ.ನಾರಾಯಣ ಸ್ವಾಮಿ:** ನಾವು ನಿಯಮ 68ರಡಿಯಲ್ಲಿ ನೋಟೀಸ್ ಕೊಟ್ಟಿದ್ದೇವೆ.

**ಸಭಾಪತಿಯವರು:-** ನಾನು ನಿಮಗೆ ಅವಕಾಶವನ್ನು ಕೊಟ್ಟಿರುವುದಿಲ್ಲ. ಅಜೆಂಡಾ ತೆಗೆದು ನೋಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಶ್ರೀಯುತ ನಾರಾಯಣಸ್ವಾಮಿಯವರೆ ಅಜೆಂಡಾದಲ್ಲಿ ಇಲ್ಲದೇ ಇರುವುದನ್ನು ಹೇಗೆ ತೆಗೆದುಕೊಳ್ಳುವುದಕ್ಕೆ ಆಗುತ್ತದೆ ಹೇಳಿ.

**(ಗೊಂದಲ)**

**ಸಭಾಪತಿಯವರು:-** ಸಭಾನಾಯಕರೆ, ಒಂದು ನಿಮಿಷ. ನೋಡಿ ಹೇಳುತ್ತೇನೆ. ಮಧ್ಯಾಹ್ನ1-30 ಕ್ಕೆ ನೋಟೀಸ್ ಕೊಟ್ಟಿದ್ದೀರಿ. ಮಧ್ಯಾಹ್ನ1-30 ರವರೆಗೆ ಸದನ ನಡೆದಿದೆ. ನಂತರ ಇದನ್ನು ತೆಗೆದುಕೊಂಡಿದ್ದಾರೆ. ಮಧ್ಯಾಹ್ನ1-30 ಕ್ಕೆ ಕೊಟ್ಟು ಹೀಗೆ ಏತಕ್ಕೆ ಮಾತನಾಡುತ್ತೀರಿ?

**ಶ್ರೀ ಎಂ.ನಾರಾಯಣ ಸ್ವಾಮಿ:** ಈಗ ಇಡೀ ರಾಜ್ಯ ಈ ಕಡೆ ನೋಡುತ್ತಿದೆ.

**ಸಭಾಪತಿಯವರು:-** ನಾನು ಇದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಒಂದು ನಿಮಿಷ ಹೇಳುತ್ತೇನೆ. ಇದು ಅವರದ್ದು ಯಾವುದು ರೆಕಾರ್ಡ್‌ಗೆ ಹೋಗಬಾರದು.

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ಅಜೆಂಡಾದಲ್ಲಿ ಇಲ್ಲದ ಇರತಕ್ಕಂತಹ ವಿಷಯವನ್ನು ಮಾತನಾಡಲಿಕ್ಕೆ ಅವಕಾಶವನ್ನು ಕೊಡಬಾರದು.

**ಸಭಾಪತಿಯವರು:-** ಅಜೆಂಡಾದಲ್ಲಿ ಇಲ್ಲದೆ ಇರುವುದರಿಂದ ನಾನು ಇದಕ್ಕೆ ಅವಕಾಶವನ್ನು ಕೊಡುವುದಿಲ್ಲ

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಅಜೆಂಡಾದಲ್ಲಿ ಇಲ್ಲದೆ ಇರುವ ವಿಷಯಕ್ಕೆ ಈ ರೀತಿಯಲ್ಲಿ ಎರಡೆರಡು ದಿನ ಸಮಯವನ್ನು ನಷ್ಟ ಮಾಡುವುದು ಸರಿಯಲ್ಲ.

**(ಗೊಂದಲ)**

**ಸಭಾಪತಿಯವರು:-** ಈಗ ಸದನವನ್ನು 20ನೇ ತಾರೀಖು ಸೋಮವಾರ ಬೆಳಗ್ಗೆ 11-00 ಗಂಟೆಯವರೆಗೆ ಮುಂದೂಡಲಾಗಿದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಸದನವು ಮಧ್ಯಾಹ್ನ 3 ಗಂಟೆ 14 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 20ನೇ ಡಿಸೆಂಬರ್ ಮಾಹೆ 2021ರ ಸೋಮವಾರದಂದು ಬೆಳಗ್ಗೆ 11-00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

**<><><>**

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”